# ಕುರ್‌ಆನ್ ಮಾತ್ರ ಸಾಕೇ?



Chilman Zahir

# ಕುರ್‌ಆನ್ ಮಾತ್ರ ಸಾಕೇ?

**‘ಹದೀಸ್ ಹಾಗೂ ಸುನ್ನ’ ಎಂಬುವವುಗಳನ್ನು ಇಸ್ಲಾಮಿನ ಎರಡನೇ ಮೂಲಾಧಾರವಾಗಿ ಅಂಗೀಕರಿಸುವುದರ ಬಗ್ಗೆ ಕುರ್‌ಆನಿನ ಬೆಳಕಿನಲ್ಲೊಂದು ವಿಮರ್ಶಣೆ**

*“ಸ್ಥಿರತೆಯುಳ್ಳಂತಹ ಹಾಗೂ ಸ್ವತಃ ಪುನರಾವರ್ತಿಸುವ ಅತ್ಯುತ್ತಮ ಹದೀಸನ್ನು (ಅಹ್ಸನಲ್ ಹದೀಸ್) ಅಲ್ಲಾಹನು ಒಂದು ಗ್ರಂಥದ ರೂಪದಲ್ಲಿ ಅವತೀರ್ಣಗೊಳಿಸಿದ್ದಾನೆ.” (ಕುರ್‌ಆನ್ - 39:23)*

*“ ಇವುಗಳು ನಾವು ನಿಮಗೆ ಸತ್ಯತೆಯೊಂದಿಗೆ ಓದಿಕೇಳಿಸುತ್ತಿರುವ ಅಲ್ಲಾಹನ ಅವತೀರ್ಣವಾಗಿದೆ; ಅಲ್ಲಾಹನ ಹಾಗೂ ಅವನ ವಚನಗಳ ಹೊರತು ಇತರ ಯಾವ ಹದೀಸುಗಳನ್ನು ಅವರು ವಿಶ್ವಾಸವಿಡುತ್ತಾರೆ?” (ಕುರ್‌ಆನ್ - 45:6)*

First Edition: April 2012

chilmanzahir@yahoo.com

ಭಾಗ ಒಂದು

# ಕುರ್‌ಆನ್, ಹದೀಸ್ ಮತ್ತು ಇಸ್ಲಾಮ್

*ಉಲ್ಲೇಖ:*

**Quran, Hadith and Islam – By Dr. Rashad Khalifa**

# ಸಂದೇಶವಾಹಕರನ್ನು ಅನುಸರಿಸುವುದು ಕಡ್ಡಾಯವಾಗಿದೆ

قُلْ إِن كُنتُمْ تُحِبُّونَ اللّهَ فَاتَّبِعُونِي يُحْبِبْكُمُ اللّهُ وَيَغْفِرْ لَكُمْ ذُنُوبَكُمْ وَاللّهُ غَفُورٌ رَّحِيمٌ ○
قُلْ أَطِيعُواْ اللّهَ وَالرَّسُولَ فإِن تَوَلَّوْاْ فَإِنَّ اللّهَ لاَ يُحِبُّ الْكَافِرِينَ○

*"(ಓ ಸಂದೇಶವಾಹಕರೇ) ಹೇಳಿರಿ, 'ನೀವು ಅಲ್ಲಾಹನನ್ನು ಪ್ರೀತಿಸುತ್ತೀರಾದರೆ, ನನ್ನನ್ನು ಅನುಸರಿಸಿರಿ, ಅಲ್ಲಾಹನು ನಿಮ್ಮನ್ನು ಪ್ರೀತಿಸುತ್ತಾನೆ ಹಾಗೂ ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ಅಲ್ಲಾಹನು ಕ್ಷಮಾಶೀಲನೂ ಕರುಣಾಮಯನೂ ಆಗಿರುತ್ತಾನೆ'. ಹೇಳಿರಿ, 'ಅಲ್ಲಾಹನನ್ನೂ, ಸಂದೇಶವಾಹಕರನ್ನೂ ಅನುಸರಿಸಿರಿ.' ಇನ್ನು ಅವರು ವಿಮುಖರಾದರೆ, ಅಲ್ಲಾಹನು ಸತ್ಯನಿಷೇಧಿಗಳನ್ನು ಪ್ರೀತಿಸುವುದಿಲ್ಲ." (3:31-32)*

وَمَن يَعْصِ اللَّهَ وَرَسُولَهُ فَإِنَّ لَهُ نَارَ جَهَنَّمَ خَالِدِينَ فِيهَا أَبَدًا○

*"ಯಾರು ಅಲ್ಲಾಹನಿಗೆ ಹಾಗೂ ಅವನ ಸಂದೇಶವಾಹಕರಿಗೆ ಅವಿಧೇಯರಾಗುತ್ತಾರೋ, ಅವರಿಗೆ ನರಕಯಾತನೆಯಿದೆ, ಅವರು ಅದರಲ್ಲಿ ಎಂದೆಂದಿಗೂ ಇರುವರು." (72:23)*

---

ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವುದು ಎಂದರೆ ಏನು? ಅದು ಬೇರೆ ಬೇರೆಯೇ? ಕುರ್‌ಆನ್ ಹೀಗೆ ಹೇಳುತ್ತದೆ:

مَّنْ يُطِعِ الرَّسُولَ فَقَدْ أَطَاعَ اللّهَ

*"ಸಂದೇಶವಾಹಕರನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು" (4:80)*

وَمَا يَنطِقُ عَنِ الْهَوَى○

*"ಅವರು (ಸಂದೇಶವಾಹಕರು) ತನ್ನ ಸ್ವಚಿತ್ತದಿಂದ ನುಡಿಯುವುದಿಲ್ಲ" (53:3)*

إِنْ أَتَّبِعُ إِلاَّ مَا يُوحَى إِلَيَّ

*"ನಾನಂತು ನನಗೆ ಕಳುಹಿಸಲ್ಪಡುವ ಅವತೀರ್ಣಗಳನ್ನು ಮಾತ್ರ ಅನುಸರಿಸುವವನಾಗಿದ್ದೇನೆ." (10:15)*

# ಕೇವಲ ಕುರ್‌ಆನಿನ ಆಧಾರದಲ್ಲಿ ಪ್ರವಾದಿ ಮುಹಮ್ಮದರ ಚಿತ್ರಣ

وَأَنزَلْنَا إِلَيْكَ الْكِتَابَ بِالْحَقِّ مُصَدِّقًا لِّمَا بَيْنَ يَدَيْهِ مِنَ الْكِتَابِ وَمُهَيْمِنًا عَلَيْهِ فَاحْكُم بَيْنَهُم بِمَا أَنزَلَ اللّهُ وَلاَ تَتَّبِعْ أَهْوَاءَهُمْ عَمَّا جَاءَكَ مِنَ الْحَقِّ..... وَأَنِ احْكُم بَيْنَهُم بِمَآ أَنزَلَ اللّهُ وَلاَ تَتَّبِعْ أَهْوَاءَهُمْ وَاحْذَرْهُمْ أَن يَفْتِنُوكَ عَن بَعْضِ مَا أَنزَلَ اللّهُ إِلَيْكَ..... أَفَحُكْمَ الْجَاهِلِيَّةِ يَبْغُونَ وَمَنْ أَحْسَنُ مِنَ اللّهِ حُكْمًا لِّقَوْمٍ يُوقِنُونَ○

*"ನಾವು ಈ ಗ್ರಂಥವನ್ನು ಸತ್ಯದೊಂದಿಗೆ ಅವತೀರ್ಣಗೊಳಿಸಿದ್ದೇವೆ. ಇದು ಗ್ರಂಥವಾಗಿ ಪ್ರಸ್ತುತವಿರುವವುಗಳನ್ನು ದೃಢೀಕರಿಸುತ್ತದೆ ಮತ್ತು ಅದರ ಸಂರಕ್ಷಕವೂ ಆಗಿದೆ. ಆದುದರಿಂದ ನೀವು ಅಲ್ಲಾಹನಿಂದ ಅವತೀರ್ಣಗೊಂಡಿರುವುದರ (ಈ ಗ್ರಂಥ) ಪ್ರಕಾರ ಅವರ ನಡುವೆ ತೀರ್ಮಾನಿಸಿರಿ. ನಿಮ್ಮ ಕಡೆಗೆ ಬಂದಿರುವಂತಹ ಸತ್ಯದ ಬದಲಾಗಿ ಅವರ ಇಚ್ಛೆಗಳನ್ನು ಅನುಸರಿಸಬೇಡಿರಿ..... ಮತ್ತು ನೀವು ಅಲ್ಲಾಹನಿಂದ ಅವತೀರ್ಣಗೊಂಡಿರುವುದರ (ಈ ಗ್ರಂಥದ) ಪ್ರಕಾರ ಅವರ ನಡುವೆ ತೀರ್ಮಾನಿಸಿರಿ ಹಾಗೂ ಅವರ ಇಚ್ಛೆಗಳನ್ನು ಅನುಸರಿಸಬೇಡಿರಿ, ಮತ್ತು ಅವರು ಅಲ್ಲಾಹನಿಂದ ಅವತೀರ್ಣಗೊಂಡಿರುವುದರಿಂದ (ಈ ಗ್ರಂಥದಿಂದ) ನಿಮ್ಮನ್ನು ದಿಕ್ಕುಗೆಡುಸುವುದರ ಬಗ್ಗೆ ಎಚ್ಚರಿಕೆ ವಹಿಸಿರಿ..... ಅವರು ಅಜ್ಞಾನದ ಕಾನೂನುಗಳನ್ನು ಇಚ್ಛಿಸುತ್ತಿದ್ದಾರೆಯೇ? ಪ್ರಾಮಾಣಿಕರಾದ ವಿಶ್ವಾಸಿಗಳಿಗೆ ಶಾಸಕನಾಗಿ ಅಲ್ಲಾಹನಿಗಿಂತ ಮಿಗಿಲಾದವನು ಯಾರು?" (5:48-50)*

# ಕುರ್‌ಆನಿನ ಹೊರತು ಇತರ ಯಾವುದೇ ಬೋಧನೆಗಳನ್ನು ನೀಡುವುದನ್ನು ಪ್ರವಾದಿ ಮುಹಮ್ಮದರಿಗೆ ನಿಷೇಧಿಸಲಾಗಿತ್ತು

إِنَّهُ لَقَوْلُ رَسُولٍ كَرِيمٍ ۝ وَمَا هُوَ بِقَوْلِ شَاعِرٍ قَلِيلًا مَّا تُؤْمِنُونَ ۝ وَلَا بِقَوْلِ كَاهِنٍ قَلِيلًا مَّا تَذَكَّرُونَ ۝ تَنزِيلٌ مِّن رَّبِّ الْعَالَمِينَ ۝ وَلَوْ تَقَوَّلَ عَلَيْنَا بَعْضَ الْأَقَاوِيلِ ۝ لَأَخَذْنَا مِنْهُ بِالْيَمِينِ ۝ ثُمَّ لَقَطَعْنَا مِنْهُ الْوَتِينَ ۝ فَمَا مِنكُم مِّنْ أَحَدٍ عَنْهُ حَاجِزِينَ ۝

*"ಇದು ಒರ್ವ ಗೌರವಾನ್ವಿತ ಸಂದೇಶವಾಹಕನ ಮಾತಾಗಿದೆ. ಇದು ಯಾವುದೇ ಕವಿಯ ಮಾತಲ್ಲ. ನೀವು ಅತ್ಯಲ್ಪವೇ ವಿಶ್ವಾಸವಿರಿಸುತ್ತೀರಿ. ಮತ್ತು ಇದು ಯಾವುದೇ ಜ್ಯೋತಿಷಿಯ ಮಾತೂ ಅಲ್ಲ. ನೀವು ಅತ್ಯಲ್ಪವೇ ಚಿಂತನೆ ನಡೆಸುತ್ತೀರಿ. (ಆದರೆ) ಇದು ಸರ್ವಲೋಕದ ಪಾಲಕನಿಂದಿರುವ ಅವತೀರ್ಣವಾಗಿದೆ. ಮತ್ತು <u>ಇವರು (ಸಂದೇಶವಾಹಕರು) ಸ್ವಯಂ ಯಾವುದಾದರೂ ಮಾತನ್ನು ಸೃಷ್ಟಿಸಿಕೊಂಡು ನಮ್ಮದೆಂದು ಹೇಳಿರುತ್ತಿದ್ದರೆ</u> – ನಾವು ಅವರಿಗೆ ಕಠಿಣವಾಗಿ ಶಿಕ್ಷಿಸುತ್ತಿದ್ದೆವು, ನಂತರ ಅವರಿಗೆ ಅವತೀರ್ಣವನ್ನು ಕಳುಹಿಸುವುದನ್ನು ನಿಲ್ಲಿಸುತ್ತಿದ್ದೆವು (ಕೆಲಸದಿಂದ ವಜಾ ಮಾಡುತ್ತಿದ್ದೆವು). ಆಗ, ನಿಮ್ಮ ಪೈಕಿ ಯಾರಿಗೂ ಅವರನ್ನು ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ." (69:40-47)*

---

ಕುರ್‌ಆನಿನ ಹೊರತು ಇತರ ಬೋಧನೆಗಳನ್ನು ನೀಡುವುದನ್ನು ಪ್ರವಾದಿ ಮುಹಮ್ಮದರಿಗೆ ನಿಷೇಧಿಸಲಾಗಿತ್ತೆಂದು ಈ ವಚನಗಳು ಅತ್ಯಂತ ಸ್ಪಷ್ಟವಾಗಿ ನಮಗೆ ಕಲಿಸುತ್ತದೆ. ಕುರ್‌ಆನಿನ ಅರಬೀ ಪಠ್ಯದ ಸಾಮರ್ಥ್ಯವನ್ನು ಇತರ ಯಾವುದೇ ಭಾಷೆಗೆ ಸಂಪೂರ್ಣವಾಗಿ ಅನುವಾದಿಸಲು ಸಾಧ್ಯವಿಲ್ಲ. ಆದರೂ, ಪ್ರವಾದಿ ಮುಹಮ್ಮದರ ಏಕೈಕ ಕರ್ತವ್ಯವು – ಕುರ್‌ಆನನ್ನು, ಸಂಪೂರ್ಣ ಕುರ್‌ಆನನ್ನು, <u>ಕೇವಲ ಕುರ್‌ಆನನ್ನು</u> "ತಲುಪಿಸುವುದು" ಮಾತ್ರವಾಗಿತ್ತು – ಎಂಬುವುದನ್ನು ಇಂತಹ ಪ್ರಬಲವಾದ ಹಾಗೂ ಸ್ಪಷ್ಟವಾದ ಶಬ್ದಗಳು ವ್ಯಕ್ತಪಡಿಸುತ್ತದೆ.

## ಕುರ್‌ಆನಿನಿಂದ ವಿಪಥಗೊಳ್ಳದಿರಲು ಮುಹಮ್ಮದರಿಗೆ ಆದೇಶಿಸಲಾಗಿತ್ತು. ವಿಚಲಿತಗೊಂಡರೆ ಕಠಿಣ ಶಿಕ್ಷೆಯ ಎಚ್ಚರಿಕೆಯೂ ನೀಡಲಾಗಿತ್ತು.

---

وَإِن كَادُوا لَيَفْتِنُونَكَ عَنِ الَّذِي أَوْحَيْنَا إِلَيْكَ لِتَفْتَرِيَ عَلَيْنَا غَيْرَهُ وَإِذًا لَّاتَّخَذُوكَ خَلِيلًا ٥ وَلَوْلَا أَن ثَبَّتْنَاكَ لَقَدْ كِدتَّ تَرْكَنُ إِلَيْهِمْ شَيْئًا قَلِيلًا ٥ إِذًا لَّأَذَقْنَاكَ ضِعْفَ الْحَيَاةِ وَضِعْفَ الْمَمَاتِ ثُمَّ لَا تَجِدُ لَكَ عَلَيْنَا نَصِيرًا ٥

*"ನೀವು ನಮ್ಮ ಹೆಸರಿನಲ್ಲಿ 'ಬೇರೆ ಏನನ್ನಾದರೂ' ಕೃತಕವಾಗಿ ಆವಿಷ್ಕರಿಸುವ ಸಲುವಾಗಿ, ಅವರು ನಿಮ್ಮನ್ನು ನಮ್ಮ ಅವತೀರ್ಣದಿಂದ ಬಹುತೇಕವಾಗಿ ತಿರುಗಿಸಿಬಿಟ್ಟಿದ್ದರು. (ನೀವು ಹಾಗೆ ಮಾಡಿರುತ್ತಿದ್ದರೆ) ತಕ್ಷಣ ಅವರು ನಿಮ್ಮನ್ನು ತಮ್ಮ ಆಪ್ತ ಮಿತ್ರನನ್ನಾಗಿ ಮಾಡುತ್ತಿದ್ದರು. ನಾವು ನಿಮ್ಮನ್ನು ಬಲಪಡಿಸದೆ ಇರುತ್ತಿದ್ದರೆ, ನೀವು ಅಲ್ಪ ಸ್ವಲ್ಪವಾದರೂ ಅವರ ಕಡೆಗೆ ವಾಲಿ ಬಿಡುವವರಾಗಿದ್ದಿರಿ. ನೀವು ಹಾಗೆ ಮಾಡಿರುತ್ತಿದ್ದರೆ, ನಾವು ನಿಮಗೆ ಈ ಜೀವನದಲ್ಲೂ ಮತ್ತು ಮರಣಾನಂತರವೂ ಇಮ್ಮಡಿ ಯಾತನೆಯ ಸವಿಯುನ್ನುಣಿಸುತ್ತಿದ್ದೆವು. ಅನಂತರ ನೀವು ನಮ್ಮ ವಿರುದ್ಧ ಯಾವ ಸಹಾಯಕನನ್ನೂ ಪಡೆಯುತ್ತಿರಲಿಲ್ಲ." (17:73-75)*

---

ನಮಗೆ ಒಂದು ಉದಾಹರಣೆಯನ್ನು ಸಜ್ಜುಗೊಳಿಸಲಿಕ್ಕಾಗಿ, ತಮಗೆ ಬಂದಿರುವ ಅವತೀರ್ಣಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರಲು ಪ್ರವಾದಿ ಮುಹಮ್ಮದರಿಗೆ ಆದೇಶಿಸಲಾಗಿದೆ. ಆ ಅವತೀರ್ಣವು, 5:48-50 ರಲ್ಲಿ ಗುರುತಿಸಲಾದಂತೆ 'ಕುರ್‌ಆನ್' ಮಾತ್ರವಾಗಿದೆ. (ಪುಟ ಐದು ನೋಡಿ)

ಕುರ್‌ಆನಿನಿಂದ ಕಿಂಚಿತ್ತು ವಿಚಲಿತಗೊಂಡರೂ ಸಹ, ಅದು ತೀವ್ರವಾದ ಪ್ರತಿಕಾರಕ್ಕೆ ಎಡೆ ಮಾಡಿಕೊಡುವುದು (ಮೇಲಿನ 74ನೇ ವಚನ ನೋಡಿರಿ).

## ಯಾವುದೇ ತಿದ್ದುಪಡಿ ಮಾಡದೆ, ಬೇರೆ ಯಾವುದೇ 'ಕೃತ್ರಿಮ ಸೃಷ್ಟನೆ'ಯನ್ನು ಮಾಡದೆ, ಕೇವಲ ಕುರ್‌ಆನನ್ನು ಮಾತ್ರ ತಲುಪಿಸಲು ಪ್ರವಾದಿ ಮುಹಮ್ಮದರಿಗೆ ಆದೇಶಿಸಲಾಗಿತ್ತು.

---

وَإِذَا تُتْلَى عَلَيْهِمْ آيَاتُنَا بَيِّنَاتٍ قَالَ الَّذِينَ لاَ يَرْجُونَ لِقَاءَنَا ائْتِ بِقُرْآنٍ غَيْرِ هَـذَا أَوْ
بَدِّلْهُ قُلْ مَا يَكُونُ لِي أَنْ أُبَدِّلَهُ مِن تِلْقَاءِ نَفْسِي إِنْ أَتَّبِعُ إِلاَّ مَا يُوحَى إِلَيَّ إِنِّي أَخَافُ إِنْ
عَصَيْتُ رَبِّي عَذَابَ يَوْمٍ عَظِيمٍ ○

*"ನಮ್ಮ ಸುವ್ಯಕ್ತ ಅವತೀರ್ಣಗಳನ್ನು ಅವರಿಗೆ ಓದಿಕೇಳಿಸುವಾಗ, ನಮ್ಮನ್ನು ಭೇಟಿಯಾಗುವ ನಿರೀಕ್ಷೆ ಇಲ್ಲದವರು, "ಇದರ ಬದಲಿಗೆ ಇನ್ನೊಂದು ಕುರ್‌ಆನನ್ನು ತನ್ನಿರಿ, ಇಲ್ಲವೇ ಇದರಲ್ಲಿ ತಿದ್ದುಪಡಿ ಮಾಡಿರಿ" ಎಂದು ಹೇಳುತ್ತಾರೆ. ನೀವು ಹೇಳಿರಿ, 'ನನ್ನ ಇಚ್ಛೆಯಿಂದ ಇದರಲ್ಲೇನಾದರೂ ತಿದ್ದುಪಡಿ ಮಾಡಲು ನನಗೆ ಸಾಧ್ಯವಿಲ್ಲ. ನಾನಂತೂ ಕೇವಲ ನನಗೆ ಅವತೀರ್ಣಿಸಲ್ಪಡುವುದನ್ನು ಅನುಸರಿಸುತ್ತೇನೆ. ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ನನಗೆ ಒಂದು ಭಯಾನಕ ಯಾತನೆಯ ಭಯವಿದೆ'." (10:15)*

فَمَنْ أَظْلَمُ مِمَّنِ افْتَرَى عَلَى اللّهِ كَذِبًا أَوْ كَذَّبَ بِآيَاتِهِ إِنَّهُ لاَ يُفْلِحُ الْمُجْرِمُونَ ○
وَيَعْبُدُونَ مِن دُونِ اللّهِ مَا لاَ يَضُرُّهُمْ وَلاَ يَنفَعُهُمْ وَيَقُولُونَ هَـؤُلاَءِ شُفَعَاؤُنَا عِندَ اللّهِ
قُلْ أَتُنَبِّئُونَ اللّهَ بِمَا لاَ يَعْلَمُ فِي السَّمَاوَاتِ وَلاَ فِي الأَرْضِ سُبْحَانَهُ وَتَعَالَى عَمَّا يُشْرِكُونَ

*ಅಲ್ಲಾಹನ ಬಗ್ಗೆ ಸುಳ್ಳನ್ನು ಸೃಷ್ಟಿಸುವವನ ಅಥವಾ ಅವನ ಅವತೀರ್ಣವನ್ನು ನಿರಾಕರಿಸುವವನಿಗಿಂತ ದೊಡ್ಡ ಅಕ್ರಮಿಯು ಇನ್ನಾರಿರಬಹುದು? ನಿಶ್ಚಯವಾಗಿಯೂ ಅಪರಾಧಿಗಳು ಎಂದಿಗೂ ವಿಜಯಿಗಳಾಗರಾರರು. ಮತ್ತು ಅವರು ಅಲ್ಲಾಹನನ್ನು ಬಿಟ್ಟು ಇವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದವರನ್ನು ಸೇವೆಮಾಡುತ್ತಾರೆ ಮತ್ತು 'ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸು ಮಾಡುವವರು' ಎಂದು ಹೇಳುತ್ತಾರೆ. ಹೇಳಿರಿ 'ಅಲ್ಲಾಹನು ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ತಿಳಿಯದಂತಹ ಸುದ್ದಿಯನ್ನು ನೀವು ಅವನಿಗೆ ತಿಳಿಯಪಡಿಸುತ್ತೀರಾ?' ಇವರು ಮೂರ್ತೀಕರಿಸುತ್ತಿರುವವುಗಳಿಂದ ಅಲ್ಲಾಹನು ಅತ್ಯುನ್ನತನಾಗಿದ್ದಾನೆ." (10:17-18)*

# ಏಕ ದೇವ - ಏಕ ಮೂಲ

ದೀನಿನ ಏಕೈಕ ಮೂಲವು ಕುರ್‌ಆನ್, ನಿರ್ದಿಷ್ಟವಾಗಿ ಕುರ್‌ಆನ್ ಮಾತ್ರ ಆಗಿದೆ ಎಂದು ಸರ್ವಶಕ್ತನಾದ ನಮ್ಮ ಸೃಷ್ಟಿಕರ್ತನು ಆಜ್ಞಾಪಿಸುತ್ತಾನೆ.

ಇಷ್ಟೇ ಅಲ್ಲದೇ, ದೀನಿನ ಮಾರ್ಗದರ್ಶನವಾಗಿ ಕುರ್‌ಆನ್ ಬಾಹಿರ ಮೂಲಗಳನ್ನು ಸಮ್ಮತಿಸುವುದು – ಅಲ್ಲಾಹನ ಜೊತೆಗೆ ಇತರ ದೇವರನ್ನು ಸಂಯೋಜಿಸಿಕೊಳ್ಳುವುದಕ್ಕೆ ಸಮನಾಗಿದೆ ಎಂದು ನಮಗೆ ತಿಳಿಸಲಾಗಿದೆ:

قُلْ أَيُّ شَيْءٍ أَكْبَرُ شَهَادَةً قُلِ اللّهُ شَهِيدٌ بِيْنِي وَبَيْنَكُمْ وَأُوحِيَ إِلَيَّ هَذَا الْقُرْآنُ لِأُنذِرَكُم بِهِ وَمَن بَلَغَ أَئِنَّكُمْ لَتَشْهَدُونَ أَنَّ مَعَ اللّهِ آلِهَةً أُخْرَى قُل لاَّ أَشْهَدُ قُلْ إِنَّمَا هُوَ إِلَـهٌ وَاحِدٌ وَإِنَّنِي بَرِيءٌ مِّمَّا تُشْرِكُونَ○

*" 'ಯಾರ ಸಾಕ್ಷ್ಯವು ಎಲ್ಲಕ್ಕಿಂತಲೂ ಶ್ರೇಷ್ಠವಾಗಿದೆ?' ಎಂದು ಇವರೊಡನೆ ಕೇಳಿರಿ. 'ನನ್ನ ಮತ್ತು ನಿಮ್ಮ ನಡುವೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ ಮತ್ತು ಈ ಕುರ್‌ಆನ್ ನಿಮಗೂ ಇನ್ನು ಇದು ಯಾರಿಗೆಲ್ಲಾ ತಲುಪುತ್ತದೋ ಅವರೆಲ್ಲರಿಗೂ ಎಚ್ಚರಿಕೆ ನೀಡಲಿಕ್ಕಾಗಿ ನನ್ನ ಕಡೆಗೆ ಅವತೀರ್ಣಗೊಳಿಸಲಾಗಿದೆ', ಎಂದು ಹೇಳಿರಿ. ಆದಾಗ್ಯೂ, ನೀವು (ಕುರ್‌ಆನಿನ ಹೊರತಾದ ಇತರ ಮೂಲಗಳನ್ನು ಎತ್ತಿಹಿಡಿಯುವ ಮೂಲಕ) ನಿಶ್ಚಯವಾಗಿಯೂ ಅಲ್ಲಾಹನ ಜೊತೆಗೆ ಇತರ ದೇವರುಗಳು ಇದ್ದಾರೆಂದು ಸಾಕ್ಷ್ಯ ನುಡಿಯುತ್ತಿದ್ದೀರಿ. ಹೇಳಿರಿ, 'ನಾನು (ಹಾಗೆ) ಸಾಕ್ಷ್ಯ ನುಡಿಯಲಾರೆ; ಅವನು ಏಕೈಕ ದೇವನಾಗಿರುತ್ತಾನೆ, ನೀವು ಮಾಡುತ್ತಿರುವ ಈ ಮೂರ್ತಿ ಆರಾಧನೆಯನ್ನು ನಾನು ತ್ಯಜಿಸುತ್ತೇನೆ.'" (6:19)*

---

ಈ ಗಹನವಾದ ವಚನವು, ಕುರ್‌ಆನ್ ಬಾಹಿರ ಯಾವುದೇ ಮೂಲಗಳನ್ನು ಎತ್ತಿಹಿಡಿಯುವುದರ ಬಗ್ಗೆ ಹಾಗೂ ಹಾಗೆ ಮಾಡುವುದು ಅಲ್ಲಾಹನ ಜೊತೆಗೆ ಸಹಭಾಗಿಗಳನ್ನು (ಅಥವಾ ಮೂರ್ತಿಗಳನ್ನು) ಸಂಯೋಜಿಸುವುದಕ್ಕೆ (ಅಥವಾ ಮೂರ್ತಿ ಆರಾಧನೆ ಅಥವಾ ಶಿರ್ಕ್ ಮಾಡುವುದಕ್ಕೆ) ಸಮನಾಗಿದೆ ಎಂದು ವಿಶ್ವಾಸಿಗಳಿಗೆ ಎಚ್ಚರಿಕೆ ನೀಡುತ್ತಿದೆ.

# ಏಕ ದೇವ - ಏಕ ಮೂಲ

---

ಕಠೋರ ಸಾಧ್ಯ ಶೈಲಿಯಲ್ಲಿ, ಕುರ್‌ಆನನ್ನು, ಪೂರ್ಣ ಕುರ್‌ಆನನ್ನು, ಕೇವಲ ಕುರ್‌ಆನನ್ನು ಮಾತ್ರ ಎತ್ತಿಹಿಡಿಯಲು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ.

ದೀನಿನ ಮಾರ್ಗದರ್ಶಕ್ಕಾಗಿ ಕುರ್‌ಆನನ್ನು ಏಕೈಕ ಮೂಲವಾಗಿ ಎತ್ತಿಹಿಡಿಯಲು ನಮಗೆ ಪುನರಾವರ್ತಿತವಾಗಿ ಆದೇಶಿಸಲಾಗಿದೆ.

ಕುರ್‌ಆನನ್ನು ಹೊರತು ಪಡಿಸಿ ಇತರ ಯಾವುದೇ ಮೂಲವನ್ನು ಅನುಸರಿಸುವುದು, ಅಲ್ಲಾಹನ ಜೊತೆ ಇತರ ಮೂರ್ತಿಗಳನ್ನು ಸಂಯೋಜಿಸುವುದಕ್ಕೆ ಸರಿಸಮಾನವಾಗಿದೆ ಎಂದು ನಮಗೆ ಪದೇ ಪದೇ ಜ್ಞಾಪಿಸಿ ಕೊಡಲಾಗಿದೆ.

ಸೂರಃ 17ರ 22ರಿಂದ 38ರ ವರೆಗಿನ ವಚನಗಳು ಕುರ್‌ಆನಿನ ಕೆಲವು ಪ್ರಮುಖ ಅನುಶಾಸನಗಳನ್ನು ಪ್ರತಿನಿಧಿಸುತ್ತದೆ. ತದನಂತರ ತಕ್ಷಣವೇ ಈ ಕೆಳಗಿನ ವಚನವನ್ನು ನಾವು ಕಾಣುತ್ತೇವೆ:

ذَٰلِكَ مِمَّا أَوْحَىٰ إِلَيْكَ رَبُّكَ مِنَ الْحِكْمَةِ وَلَا تَجْعَلْ مَعَ اللَّهِ إِلَٰهًا آخَرَ فَتُلْقَىٰ فِي جَهَنَّمَ مَلُومًا مَّدْحُورًا ○

*"ಇವುಗಳು ನಿನ್ನ ಪ್ರಭು ನಿನ್ನ ಮೇಲೆ ಯುಕ್ತಿಪೂರ್ಣವಾಗಿ ಅವತೀರ್ಣಗೊಳಿಸಿರುವವುಗಳಾಗಿವೆ. ಮತ್ತು ನೀನು (ಇದರ ಹೊರತು ಇತರ ಮೂಲಗಳನ್ನು ಅನುಸರಿಸುವ ಮೂಲಕ) ಅಲ್ಲಾಹನ ಜೊತೆಗೆ ಇನ್ನಾವ ಮೂರ್ತಿಗಳನ್ನು ಮಾಡಿಕೊಳ್ಳಬೇಡ. ಹಾಗೆ ಮಾಡಿದಲ್ಲಿ, ನೀನು ನಿಂದ್ಯನಾಗಿ ಸಕಲ ಒಳಿತಿನಿಂದ ವಂಚಿತನಾಗಿ ನರಕಕ್ಕೆ ತಲ್ಲಲ್ಪಡುವೆ." (17:39)*

---

ಈ ಎಲ್ಲಾ ಸ್ಪಷ್ಟ ಅನುಶಾಸನಗಳ ಹಾಗೂ ಅತ್ಯಂತ ಕಠಿಣ ಆಜ್ಞೆಗಳ ಹೊರತಾಗಿಯೂ, 'ಹದೀಸ್ ಹಾಗೂ ಸುನ್ನ'ದ ಅನುಯಾಯಿಗಳು, ಕೇವಲ ಕುರ್‌ಆನನ್ನು ಮಾತ್ರ ಎತ್ತಿಹಿಡಿಯಲು ವಿಫಲರಾಗುವುದು ಏಕೆ?

ಸ್ಪಷ್ಟ ಆದೇಶಗಳ ಹೊರತಾಗಿಯೂ, 'ಹದೀಸ್ ಹಾಗೂ ಸುನ್ನ'ವನ್ನು ಅನುಸರಿಸುವವರು ಕೇವಲ ಕುರ್ಆನನ್ನು ಎತ್ತಿಹಿಡಿಯಲು ವಿಫಲರಾಗುವುದೇಕೇ?

ಅಲ್ಲಾಹನಲ್ಲಿ ವಿಶ್ವಾಸವಿರಿಸುವುದನ್ನು ಹಾಗೂ ಕೇವಲ ಕುರ್ಆನನ್ನು ಸಮರ್ಥಿಸುವ ಅವನ ಆಜ್ಞೆಯನ್ನು ನಿರಾಕರಿಸುವವರು, ಪೂರ್ವನಿಯೋಜಿತವಾಗಿ ಕುರ್ಆನಿನಿಂದ ಬೇರ್ಪಡಿಸಲ್ಪಡುವರು. ಆ ಎರಡು ನಿರ್ಣಾಯಕ ವಚನಗಳನ್ನು ಈ ಕೆಳಗೆ ನೀಡಲಾಗಿದೆ:

وَإِذَا قَرَأْتَ الْقُرْآنَ جَعَلْنَا بَيْنَكَ وَبَيْنَ الَّذِينَ لاَ يُؤْمِنُونَ بِالآخِرَةِ حِجَابًا مَّسْتُورًا ○
وَجَعَلْنَا عَلَى قُلُوبِهِمْ أَكِنَّةً أَن يَفْقَهُوهُ وَفِي آذَانِهِمْ وَقْرًا وَإِذَا ذَكَرْتَ رَبَّكَ فِي الْقُرْآنِ وَحْدَهُ
وَلَّوْاْ عَلَى أَدْبَارِهِمْ نُفُورًا ○

*"ನೀವು ಕುರ್ಆನನ್ನು ಪಠಿಸುವಾಗ, ಅಂತಿಮ (ದಿನ)ದಲ್ಲಿ ವಿಶ್ವಾಸವಿರಿಸದವರ ಮತ್ತು ನಿಮ್ಮ ನಡುವೆ, ನಾವು ಒಂದು ಅದೃಷ್ಯ ತೆರೆಯನ್ನು ಹಾಕಿ ಬಿಡುವೆವು. ಮತ್ತು ಅವರು ಅದನ್ನು ಗ್ರಹಿಸದಂತಾಗಲು ಅವರ ಹೃದಯಗಳ ಮೇಲೆ ಹೊದಿಕೆಯನ್ನು ಹಾಗೂ ಅವರ ಕಿವಿಗಳಲ್ಲಿ ಕಿವುಡುತನವನ್ನು ನಿರ್ಮಿಸುವೆವು. ಪರಿಣಾಮವಾಗಿ, ನೀವು* ***ಕೇವಲ*** *ಕುರ್ಆನಿನ ಮೂಲಕ ನಿನ್ನ ಪ್ರಭುವನ್ನು ಪ್ರಸ್ತಾಪಿಸುವಾಗ ಅವರು ತಿರಸ್ಕಾರದ ಮುಖ ತಿರುಗಿಸಿ ಬಿಡುವರು." (17:45-46)*

---

**ನಾವು ಇನ್ನೇನಾದರೂ ಹೇಳಬೇಕಾಗಿದೆಯೇ?**

## ನಾವು ಅಲ್ಲಾಹನಲ್ಲಿ ವಿಶ್ವಾಸವಿರಿಸುತ್ತೇವೆಯೋ ಇಲ್ಲವೋ?

ಕುರ್‌ಆನ್ ಸಮಗ್ರವಾಗಿದೆ, ವಿವರಪೂರ್ಣವಾಗಿದೆ ಹಾಗೂ ಪರಿಪೂರ್ಣವಾಗಿದೆ ಎಂದೂ, ಬೇರೆ ಯಾವುದೇ ಮೂಲವನ್ನು ಹುಡುಕಬಾರದು ಎಂದೂ ಅಲ್ಲಾಹನು ಹೇಳುತ್ತಾನೆ.

مَّا فَرَّطْنَا فِى الكِتَابِ مِن شَىْءٍ ثُمَّ إِلَى رَبِّهِمْ يُحْشَرُونَ○ وَالَّذِينَ كَذَّبُواْ بِآيَاتِنَا صُمٌّ وَبُكْمٌ
فِى الظُّلُمَاتِ مَن يَشَإِ اللّهُ يُضْلِلْهُ وَمَن يَشَأْ يَجْعَلْهُ عَلَى صِرَاطٍ مُّسْتَقِيمٍ○

*“**ನಾವು ಈ ಗ್ರಂಥದಲ್ಲಿ ಯಾವುದನ್ನೂ ಬಿಟ್ಟುಬಿಡಲಿಲ್ಲ**. ನಂತರ ಅವರು ತಮ್ಮ ಪ್ರಭುವಿನ ಕಡೆಗೆ ಒಟ್ಟುಗೂಡಿಸಲ್ಪಡುವರು. ಮತ್ತು ನಮ್ಮ ವಚನಗಳನ್ನು ಸುಳ್ಳಾಗಿಸುವವರು ಅಂಧಾಕಾರದಲ್ಲಿ ಬಿದ್ದಿರುವ ಕಿವುಡರೂ, ಮೂಕರೂ ಆಗಿದ್ದಾರೆ. ಅಲ್ಲಾಹನು ತಾನಿಚ್ಛಿಸುವವರನ್ನು ಪಥಭ್ರಷ್ಟಗೊಳಿಸುತ್ತಾನೆ ಮತ್ತು ತಾನಿಚ್ಛಿಸುವವರನ್ನು ನೇರ ಮಾರ್ಗದ ಮೇಲೆ ಮಾಡಿಬಿಡುವನು.” (6:38-39)*

أَفَغَيْرَ اللّهِ أَبْتَغِى حَكَمًا وَهُوَ الَّذِى أَنزَلَ إِلَيْكُمُ الْكِتَابَ مُفَصَّلاً

*“**ನಾನು ಅಲ್ಲಾಹನ ಹೊರತಾಗಿ ಬೇರೆ ಯಾವುದನ್ನಾದರೂ ಕಾನೂನಿನ ಮೂಲವಾಗಿ ಹುಡುಕಬೇಕೇ?** ವಾಸ್ತವದಲ್ಲಿ **ಅವನು ವಿವರಪೂರ್ಣವಾದ** ಗ್ರಂಥವೊಂದನ್ನು **ನಿಮ್ಮ ಕಡೆಗೆ ಅವತೀರ್ಣಗೊಳಿಸಿರುತ್ತಾನೆ.**” (6:114)*

وَتَمَّتْ كَلِمَتُ رَبِّكَ صِدْقًا وَعَدْلاً

*“**ನಿನ್ನ ಪ್ರಭುವಿನ ವಚನವು ಸತ್ಯ ಮತ್ತು ನ್ಯಾಯದ ದೃಷ್ಟಿಯಿಂದ ಪರಿಪೂರ್ಣವಾಗಿದೆ.**” (6:115)*

# ಅಲ್ಲಾಹನಲ್ಲಿ ವಿಶ್ವಾಸವಿರಿಸದಿದ್ದರೆ ಎದುರಿಸಬೇಕಾದ ಪರಿಣಾಮ

ಪುಟ 12ರಲ್ಲಿ ಸೂಚಿಸಿದಂತೆ, ಕುರ್‌ಆನ್ ಸಮಗ್ರವೂ, ಪರಿಪೂರ್ಣವೂ ಹಾಗೂ ವಿವರಪೂರ್ಣವೂ ಆಗಿದೆ.

ದೀನಿನ ಮಾರ್ಗದರ್ಶನವಾಗಿ ಕುರ್‌ಆನ್ ಬಾಹಿರ ಮೂಲಗಳನ್ನು ಸಮ್ಮತಿಸಬಾರದೆಂಬ ಅವನ ಆಜ್ಞೆಗಳು ಸ್ಪಷ್ಟವಾಗಿದೆ ಮತ್ತು ಕಟ್ಟುನಿಟ್ಟಾಗಿದೆ. (ಪುಟ 7 ಮತ್ತು 8ನ್ನು ನೋಡಿ).

ಈಗ, ನೀವು ಪರಿಣಾಮಗಳನ್ನು ಸ್ವೀಕರಿಸಲು ಸಿದ್ಧರಾಗಿದ್ದರೆ (ಅಥವಾ ಸಿದ್ಧರಿಲ್ಲದಿದ್ದರೂ ಸಹ), ಅಲ್ಲಾಹನಲ್ಲಿ ವಿಶ್ವಾಸವಿರಿಸುವ ಅಥವಾ ಅವನ ಹೇಳಿಕೆಗಳನ್ನು ನಿರಾಕರಿಸುವ ಮತ್ತು ಅವನ ಆಜ್ಞೆಗಳನ್ನು ಕಡೆಗಣಿಸುವ ಸಂಪೂರ್ಣ ಸ್ವಾತಂತ್ರ್ಯವು ನಿಮಗಿದೆ.

ಅಲ್ಲಾಹನ ವಚನದಲ್ಲಿ ವಿಶ್ವಾಸವಿರಿಸಲು ನಿರಾಕರಿಸುವುದು ಒಂದು ಗಂಭೀರ ಅಪರಾಧವೆಂದು ನಿಸ್ಸಂದೇಹವಾಗಿ ಒಪ್ಪಲೇಬೇಕಾಗುತ್ತದೆ. ಸೂರಃ 7ರ 40ನೇ ವಚನದಲ್ಲಿ ಇದನ್ನು ಎಷ್ಟು ಗಂಭೀರವಾಗಿ ವ್ಯಕ್ತಪಡಿಸಲಾಗಿದೆ ಎಂದು ಒಮ್ಮೆ ನೋಡಿ:

إِنَّ الَّذِينَ كَذَّبُواْ بِآيَاتِنَا وَاسْتَكْبَرُواْ عَنْهَا لاَ تُفَتَّحُ لَهُمْ أَبْوَابُ السَّمَاءِ وَلاَ يَدْخُلُونَ الْجَنَّةَ حَتَّى يَلِجَ الْجَمَلُ فِي سَمِّ الْخِيَاطِ وَكَذَلِكَ نَجْزِي الْمُجْرِمِينَ ○

*"ನಮ್ಮ ವಚನಗಳನ್ನು ಸುಳ್ಳಾಗಿಸುವವರಿಗೆ ಮತ್ತು ಅವುಗಳ ವಿರುದ್ಧ ಉದ್ಧಟತನ ತೋರಿಸುವವರಿಗೆ ಗಗನದ ದ್ವಾರಗಳು ಎಷ್ಟು ಮಾತ್ರಕ್ಕೂ ತೆರೆಯಲ್ಪಡಲಾರವು ಎಂಬುವುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ. ಅವರ ಸ್ವರ್ಗ ಪ್ರವೇಶವು ಸೂಜಿಯ ರಂಧ್ರದೊಳಗೆ ಒಂಟೆ ಪ್ರವೇಶಿಸುವಷ್ಟೇ ಅಸಂಭವ. ಅಪರಾಧಿಗಳಿಗೆ ನಮ್ಮಲ್ಲಿ ಇಂತಹ ಪ್ರತಿಫಲವೇ ಸಿಗುತ್ತದೆ." (7:40)*

---

ಆದುದರಿಂದ, ಅಲ್ಲಾಹನ ವಚನಗಳನ್ನು ಸುಳ್ಳಾಗಿಸುವವರು ಅಥವಾ ಅವುಗಳಲ್ಲಿ ವಿಶ್ವಾಸವಿರಿಸಲು ನಿರಾಕರಿಸುವವರು, ಸ್ವರ್ಗ ಪ್ರವೇಶಿಸುವುದು ವಸ್ತುಶಃ ಅಸಾಧ್ಯವಾಗಿದೆ.

# ದೈವಿಕ ಅವತೀರ್ಣದ ಪ್ರಮುಖ ಮಾನದಂಡ

<u>‘ಹದೀಸ್ ಹಾಗೂ ಸುನ್ನ’</u> ದೈವಿಕ ಅವತೀರ್ಣಗಳಾಗಿವೆ ಎಂದು ಕೆಲವು ಜನರು ವಾದಿಸುತ್ತಾರೆ. ದಿವ್ಯ ಅವತೀರ್ಣಗಳ ಮಾನದಂಡವು <u>**ನಿಷ್ಕೃಷ್ಟವಾದ ಸಂರಕ್ಷಣೆ**</u>ಯಾಗಿದೆ ಎಂದು ಸಹಜವಾಗಿ ಅವರು ಅರಿತಿಲ್ಲ. ಪ್ರವಾದಿಯವರದೆಂದು ಹೇಳಲಾಗುವ <u>‘ಹದೀಸ್ ಹಾಗೂ ಸುನ್ನ’</u> ಎಂಬುವುದು ಅಗಾಧವಾಗಿ ಭ್ರಷ್ಟಗೊಂಡಿರುವುದರಿಂದ, ಅವುಗಳಿಗೆ ದೈವಿಕ ಅವತೀರ್ಣದ ಮಾನದಂಡವನ್ನು ಎಂದಿಗೂ ಪೂರೈಸಲು ಸಾಧ್ಯವಿಲ್ಲ.

ಒಂದು ಹಡಗಿನಲ್ಲಿ ಹಿಡಿಯುವಷ್ಟು ಪ್ರಮಾಣದ <u>ಹದೀಸು</u>ಗಳ ಪುಸ್ತಕ ಬಂಡಾರಗಳಲ್ಲಿರುವ ಬಹುಪಾಲು ಹದೀಸುಗಳು ಸುಳ್ಳು ರಚನೆಗಳಾಗಿವೆ ಎಂಬುವುದು ಅಂಗೀಕೃತವಾದ ಸತ್ಯಾಂಶವಾಗಿದೆ (ಭಾಗ ಎರಡರಲ್ಲಿ ಇದನ್ನು ವಿವರಿಸಲಾಗಿದೆ).

إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ ○

*“ಈ ಉಪದೇಶವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ”. (15:9)*

وَإِنَّهُ لَكِتَابٌ عَزِيزٌ ○ لَّا يَأْتِيهِ الْبَاطِلُ مِن بَيْنِ يَدَيْهِ وَلَا مِنْ خَلْفِهِ تَنزِيلٌ مِّنْ حَكِيمٍ حَمِيدٍ ○

*“ಇದೊಂದು ಪ್ರತಾಪವುಳ್ಳ ಗ್ರಂಥವೇ ಆಗಿದೆ. ಮಿಥ್ಯವು ಇದರ ಮುಂದಿನಿಂದಲಿ, ಹಿಂದಿನಿಂದಾಗಲಿ ಇದರೊಳಗೆ ಬರಲಾರದು. ಇದು ಯುಕ್ತಿಪೂರ್ಣನೂ ಪ್ರಶಂಸಾರ್ಹನೂ ಆದವನಿಂದ ಅವತೀರ್ಣಗೊಂಡುದಾಗಿದೆ.” (41:41-42)*

---

<u>ಹದೀಸ್ ಹಾಗೂ ಸುನ್ನ</u> ದೈವಿಕ ಅವತೀರ್ಣಗಳಾಗಿವೆ ಎಂಬ ಅವರ ದಾವೆಯು ದೈವನಿಂದೆಯ ಸ್ಫುಟತೆಯಾಗಿದೆ. ಸರ್ವಶಕ್ತನಾದ ಅಲ್ಲಾಹನು ತನ್ನ ಅವತೀರ್ಣವನ್ನು ಸಂರಕ್ಷಿಸಲು ಸಮರ್ಥನಾದವನಾಗಿದ್ದಾನೆಂದು ಇವರು ತಿಳಿದಿಲ್ಲವೇ?

# ಹದೀಸ್ ಹಾಗೂ ಸುನ್ನ = 100% ಕಟ್ಟುಕಥೆ

ಕುರ್‌ಆನ್ ವಿವರಪೂರ್ಣವಾಗಿದೆ ಹಾಗೂ ಅದು ಏಕೈಕ ಮೂಲವಾಗಿದೆ ಎಂದು ಅಲ್ಲಾಹನು ಘೋಷಿಸಿದ್ದರೂ ಸಹ, ಹದೀಸ್ ಹಾಗೂ ಸುನ್ನ ಎಂಬ ಕಟ್ಟುಕಥೆಗಳನ್ನು ಅನುಸರಿಸುವಂತೆ ಬಹುಪಾಲು ಮುಸ್ಲಿಮರು ಮೋಸಗೊಳಿಸಲ್ಪಟ್ಟಿದ್ದಾರೆ.

ವೈಜ್ಞಾನಿಕ ಜಗತ್ತು ಆಧುನಿಕ ತಂತ್ರಜ್ಞಾನಗಳ ಮೂಲಕ ಸಂಶೋಧಿಸಿರುವವುಗಳನ್ನು ಮತ್ತು ನಾಗರೀಕ ಜಗತ್ತು ಪ್ರಯೋಗದ ಮೂಲಕ ಪರೀಕ್ಷಿಸಿ ತಿಳಿದುಕೊಂಡಿರುವ ಸಾರ್ವತ್ರಿಕ ಮೌಲ್ಯಗಳನ್ನು ದಾಖಲಿಸಿರುವ ಸಾವಿರಾರು ವರ್ಷಗಳ ಹಿಂದೆಯ ಈ ಕುರ್‌ಆನ್ ಗ್ರಂಥವು, ಅಧಿಕೃತವಾದ ಹಾಗೂ ಪರಿವರ್ತನೆಗೊಳ್ಳದ ಅಲ್ಲಾಹನ ವಚನಗಳಾಗಿವೆ ಎಂಬುವುದನ್ನು ಸಮರ್ಥಿಸುತ್ತಿರುವಾಗ, ಹದೀಸ್ ಹಾಗೂ ಸುನ್ನ ಎಂಬುವವುಗಳು ಕಟ್ಟುಕಥೆಗಳೆಂದು ಸರಳವಾಗಿ ಗುರುತಿಸಬಹುದು.

أَفَغَيْرَ اللّهِ أَبْتَغِى حَكَمًا وَهُوَ الَّذِى أَنْزَلَ إِلَيْكُمُ الْكِتَابَ مُفَصَّلاً... وَتَمَّتْ كَلِمَتُ رَبِّكَ
صِدْقًا وَعَدْلاً لاَّ مُبَدِّلَ لِكَلِمَاتِهِ وَهُوَ السَّمِيعُ الْعَلِيمُ○ وَإِن تُطِعْ أَكْثَرَ مَن فِى الْأَرْضِ
يُضِلُّوكَ عَن سَبِيلِ اللّهِ إِن يَتَّبِعُونَ إِلاَّ الظَّنَّ وَإِنْ هُمْ إِلاَّ يَخْرُصُونَ○

*“ನಾನು ಅಲ್ಲಾಹನ ಹೊರತಾಗಿ ಬೇರೆ ಯಾವುದನ್ನಾದರೂ ಕಾನೂನಿನ ಮೂಲವಾಗಿ ಹುಡುಕಬೇಕೇ? ವಾಸ್ತವದಲ್ಲಿ ಅವನು ವಿವರಪೂರ್ಣವಾದ ಗ್ರಂಥವೊಂದನ್ನು ನಿಮ್ಮ ಕಡೆಗೆ ಅವತೀರ್ಣಗೊಳಿಸಿರುತ್ತಾನೆ..... “ನಿನ್ನ ಪ್ರಭುವಿನ ವಚನವು ಸತ್ಯ ಮತ್ತು ನ್ಯಾಯದ ದೃಷ್ಟಿಯಿಂದ ಪರಿಪೂರ್ಣವಾಗಿದೆ. ಅವನ ಪದಗಳನ್ನು ಯಾರಿಗೂ ಬದಲಾವಣೆ ಮಾಡಲಾಗದು. ಅವನು ಸರ್ವಶ್ರುತನೂ, ಸರ್ವಜ್ಞನೂ ಆಗಿರುತ್ತಾನೆ. ನೀವು ಭೂಮಿಯಲ್ಲಿ ಹೆಚ್ಚಿನವರ (ಬಹುಮತೀಯರ) ಹೇಳಿಕೆಯಂತೆ ನಡೆದರೆ, ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿಬಿಡುವರು. ಅವರಂತೂ ಕೇವಲ ಗುಮಾನಿಯನ್ನನುಸರಿಸಿ ಊಹಾಪೋಹಗಳ ಪ್ರಕಾರ ವರ್ತಿಸುತ್ತಾರೆ.” (6:114-116)*

إِن يَتَّبِعُونَ إِلَّا الظَّنَّ وَمَا تَهْوَى الْأَنفُسُ وَلَقَدْ جَاءَهُم مِّن رَّبِّهِمُ الْهُدَى○

*“ವಾಸ್ತವದಲ್ಲಿ ಜನರು ಕೇವಲ ಊಹೆಯನ್ನು ಮತ್ತು ಸ್ವೇಚ್ಛೆಯನ್ನು ಅನುಸರಿಸುತ್ತಾರೆ. ವಸ್ತುಶಃ ಅವರ ಪ್ರಭುವಿನ ಕಡೆಯಿಂದ ಅವರ ಬಳಿಗೆ ಮಾರ್ಗದರ್ಶನವು ಬಂದಿದೆ.” (53:23)*

# ಸಂದೇಶವಾಹಕರ ಅನುಸರಣೆಯು ಷರತ್ತಿಗೆ ಒಳಪಟ್ಟಿದೆ

ಸಂದೇಶವಾಹಕರನ್ನು ಅನುಸರಿಸುವುದು ಕೇವಲ ಅವರಿಗೆ ತಲುಪುವ ಅವತೀರ್ಣದ ಸಂಬಂಧದಲ್ಲಿ ಮಾತ್ರವಾಗಿದೆ.

ಸಂದೇಶವಾಹಕರನ್ನು ಅನುಸರಿಸುವುದೆಂದರೆ – ಕುರ್‌ಆನನ್ನು, ಪೂರ್ಣ ಕುರ್‌ಆನನ್ನು, ಕೇವಲ ಕುರ್‌ಆನನ್ನು ಅನುಸರಿಸುವುದೇ ಆಗಿದೆ.

ಸಂದೇಶದ ಮೂಲವು ಅಲ್ಲಾಹನಾಗಿದ್ದರೆ ಮಾತ್ರ (ಅಂದರೆ, ಅವರು ಸಂದೇಶವಾಹಕರ ಕರ್ತವ್ಯವನ್ನು ನಿಭಾಯಿಸುತ್ತಿರುವಾಗ) ಮುಹಮ್ಮದರ ಅನುಸರಣೆಯು ಕಡ್ಡಾಯವಾಗಿದೆಯೇ ಹೊರತು, ದೋಷಕ್ಕೆ ಗುರಿಯಾಗಬಹುದಾದ ಸಾಮಾನ್ಯ ಮಾನವನಾದ ಮುಹಮ್ಮದರ ಅನುಸರಣೆಯು ಕಡ್ಡಾಯವಲ್ಲ.

ಪ್ರವಾದಿ ಮುಹಮ್ಮದರು ಸಾಮಾನ್ಯ ಮಾನವನ ನಿಟ್ಟಿನಲ್ಲಿ ಹೇಳುವುದು ಸರಿಯಾಗಿದ್ದರೆ ಮಾತ್ರ ಅನುಸರಿಸಬಹುದೆಂದು ಎಂದು ಕೆಳಗಿನ ವಚನದಲ್ಲಿ ತಿಳಿಸಲಾಗಿದೆ:

يَا أَيُّهَا النَّبِيُّ إِذَا جَاءَكَ الْمُؤْمِنَاتُ يُبَايِعْنَكَ عَلَىٰ أَن لَّا يُشْرِكْنَ بِاللَّهِ شَيْئًا وَلَا يَسْرِقْنَ وَلَا يَزْنِينَ وَلَا يَقْتُلْنَ أَوْلَادَهُنَّ وَلَا يَأْتِينَ بِبُهْتَانٍ يَفْتَرِينَهُ بَيْنَ أَيْدِيهِنَّ وَأَرْجُلِهِنَّ وَلَا يَعْصِينَكَ فِي مَعْرُوفٍ فَبَايِعْهُنَّ وَاسْتَغْفِرْ لَهُنَّ اللَّهَ إِنَّ اللَّهَ غَفُورٌ رَّحِيمٌ ○

*"ಪ್ರವಾದಿಯರೇ, ಸತ್ಯವಿಶ್ವಾಸಿನಿಯರು ನಿಷ್ಠೆಯ ಕರಾರು ಮಾಡಲು ನಿಮ್ಮ ಬಳಿಗೆ ಬಂದು, ತಾವು ಅಲ್ಲಾಹನೊಂದಿಗೆ ಯಾವುದನ್ನೂ ಮೂರ್ತೀಕರಿಸಲಾರೆವು, ವ್ಯಭಿಚಾರವೆಸಗಲಾರೆವು, ತಮ್ಮ ಮಕ್ಕಳನ್ನು ವಧಿಸಲಾರೆವು, ತಾವೇ ಸುಳ್ಳಾರೋಪಗಳನ್ನು ಸೃಷ್ಟಿಸಿ ತರಲಾರೆವು ಮತ್ತು ಸತ್ಕಾರ್ಯದ ವಿಷಯದಲ್ಲಿ ನಿಮ್ಮ ಆಜ್ಞೆಗಳನ್ನು ಉಲ್ಲಂಘನೆ ಮಾಡಲಾರೆವು ಎಂದು ಪ್ರತಿಜ್ಞೆ ಮಾಡಿದಾಗ, ಅವರಿಂದ ಕರಾರನ್ನು ಸ್ವೀಕರಿಸಿಕೊಳ್ಳಿರಿ ಮತ್ತು ಅವರಿಗಾಗಿ ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡಿರಿ. ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ." (60:12)*

---

ಆದುದರಿಂದ, ಪ್ರವಾದಿ ಮುಹಮ್ಮದರನ್ನು ಕೇವಲ ಸಾಮಾನ್ಯ ಮಾನವನ ನೆಲೆಯಲ್ಲಿ ಅನುಸರಿಸುವುದು (ಸಂದೇಶವಾಹಕರಾಗಿ ಅಲ್ಲ), ಅವರು ಹೇಳುವುದು ಸರಿಯಾಗಿದ್ದರೆ ಮಾತ್ರವಾಗಿದೆ.

# ಸಂದೇಶವಾಹಕರ ಅನುಸರಣೆಯು ಷರತ್ತಿಗೆ ಒಳಪಟ್ಟಿದೆ

ಮೂಲವು ಅಲ್ಲಾಹನಾಗಿದ್ದರೆ ಮಾತ್ರ ಪ್ರವಾದಿ ಮುಹಮ್ಮದರ ಅನುಸರಣೆಯು ಕಡ್ಡಾಯವಾಗಿದೆ ಎಂದು ಕುರ್‌ಆನ್ ಒತ್ತು ನೀಡಿ ಹೇಳುತ್ತದೆ. ಪ್ರವಾದಿಯ ವೈಯಕ್ತಿಕ ಅಭಿಪ್ರಾಯಗಳು ಸ್ವತಃ ಅವರಿಗೆ ಅಥವಾ ಅದನ್ನು ಅನುಸರಿಸುವವರಿಗೆ ಹಾನಿಕರವಾಗಿರಲೂ ಸಾಧ್ಯವಿದೆ. ಕೆಳಗಿನ ವಚನವನ್ನು ಗಮನಿಸಿ:

مَّا أَصَابَكَ مِنْ حَسَنَةٍ فَمِنَ اللّهِ وَمَا أَصَابَكَ مِن سَيِّئَةٍ فَمِن نَّفْسِكَ وَأَرْسَلْنَاكَ لِلنَّاسِ رَسُولاً وَكَفَى بِاللّهِ شَهِيدًا○ مَّنْ يُطِعِ الرَّسُولَ فَقَدْ أَطَاعَ اللّهَ وَمَن تَوَلَّى فَمَا أَرْسَلْنَاكَ عَلَيْهِمْ حَفِيظًا○

*"(ಓ ಪ್ರವಾದಿಯರೇ) ನಿಮಗೊದಗುವ ಪ್ರತಿಯೊಂದು ಒಳಿತೂ ಅಲ್ಲಾಹನ ಕೃಪೆಯಿಂದ ಒದಗುತ್ತದೆ ಮತ್ತು ನಿನಗೊದಗುವ ಪ್ರತಿಯೊಂದು ವಿಪತ್ತೂ ನಿನ್ನಿಂದಲೇ ಆಗಿರುತ್ತದೆ. ನಾವು ನಿಮ್ಮನ್ನು ಮಾನವರಿಗಾಗಿ ಸಂದೇಶವಾಹಕರಾಗಿ ರವಾನಿಸಿರುತ್ತೇವೆ. ಇದರ ಬಗ್ಗೆ ಅಲ್ಲಾಹನ ಸಾಕ್ಷ್ಯವೇ ಸಾಕು. ಸಂದೇಶವಾಹಕರನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು. ಯಾವನಾದರೂ ವಿಮುಖನಾಗಿ ಬಿಟ್ಟರೆ, ನಾವು ನಿಮ್ಮನ್ನು ಅವರ ಮೇಲೆ ರಕ್ಷಕರನ್ನಾಗಿ ಮಾಡಿಯಂತು ಕಳುಹಿಸಿರುವುದಿಲ್ಲ. (4:79-80)*

---

ಆದುದರಿಂದ, ಪ್ರವಾದಿ ಮುಹಮ್ಮದರ ವೈಯಕ್ತಿಕ ಅಭಿಪ್ರಾಯಗಳು ತಪ್ಪಾಗಿರಲೂ, ವಿಪತ್ತಿಗೆ ಕಾರಣವಾಗಲೂ ಸಾಧ್ಯವಿದೆ ಎಂದು ಮೇಲಿನ ವಚನದಲ್ಲಿ ಸ್ಪಷ್ಟವಾಗುತ್ತದೆ. ಆದರೆ, ಮುಹಮ್ಮದರು, ಸಂದೇಶವಾಹಕರ ನೆಲೆಯಲ್ಲಿ ನುಡಿಯುವುದು ಅಲ್ಲಾಹನ ಪದಗಳಾಗಿವೆ - ಅಂದರೆ ಕುರ್‌ಆನ್ - ಅದನ್ನು ಚಾಚುತಪ್ಪದೆ ಪಾಲಿಸಬೇಕಾಗಿದೆ. ಯಾರು ಸಂದೇಶವಾಹಕರನ್ನು ಅನುಸರಿಸುವನೋ, ಅವನು ಅಲ್ಲಾಹನನ್ನು ಅನುಸರಿಸಿದನು. ನಮಗೆ ಅಲ್ಲಾಹನ ಆಜ್ಞಾದೇಶಗಳನ್ನು ಪಾಲಿಸಬೇಕಾಗಿದೆ, ಯಾವುದೇ ಮಾನವರ ಆಜ್ಞಾದೇಶಗಳನ್ನಲ್ಲ.

# ಪ್ರವಾದಿ ಮುಹಮ್ಮದರನ್ನು ಮೂರ್ತೀಕರಿಸುವುದು

ಕುರ್‌ಆನ್ ಸಮಗ್ರವಾಗಿದೆ, ವಿವರಪೂರ್ಣವಾಗಿದೆ ಹಾಗು ಅದರ ಹೊರತು ಇತರ ಮೂಲಗಳನ್ನು ಅರಸಿಕೊಂಡು ಹೋಗಬಾರದು ಎಂದು ಅಲ್ಲಾಹನು ಪುನರಾವರ್ತಿಸಿ ಹೇಳುತ್ತಿರುವಾಗ ಅದನ್ನು ವಿಶ್ವಾಸವಿರಿಸಲು ನಿರಾಕರಿಸಿ, 'ಹದೀಸ್ ಮತ್ತು ಸುನ್ನ' ಎಂದು ಕರೆಯಲ್ಪಡುವ ಕಟ್ಟುಕಥೆಗಳನ್ನು ಅನುಸರಿಸುವುದು ಪ್ರವಾದಿ ಮುಹಮ್ಮದರನ್ನು ಮೂರ್ತೀಕರಿಸಿದಂತಾಗುತ್ತದೆ.

قُل لَّوْ كَانَ الْبَحْرُ مِدَادًا لِّكَلِمَاتِ رَبِّي لَنَفِدَ الْبَحْرُ قَبْلَ أَن تَنفَدَ كَلِمَاتُ رَبِّي وَلَوْ جِئْنَا
بِمِثْلِهِ مَدَدًا ○ قُلْ إِنَّمَا أَنَا بَشَرٌ مِّثْلُكُمْ يُوحَىٰ إِلَيَّ أَنَّمَا إِلَٰهُكُمْ إِلَٰهٌ وَاحِدٌ فَمَن كَانَ يَرْجُو لِقَاءَ
رَبِّهِ فَلْيَعْمَلْ عَمَلًا صَالِحًا وَلَا يُشْرِكْ بِعِبَادَةِ رَبِّهِ أَحَدًا ○

*"(ಓ ಮುಹಮ್ಮದರೇ) ಹೇಳಿರಿ, 'ನನ್ನ ಪ್ರಭುವಿನ ವಚನಗಳನ್ನು ಬರೆಯಲು ಸಮುದ್ರವು ಮಸಿಯಾಗಿ (ಶಾಯಿಯಾಗಿ) ಮಾರ್ಪಟ್ಟರೂ ಅದು ಮುಗಿದು ಹೋಗುವುದು. ಆದರೆ ನನ್ನ ಪ್ರಭುವಿನ ವಚನಗಳು ಮುಗಿಯಲಾರವು. ಮಾತ್ರವಲ್ಲ ಮತ್ತೂ ಅಷ್ಟೇ ಮಸಿಯನ್ನು ನಾವು ತಂದರೂ ಅದೂ ಸಾಕಾಗದು'. (ಹೀಗೂ) ಹೇಳಿರಿ, 'ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ. (ಆದರೆ) ನನ್ನ ಕಡೆಗೆ 'ನಿಮ್ಮ ದೇವನು ಏಕ ಮಾತ್ರ ದೇವನಾಗಿದ್ದಾನೆ' ಎಂಬ ದಿವ್ಯವಾಣಿಯು ಅವತೀರ್ಣಗೊಳ್ಳುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ತನ್ನ ಪ್ರಭುವಿನ ಸೇವೆಯಲ್ಲಿ ಯಾರನ್ನೂ (ಯಾವುದನ್ನೂ) ಮೂರ್ತೀಕರಿಸದಿರಲಿ (ಸಂಯೋಜಿಸದಿರಲಿ)'." (18:109-110)*

---

ಈ ವಚನಗಳು ನಮಗೆ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ, ಅಲ್ಲಾಹನ ಬಳಿ ಪದಗಳ ಕೊರತೆಯು ಇಲ್ಲವೇ ಇಲ್ಲ. ಅವನು ನಮಗೆ ಅಗತ್ಯವಿರುವ ಎಲ್ಲಾ ಪದಗಳನ್ನು ಈ ಕುರ್‌ಆನಿನಲ್ಲಿ ನೀಡಿದ್ದಾನೆ ಹಾಗೂ ಪ್ರವಾದಿ ಮುಹಮ್ಮದರ ಅಥವಾ ಇತರ ಯಾರದೇ ಪದಗಳನ್ನು ಹುಡುಕುತ್ತಾ ಹೋಗಬಾರದು. ಹಾಗೆಯೇ, ಅವತೀರ್ಣವು ಅವರ ಕಡೆಗೆ ತಲುಪುತ್ತದೆ ಎಂಬ ವ್ಯತ್ಯಾಸವನ್ನು ಹೊರತು ಪಡಿಸಿದರೆ, ಪ್ರವಾದಿ ಮುಹಮ್ಮದರು ಇತರರಂತೆಯೇ ಒಬ್ಬ ಸಾಮಾನ್ಯ ಮನುಷ್ಯರಾಗಿದ್ದರು ಎಂದೂ ಮೇಲಿನ ವಚನದಿಂದ ಸರಳವಾಗಿ ಅರ್ಥೈಸಬಹುದು. ಆದುದರಿಂದ ಅವರನ್ನು ಮೂರ್ತೀಕರಿಸಬಾರದು (ವಚನದ ಕೊನೆಯ ಭಾಗವನ್ನು ನೋಡಿ).

# ಮುಹಮ್ಮದರನ್ನು ಮೂರ್ತೀಕರಿಸಬಾರದು: ಕುರ್‌ಆನ್

ಸಂದೇಶವಾಹಕರು "ನಿಮ್ಮಂತೆಯೇ ಇರುವ ಒಬ್ಬ ಮನುಷ್ಯನಾಗಿದ್ದಾನೆ" ಎಂದು ವರ್ಣಿಸುವ ವಚನಗಳು ಕುರ್‌ಆನಿನಲ್ಲಿ ಕೇವಲ ಎರಡು ಬಾರಿ ಕಂಡುಬಂದಿದೆ.

<u>ಈ ಎರಡೂ ವಚನಗಳ ಕೊನೆಯಲ್ಲಿ, ಮೂರ್ತಿ ಆರಾಧನೆಯನ್ನು ನಿಷೇಧಿಸಿರುವುದು ಆಕಸ್ಮಿಕವಾಗಿ ಸಂಭವಿಸಿರುವುದೇ???</u>

ಮೊದಲನೇ ವಚನವು ಹಿಂದಿನ ಪುಟದಲ್ಲಿ ನೀಡಲಾಗಿದೆ. ಎರಡನೇ ವಚನವು ಈ ಕೆಳಗಿದೆ:

قُلْ إِنَّمَا أَنَا بَشَرٌ مِّثْلُكُمْ يُوحَىٰ إِلَيَّ أَنَّمَا إِلَٰهُكُمْ إِلَٰهٌ وَاحِدٌ فَاسْتَقِيمُوا إِلَيْهِ وَاسْتَغْفِرُوهُ وَوَيْلٌ لِّلْمُشْرِكِينَ○

*"(ಓ ಮುಹಮ್ಮದರೇ) ಹೇಳಿರಿ, 'ನಾನು ನಿಮ್ಮಂತೆಯೇ ಒಬ್ಬ ಮನುಷ್ಯ. (ಆದರೆ) ನನ್ನ ಕಡೆಗೆ 'ನಿಮ್ಮ ದೇವನು ಏಕ ಮಾತ್ರ ದೇವನಾಗಿದ್ದಾನೆ' ಎಂಬ ದಿವ್ಯವಾಣಿಯು ಅವತೀರ್ಣಗೊಳ್ಳುತ್ತಿದೆ. ಆದುದರಿಂದ, ನೀವು ಕೇವಲ ಅವನನ್ನು ಮಾತ್ರ ಲಕ್ಷಿಸಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ಮೂರ್ತಿ ಆರಾಧಕರಿಗೆ ವಿನಾಶವಿದೆ'." (41:6)*

---

ಕುರ್‌ಆನ್ <u>ಸಮಗ್ರವಾಗಿದೆ, ಪರಿಪೂರ್ಣವಾಗಿದೆ ಹಾಗೂ ವಿವರಪೂರ್ಣವಾಗಿದೆ</u> ಮತ್ತು ದೀನಿನ ಮಾರ್ಗದರ್ಶನವಾಗಿ <u>ಕುರ್‌ಆನ್ ಬಾಹಿರ ಮೂಲಗಳನ್ನು ಸಮ್ಮತಿಸಬಾರದು</u> ಎಂಬ ತಮ್ಮ ಪ್ರಭುವಿನ ಹೇಳಿಕೆಯನ್ನು ನಿಜವಾದ ವಿಶ್ವಾಸಿಗಳು ದೃಢವಾಗಿ ನಂಬುತ್ತಾರೆ. ಮೂರ್ತಿ ಆರಾಧಕರು ಮಾತ್ರ ಅದನ್ನು ನಿರಾಕರಿಸುತ್ತಾರೆ. <u>ಹದೀಸ್ ಹಾಗು ಸುನ್ನ</u>ವನ್ನು ಅನುಸರಿಸುವುದು ಪ್ರವಾದಿ ಮುಹಮ್ಮದರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಮೂರ್ತೀಕರಿಸುವುದಾಗಿದೆ.

# ಕುರ್‌ಆನಿನ ದುರುಪಯೋಗ

---

لَقَدْ كَانَ لَكُمْ فِي رَسُولِ اللهِ أُسْوَةٌ حَسَنَةٌ لِّمَن كَانَ يَرْجُو اللهَ وَالْيَوْمَ الْآخِرَ وَذَكَرَ اللهَ كَثِيرًا ○

*"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗೆ ಒಂದು ಅತ್ಯುತ್ತಮ ಆದರ್ಶವಿದೆ. (ಅದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವರಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." (33:21)*

---

ಪ್ರವಾದಿಯವರ ಮೂರ್ತೀಕರಣಕ್ಕೆ ಒಂದು ಪ್ರಮುಖ ದರ್ಜೆಯನ್ನು ನೀಡುವ ಹಕ್ಕನ್ನು ಸಾಧಿಸಲು ಮತ್ತು 'ಹದೀಸ್ ಹಾಗೂ ಸುನ್ನ'ದ ಅವಶ್ಯಕತೆಯ ಬಗ್ಗೆ ಜನರ ಮನವೊಪ್ಪುವಂತೆ ಮಾಡಲು ಶೈತಾನನು ಈ ವಚನವನ್ನು ಬಳಸಿದನು.

ಪ್ರವಾದಿ ಮುಹಮ್ಮದರು ನಮ್ಮ ಅತ್ಯುತ್ತಮ ಮಾದರಿ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ. ಅವರ ಮಾದರಿಯನ್ನು ಸಂಸ್ಥಾಪಿಸುವುದು ಎಂದರೆ - ಕುರ್‌ಆನನ್ನು, ಕೇವಲ ಕುರ್‌ಆನನ್ನು ಮಾತ್ರ ಎತ್ತಿಹಿಡಿಯುವುದಾಗಿದೆ.

ಸಹಜವಾಗಿ, <u>ಕುರ್‌ಆನಿನಲ್ಲಿ ಇಬ್ರಾಹೀಮರೂ ಅದೇ ಪದಗಳ ಬಳಕೆಯಿಂದ 'ಆದರ್ಶ ಪುರುಷನಾಗಿ' ನಿರೂಪಿಸಲ್ಪಟ್ಟಿದ್ದಾರೆಂಬ</u> ಸತ್ಯಾಂಶದಿಂದ ಶೈತಾನನ ಕಪಟ ತಂತ್ರಕ್ಕೆ ಬಲಿಯಾದವರು ಅಜ್ಞರಾಗಿದ್ದಾರೆ. ನಿಖರವಾಗಿ ಅದೇ ಪದಗಳು ಬಳಕೆಯಾಗಿರುವುದನ್ನು ಗಮನಿಸಿ:

قَدْ كَانَتْ لَكُمْ أُسْوَةٌ حَسَنَةٌ فِي إِبْرَاهِيمَ وَالَّذِينَ مَعَهُ... لَقَدْ كَانَ لَكُمْ فِيهِمْ أُسْوَةٌ حَسَنَةٌ لِّمَن كَانَ يَرْجُو اللهَ وَالْيَوْمَ الْآخِرَ وَمَن يَتَوَلَّ فَإِنَّ اللهَ هُوَ الْغَنِيُّ الْحَمِيدُ○

*"ನಿಮಗೆ ಇಬ್ರಾಹೀಮ್ ಮತ್ತು ಅವರ ಸಂಗಾತಿಗಳಲ್ಲಿ ಒಂದು ಅತ್ಯುತ್ತಮ ಆದರ್ಶವಿದೆ... ನಿಮ್ಮಲ್ಲಿ ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವರಿಗೆ ಅವರಲ್ಲಿ ಒಂದು ಅತ್ಯುತ್ತಮ ಆದರ್ಶವಿದೆ. ಯಾರಾದರೂ ಇದರಿಂದ ವಿಮುಖರಾದರೆ, ಅಲ್ಲಾಹನು ನಿರಪೇಕ್ಷನೂ ಸ್ವಯಂ ಪ್ರಶಂಸಾರ್ಹನೂ ಆಗಿರುತ್ತಾನೆ." (60:4, 6)*

# ಅಲ್ಲಾಹನು ಮುಹಮ್ಮದರನ್ನು ದ್ವೇಷಿಸುತ್ತಾನೆಯೇ???

ಖಂಡಿತವಾಗಿಯೂ ಇಲ್ಲ. ಆದರೆ, ಕುರ್‌ಆನಿನಲ್ಲಿ ಅಲ್ಲಾಹನು ಪ್ರವಾದಿ ಮುಹಮ್ಮದರ ಬಗ್ಗೆ ಹೇಳಿರುವಂತಹ ವಿಷಯಗಳನ್ನು ನೀವು ಪುನರಾವರ್ತಿಸಿದರೆ, ಅವರು ನಿಮ್ಮನ್ನು 'ಮುಹಮ್ಮದರನ್ನು ದ್ವೇಷಿಸುವವರು' ಎಂದು ಆರೋಪಿಸುತ್ತಾರೆ!!!

ಅಂತೆಯೇ, ಯೇಸುವು (ಈಸಾರು) ಒಬ್ಬ ಮಾನವರಾಗಿದ್ದರು ಮತ್ತು ಏಕದೇವನ ಸಂದೇಶವಾಹಕರಾಗಿದ್ದರು ಎಂದು ನೀವು ಕ್ರೈಸ್ತರೊಂದಿಗೆ ಹೇಳಿದರೆ ಅವರು ನಿಮ್ಮನ್ನು 'ಯೇಸುವನ್ನು (ಈಸಾರನ್ನು) ದ್ವೇಷಿಸುವವರು' ಎಂದು ಅರೋಪಿಸುತ್ತಾರೆ.

---

# ಮುಹಮ್ಮದರಿಗೆ ಯಾರನ್ನೂ ಸನ್ಮಾರ್ಗಿಗಳನ್ನಾಗಿಸಲು ಸಾಧ್ಯವಿಲ್ಲ

إِنَّكَ لَا تَهْدِي مَنْ أَحْبَبْتَ وَلَكِنَّ اللَّهَ يَهْدِي مَن يَشَاءُ وَهُوَ أَعْلَمُ بِالْمُهْتَدِينَ ۝

*"(ಓ ಪ್ರವಾದಿಯರೇ) ನೀವು ಪ್ರೀತಿಸುವವರನ್ನೂ ನಿಮಗೆ ಸನ್ಮಾರ್ಗಿಗಳನ್ನಾಗಿಸಲು (ಮಾರ್ಗದರ್ಶನ ನೀಡಲು) ಸಾಧ್ಯವಿಲ್ಲ. ಆದರೆ, ತಾನಿಚ್ಛಿಸುವವರನ್ನು ಸನ್ಮಾರ್ಗಿಗಳನ್ನಾಗಿಸುವವನು ಅಲ್ಲಾಹನಾಗಿದ್ದಾನೆ. ಹಾಗೂ ಸನ್ಮಾರ್ಗ ಸ್ವೀಕರಿಸಲು ಅರ್ಹರಾದವರನ್ನು ಚೆನ್ನಾಗಿ ಅರಿಯುವವನು ಅವನಾಗಿದ್ದಾನೆ." (28:56)*

---

ಕುರ್‌ಆನನ್ನು - ಯಾವುದೇ ತಿದ್ದುಪಡಿ, ಸೇರಿಸುವಿಕೆ, ಕಡಿತಗೊಳಿಸುವಿಕೆ, ಹೆಚ್ಚುವರಿ ವಿವರಣೆಗಳಿಲ್ಲದೆ ತಲುಪಿಸುವುದು - ಸಂದೇಶವಾಹಕರ ಏಕೈಕ ಕರ್ತವ್ಯವಾಗಿತ್ತು.

# ಪ್ರವಾದಿ ಮುಹಮ್ಮದರ ಮೇಲಿನ ನಿಜವಾದ ಪ್ರೀತಿ

ಪ್ರವಾದಿ ಈಸಾರ ಮೇಲಿನ ನಿಜವಾದ ಪ್ರೀತಿಯು, ಅವರನ್ನು ಒಬ್ಬ ಮಾನವನೆಂದು ಮತ್ತು ಒಬ್ಬ ಸಂದೇಶವಾಹಕರೆಂದು ಗುರುತಿಸುವುದಾಗಿದೆ. ಕ್ರೈಸ್ತರು ಈಸಾರನ್ನು ಅತಿಯಾಗಿ ಪ್ರೀತಿಸುತ್ತಾರೆ, ಆದರೆ ಈಸಾರು ತೀರ್ಪಿನ ದಿನದಂದು ಅವರಿಂದ ಸಂಬಂಧವನ್ನು ಮುರಿದು ಬಿಡುವರು (ಬೈಬಲ್ (ಮಾಥಿವ್) – 7:23. ಕುರ್‌ಆನ್ - 5:116).

ಪ್ರವಾದಿ ಮುಹಮ್ಮದರ ಮೇಲಿನ ನಿಜವಾದ ಪ್ರೀತಿಯು, ಅವರನ್ನು ಒಬ್ಬ ಮಾನವನೆಂದು ಗುರುತಿಸುವುದು ಮತ್ತು ಅವರ ಬೋಧನೆಯನ್ನು ಅನುಸರಿಸುವುದು – ಅಂದರೆ <u>ಕುರ್‌ಆನನ್ನು, ಕೇವಲ ಕುರ್‌ಆನನ್ನು ಮಾತ್ರ ಎತ್ತಿಹಿಡಿಯುವುದು.</u> ಕುರ್‌ಆನಿನ ಸ್ಪಷ್ಟ ಎಚ್ಚರಿಕೆಗಳನ್ನು ಕಡೆಗಣಿಸಿ, ‘ಹದೀಸ್ ಹಾಗೂ ಸುನ್ನ’ವನ್ನು ಅನುಸರಿಸುವವರು ಪ್ರವಾದಿಯ ಶತ್ರುಗಳಾಗಿದ್ದಾರೆ ಮತ್ತು ಪ್ರವಾದಿಯವರು ತೀರ್ಪಿನ ದಿನದಂದು ಅವರಿಂದ ಸಂಬಂಧವನ್ನು ಮುರಿದುಬಿಡುವರು:

وَقَالَ الرَّسُولُ يَا رَبِّ إِنَّ قَوْمِي اتَّخَذُوا هَذَا الْقُرْآنَ مَهْجُورًا ۝ وَكَذَلِكَ جَعَلْنَا لِكُلِّ نَبِيٍّ عَدُوًّا مِّنَ الْمُجْرِمِينَ وَكَفَى بِرَبِّكَ هَادِيًا وَنَصِيرًا ۝

*“(ತೀರ್ಪಿನ ದಿನದಂದು) ಸಂದೇಶವಾಹಕರು ಹೇಳುವರು, ‘ಓ ಪ್ರಭುವೇ, ನನ್ನ ಜನಾಂಗವು ಈ <u>ಕುರ್‌ಆನನ್ನು</u> ತ್ಯಜಿಸಿದರು’. ಹಾಗೆ, ನಾವು ಅಪರಾಧಿಗಳ ಪೈಕಿಯಿಂದ ಪ್ರತಿಯೊಂದು ಪ್ರವಾದಿಗಳಿಗೆ ಶತ್ರುಗಳನ್ನು ನೇಮಿಸಿರುತ್ತೇವೆ. ಮಾರ್ಗದರ್ಶಕನಾಗಿ ಮತ್ತು ಸಹಾಯಕನಾಗಿ ನಿಮ್ಮ ಪ್ರಭುವೇ ಸಾಕು.” (25:30-31)*

---

ಮೇಲಿನ 31ನೇ ವಚನವು, ನಿರ್ದಿಷ್ಟವಾಗಿ <u>ಹದೀಸುಗಳ</u> ಬಗ್ಗೆ ವ್ಯವಹರಿಸುವಂತಹ ಸೂರಃ 6ರ 112ನೇ ವಚನದೊಂದಿಗೆ ನಿಖರವಾದ ಹೋಲುವುದನ್ನು ದಯವಿಟ್ಟು ಗಮನಿಸಿ (ಪುಟ 36).

---

ನಮ್ಮನ್ನು ಸೃಷ್ಟಿಸಿದವನು ಅಲ್ಲಾಹನಾಗಿದ್ದಾನೆ. ನಮಗೆ ಜೀವನಾಧಾರವನ್ನು ಒದಗಿಸುವವನು ಅವನೇ ಆಗಿದ್ದಾನೆ. ನಮ್ಮ ಜೀವನವನ್ನು ಅಂತ್ಯಗೊಳಿಸುವವನು ಅವನೇ ಆಗಿದ್ದಾನೆ. ನಮ್ಮನ್ನು ಪುನರ್ಜೀವಗೊಳಿಸುವವನು ಅವನೇ ಆಗಿದ್ದಾನೆ. ತೀರ್ಪಿನ ದಿನದಂದು ನಮ್ಮನ್ನು ಲೆಕ್ಕಾಚಾರಕ್ಕೆ ಗುರಿಪಡಿಸುವವನು ಅವನೇ ಆಗಿದ್ದಾನೆ. ಪ್ರವಾದಿ ಮುಹಮ್ಮದರು ಇವುಗಳಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿಲ್ಲ. (ವಚನ 30:40ನ್ನು ನೋಡಿ)

# ಪ್ರವಾದಿ ಮುಹಮ್ಮದರು ಭವಿಷ್ಯವನ್ನು ಅರಿತಿರಲಿಲ್ಲ

---

قُلْ مَا كُنتُ بِدْعًا مِّنَ الرُّسُلِ وَمَا أَدْرِي مَا يُفْعَلُ بِي وَلَا بِكُمْ إِنْ أَتَّبِعُ إِلَّا مَا يُوحَىٰ إِلَيَّ وَمَا
أَنَا إِلَّا نَذِيرٌ مُّبِينٌ ○

*"(ಪ್ರವಾದಿಯರೇ) ಹೇಳಿರಿ, ಇತರ ಸಂದೇಶವಾಹಕರಿಂದ ವ್ಯತ್ಯಸ್ತವಾದ ಯಾವುದೇ ಹೊಸ ಸಂಗತಿಯನ್ನು ನಾನು ತಂದಿಲ್ಲ. ನಾಳೆ ನನಗೇನಾಗಲಿದೆ ಎಂಬುವುದಾಗಲಿ, ನಿಮಗೇನಾಗಲಿದೆ ಎಂಬುವುದಾಗಲಿ ನನಗರಿಯದು. ನಾನಂತೂ ನನ್ನ ಬಳಿಗೆ ಕಳುಹಿಸಲಾಗುತ್ತಿರುವ ಅವತೀರ್ಣವನ್ನು ಅನುಸರಿಸುವವನಾಗಿದ್ದೇನೆ. ನಾನೊಬ್ಬ ಸುಸ್ಪಷ್ಟ ಎಚ್ಚರಿಕೆ ನೀಡುವವನೇ ಹೊರತು ಇನ್ನೇನೂ ಅಲ್ಲ." (46:9)*

---

قُل لَّا أَمْلِكُ لِنَفْسِي نَفْعًا وَلَا ضَرًّا إِلَّا مَا شَاءَ اللَّهُ وَلَوْ كُنتُ أَعْلَمُ الْغَيْبَ لَاسْتَكْثَرْتُ مِنَ
الْخَيْرِ وَمَا مَسَّنِيَ السُّوءُ إِنْ أَنَا إِلَّا نَذِيرٌ وَبَشِيرٌ لِّقَوْمٍ يُؤْمِنُونَ ○

*"(ಪ್ರವಾದಿಯರೇ) ಹೇಳಿರಿ, ಅಲ್ಲಾಹನು ಇಚ್ಛಿಸುವುದಲ್ಲದೇ, ನನ್ನ ಸ್ವಂತಕ್ಕೆ ಒಳಿತನ್ನೋ ಅಥವಾ ಕೆಡುಕನ್ನೋ ಉಂಟುಮಾಡಲು ನನಗೆ ಸಾಧ್ಯವಿಲ್ಲ. ಮತ್ತು ನನಗೆ ಭವಿಷ್ಯದ ಜ್ಞಾನವು ಇರುತ್ತಿದ್ದರೆ ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ ಮತ್ತು ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ. ವಿಶ್ವಾಸಿಗಳಿಗೆ ನಾನು ಕೇವಲ ಎಚ್ಚರಿಕೆ ಕೊಡುವವನೂ ಸುವಾರ್ತೆ ನೀಡುವವನೂ ಆಗಿರುತ್ತೇನೆ." (7:188)*

# ಶಫಾಅತಿನ ಕಟ್ಟುಕಥೆ

ಶಫಾಅತ್ ಅಥವಾ ಶಿಫಾರಸು ಎಂಬುವುದು, ತಮ್ಮ ಪ್ರವಾದಿಯನ್ನು ಅಥವಾ ಸಂತರನ್ನು ಮೂರ್ತೀಕರಿಸುವಂತೆ ಜನರನ್ನು ಮೋಸ ಮಾಡಲು ಪ್ರಯೋಗಿಸುವ ಶೈತಾನನ ಅತ್ಯಂತ ಪರಿಣಾಮಕಾರಿ ತಂತ್ರವಾಗಿದೆ.

ತೀರ್ಪಿನ ದಿನದಂದು ಯಾವುದೇ ಶಿಫಾರಸು ನಡೆಯದು ಎಂದು ಕುರ್ಆನ್ ಪುನರಾವರ್ತಿಸಿ ಹೇಳಿರುವಾಗಲೂ, ಹದೀಸ್ ಹಾಗೂ ಸುನ್ನದ ಆಧಾರದಲ್ಲಿ ಶಿಫಾರಸಿನ ಪರಿಕಲ್ಪನೆಯನ್ನು ಆವಿಷ್ಕರಿಸಲ್ಪಟ್ಟಿರುವ ಕಾರಣ ಅನೇಕ ಜನರು ಮೋಸಕ್ಕೊಳಪಟ್ಟಿದ್ದಾರೆ.

يَا أَيُّهَا الَّذِينَ آمَنُواْ أَنفِقُواْ مِمَّا رَزَقْنَاكُم مِّن قَبْلِ أَن يَأْتِيَ يَوْمٌ لاَّ بَيْعٌ فِيهِ وَلاَ خُلَّةٌ وَلاَ شَفَاعَةٌ وَالْكَافِرُونَ هُمُ الظَّالِمُونَ ○

*"ಸತ್ಯವಿಶ್ವಾಸಿಗಳೇ, ವಿನಿಮಯಗಳು ನಡೆಯದ, ಗೆಳೆತನಗಳೂ, ಶಿಫಾರಸುಗಳೂ ಫಲಕಾರಿಯಾಗದ ಆ ದಿನ ಬರುವುದಕ್ಕಿಂತ ಮೊದಲು ನಾವು ನಿಮಗೆ ಒದಗಿಸಿರುವ ಅನುಗ್ರಹಗಳಿಂದ ಖರ್ಚು ಮಾಡಿರಿ. ನಿರಾಕರಣೆಯ ನೀತಿಯನ್ನು ಹೊಂದಿದವರೇ ಅಕ್ರಮಿಗಳು". (2:254)*

---

ಕುರ್ಆನಿನಲ್ಲಿ ಇಂತಹ ವಚನಗಳು ಅನೇಕ ಬಾರಿ ಅನೇಕ ಕಡೆಗಳಲ್ಲಿ ಪುನರಾವರ್ತಿಸಲಾಗಿದೆ. ಆದರೂ, ಪ್ರವಾದಿ ಮುಹಮ್ಮದರು ತಮ್ಮನ್ನು ನರಕದಿಂದ ಹೊರತೆಗೆದು ಸ್ವರ್ಗಕ್ಕೆ ಪ್ರವೇಶ ನೀಡುವರು ಎಂದು ಶೈತಾನನು ತನಗೆ ಬಲಿಪಶುಗಳಾದ ಜನರ ಮನವೊಪ್ಪುವಂತೆ ಮಾಡಿದನು. ಸಂತರು ಹಾಗೂ ಇಮಾಮರು ಸಹ ಶಿಫಾರಸು ಮಾಡಬಲ್ಲರು ಎಂದು ಮುಸ್ಲಿಮರೆಂದುಕೊಳ್ಳುವ ಅನೇಕರು ತಿಳಿದುಕೊಂಡಿದ್ದಾರೆ.

---

وَيَعْبُدُونَ مِن دُونِ اللّهِ مَا لاَ يَضُرُّهُمْ وَلاَ يَنفَعُهُمْ وَيَقُولُونَ هَـؤُلاء شُفَعَاؤُنَا عِندَ اللّهِ قُلْ أَتُنَبِّئُونَ اللّهَ بِمَا لاَ يَعْلَمُ فِي السَّمَاوَاتِ وَلاَ فِي الأَرْضِ سُبْحَانَهُ وَتَعَالَى عَمَّا يُشْرِكُونَ ○

*“ಅವರು ಅಲ್ಲಾಹನನ್ನು ಬಿಟ್ಟು ಇವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದಂತಹವರ ಸೇವೆಯನ್ನು ಮಾಡುತ್ತಾರೆ ಮತ್ತು ‘ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸು ಮಾಡುವವರು’ ಎಂದು ಹೇಳುತ್ತಾರೆ. ಹೇಳಿರಿ, ‘ಅಲ್ಲಾಹನು ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ತಿಳಿಯದಂತಹ ಸಂಗತಿಯನ್ನು ನೀವು ಅವನಿಗೆ ತಿಳಿಸುತ್ತೀರಾ? ಇವರು ಮೂರ್ತೀಕರಿಸುತ್ತಿರುವವುಗಳಿಂದ ಅವನು ಅತಿ ಪಾವನನಾಗಿರುತ್ತಾನೆ’.” (10:18)*

---

ಶಿಫಾರಸಿನ ಪರಿಕಲ್ಪನೆಯು, ಅಲ್ಲಾಹನಿಗೆ ಜನರ ಪರವಾಗಿ ಶಿಫಾರಸು ಮಾಡಬಲ್ಲ ಸಹಭಾಗಿಗಳಿದ್ದಾರೆಂದು ಪರೋಕ್ಷವಾಗಿ ಸೂಚಿಸುತ್ತದೆ. ಆದುದರಿಂದ, ಶಿಫಾರಸಿನ ನಂಬಿಕೆಯು ಮೂರ್ತಿ ಆರಾಧನೆಯಾಗಿದೆ. ಪ್ರವಾದಿ ಮುಹಮ್ಮದರು ಶಿಫಾರಸು ಮಾಡುವರೆಂದು ನಂಬಿಕೆ ಇರಿಸುವುದು ಪ್ರವಾದಿಯ ಇಚ್ಛೆಗೆ ವಿರುದ್ಧವಾಗಿ ಅವರನ್ನು ಮೂರ್ತೀಕರಿಸುವುದಾಗಿದೆ. ಶೈತಾನನ ಕೃತಿಗಳಾದ ಹದೀಸ್ ಹಾಗೂ ಸುನ್ನಗಳಲ್ಲಿ ಈ ಶಿಫಾರಸಿನ ಸಮರ್ಥನೆಯು ವ್ಯಾಪಕವಾಗಿ ಹರಡಿದೆ.

ಶಿಫಾರಸು ಒಂದು ಮೂರ್ತಿ ಆರಾಧನೆಯ ಕರ್ಮವಾಗಿದೆ ಎಂದು ಕುರ್‌ಆನ್ ಸ್ಪಷ್ಟವಾಗಿ ಗುರುತಿಸಿಕೊಡುವ ಜೊತೆಗೆ ಒಂದು ಮಹತ್ತರ ಪ್ರಮಾಣವನ್ನೂ ಸಾದರಪಡಿಸುತ್ತದೆ – ಅದೇನೆಂದರೆ, ಶಿಫಾರಸಿನಲ್ಲಿ ನಂಬಿಕೆ ಇರಿಸುವವರು, ಕೇವಲ ಅಲ್ಲಾಹನ ಬಗ್ಗೆ ಮಾತನಾಡುವಾಗ ಅವರಿಗೆ ಸಹಿಸಲಾಗುವುದಿಲ್ಲ. ಅವರಿಗೆ ಅದರೊಂದಿಗೆ ತಮ್ಮ ಮೂರ್ತಿಗಳ ಹೆಸರನ್ನೂ ಪ್ರಸ್ತಾಪಿಸಲೇಬೇಕಾಗಿರುತ್ತದೆ.

قُل لِّلَّهِ الشَّفَاعَةُ جَمِيعًا لَّهُ مُلْكُ السَّمَاوَاتِ وَالْأَرْضِ ثُمَّ إِلَيْهِ تُرْجَعُونَ○ وَإِذَا ذُكِرَ اللَّهُ وَحْدَهُ اشْمَأَزَّتْ قُلُوبُ الَّذِينَ لَا يُؤْمِنُونَ بِالْآخِرَةِ وَإِذَا ذُكِرَ الَّذِينَ مِن دُونِهِ إِذَا هُمْ يَسْتَبْشِرُونَ○

*“ಶಿಫಾರಸ್ಸು ಸಂಪೂರ್ಣವಾಗಿ ಅಲ್ಲಾಹನ ಅಧಿಕಾರದಲ್ಲಿದೆ. ಭೂಮಿ-ಆಕಾಶಗಳ ಪ್ರಭುತ್ವಕ್ಕೆ ಅವನೇ ಒಡೆಯನಾಗಿದ್ದಾನೆ. ಅನಂತರ ನೀವು ಅವನ ಕಡೆಗೆ ಮರಳಿಸಲ್ಪಡಲಿರುವಿರಿ ಎಂದು ಹೇಳಿರಿ. ಕೇವಲ ಅಲ್ಲಾಹನ ಪ್ರಸ್ತಾಪವೆತ್ತಲಾದಾಗ ಅಂತ್ಯದಿನದಲ್ಲಿ ವಿಶ್ವಾಸವಿಲ್ಲದವರ ಹೃದಯಗಳು ಮರುಗಳಾರಂಭಿಸುತ್ತವೆ ಮತ್ತು ಅವನ ಹೊರತು ಇತರರ ಪ್ರಸ್ತಾಪ ಬರುವಾಗ ಅವರು ಒಮ್ಮೆಲೇ ಆನಂದ ತುಂದಿಲರಾಗುತ್ತಾರೆ.” (39:44-45)*

## ಲೆಕ್ಕಾಚಾರ ಪಡೆಯುವುದು ಪ್ರವಾದಿಯ ಕೆಲಸವಲ್ಲ

فَإِنَّمَا عَلَيْكَ الْبَلَاغُ وَعَلَيْنَا الْحِسَابُ ۝

*“(ಓ ಸಂದೇಶವಾಹಕರೇ) ಸಂದೇಶ ಮುಟ್ಟಿಸುವುದು ಮಾತ್ರ ನಿನ್ನ ಕೆಲಸ ಮತ್ತು ಲೆಕ್ಕಾಚಾರ ಪಡೆಯುವುದು ನಮ್ಮ ಕೆಲಸ.” (13:40)*

## ನಿಮಗೆ ಒಳಿತನ್ನೋ ಕೆಡುಕನ್ನೋ ಒದಗಿಸಲು ಪ್ರವಾದಿಗೆ ಸಾಧ್ಯವಿಲ್ಲ

قُل لَّا أَمْلِكُ لِنَفْسِي ضَرًّا وَلَا نَفْعًا

*“(ಸಂದೇಶವಾಹಕರೇ) ಹೇಳಿರಿ, ಸ್ವತಃ ನನಗೆ ಯಾವುದೇ ಹಾನಿ ಮಾಡಲಿಕ್ಕಾಗಲಿ, ಯಾವುದೇ ಲಾಭವನ್ನುಂಟು ಮಾಡಲಿಕ್ಕಾಗಿ ನನಗೆ ಸಾಧ್ಯವಿಲ್ಲ.” (10:49)*

---

قُلْ إِنِّي لَا أَمْلِكُ لَكُمْ ضَرًّا وَلَا رَشَدًا ۝

*“(ಸಂದೇಶವಾಹಕರೇ) ಹೇಳಿರಿ, ನಿಮಗೆ ಯಾವುದೇ ಹಾನಿ ಮಾಡಲಿಕ್ಕಾಗಲಿ, ನಿಮ್ಮ ಮೇಲೆ ಜ್ಞಾನೋದಯವನ್ನು ಜಾರಿಗೊಳಿಸಲು ನನಗೆ ಸಾಧ್ಯವಿಲ್ಲ.” (72:21)*

---

ಆದುದರಿಂದ, ಪ್ರವಾದಿ ಮುಹಮ್ಮದರಿಗೆ ನಿಮ್ಮನ್ನು ಸ್ವರ್ಗಕ್ಕೆ ಕೊಂಡೊಯ್ಯುವ, ನರಕದಿಂದ ರಕ್ಷೆ ಪಡಿಸುವ, ನಿಮ್ಮಿಂದ ಲೆಕ್ಕಾಚಾರ ಪಡೆಯುವ, ನಿಮಗೆ ಒಳಿತನ್ನೋ ಕೆಡುಕನ್ನೋ ಒದಗಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಇವುಗಳು ಕೇವಲ ಅಲ್ಲಾಹನು ಮಾಡಬಹುದಾದ ಕಾರ್ಯಗಳಾಗಿವೆ. ಅವರ ಏಕೈಕ ಧ್ಯೇಯವು – ಕುರ್‌ಆನನ್ನು, ಕೇವಲ ಕುರ್‌ಆನನ್ನು ತಲುಪಿಸುವುದಾಗಿತ್ತು. ಅವರನ್ನು ಪ್ರೀತಿಸುವುದು ಹಾಗೂ ಗೌರವಿಸುವುದೆಂದರೆ, ಅವರು ಯಶಸ್ವಿಯಾಗಿ ತಲುಪಿಸಿದಂತಹ ಕೇವಲ ಕುರ್‌ಆನನ್ನು ಮಾತ್ರ ಅನುಸರಿಸುವುದು ಮತ್ತು ಅವರ ಮೇಲೆ ಹೊರಿಸಲಾದ ಮಿಥ್ಯರಚನೆಗಳನ್ನು ತಿರಸ್ಕರಿಸುವುದಾಗಿದೆ.

## ಪ್ರತಿಯೊಂದು ಸಂದೇಶವಾಹಕರು ಹೇಳಿರುವುದು ಒಂದೇ

ಈಸಾರಾಗಲಿ, ಮುಹಮ್ಮದರಾಗಲಿ ತಮ್ಮನ್ನು ಮೂರ್ತೀಕರಿಸಲ್ಪಡಲು ಇಚ್ಛಿಸಲಿಲ್ಲ. ಬದಲಿಗೆ, ಈ ಸಂದೇಶವಾಹಕರುಗಳ ಸಂದೇಶದ ತಿರುಳು '<u>ಕೇವಲ ಅಲ್ಲಾಹನ</u> ಸೇವೆಯನ್ನು ಮಾಡಿರಿ' ಎಂದಾಗಿತ್ತು:

وَمَا أَرْسَلْنَا مِن قَبْلِكَ مِن رَّسُولٍ إِلَّا نُوحِي إِلَيْهِ أَنَّهُ لَا إِلَٰهَ إِلَّا أَنَا فَاعْبُدُونِ ○

*" 'ನನ್ನ ಹೊರತು ಬೇರೆ ಯಾವುದೇ ದೇವರಿಲ್ಲ, ಆದ್ದರಿಂದ ನೀವು ನನ್ನ ಸೇವೆಯನ್ನೇ ಮಾಡಿರಿ' ಎಂಬ ಅವತೀರ್ಣದೊಂದಿಗಲ್ಲದೆ, ನಾವು ನಿಮಗಿಂತ ಮುಂಚೆ ಯಾವುದೇ ಸಂದೇಶವಾಹಕರನ್ನು ಕಳುಹಿಸಿಲ್ಲ." (21:25)*

## ಪ್ರವಾದಿ ಮುಹಮ್ಮದರ ಏಕೈಕ ಹೊಣೆ – ಕುರ್‌ಆನನ್ನು ತಲುಪಿಸುವುದು

ಸಂದೇಶವಾಹಕರಾದ ಮುಹಮ್ಮದರ ಹೊಣೆಯು <u>ಕುರ್‌ಆನನ್ನು ತಲುಪಿಸುವುದು ಮಾತ್ರವಾಗಿದೆ</u> ಎಂದು ಕುರ್‌ಆನ್ ಪದೇ ಪದೇ ಒತ್ತಿಹೇಳುತ್ತದೆ.

إِنْ عَلَيْكَ إِلَّا الْبَلَاغُ

*"ನಿನ್ನ ಮೇಲೆ (ಇದನ್ನು) ತಲುಪಿಸುವ ಹೊಣೆ ಮಾತ್ರವಿದೆ." (42:48)*

مَّا عَلَى الرَّسُولِ إِلَّا الْبَلَاغُ

*"ಸಂದೇಶವಾಹಕರ ಮೇಲೆ (ಇದನ್ನು) ತಲುಪಿಸುವ ಹೊಣೆ ಮಾತ್ರವಿದೆ." (5:99)*

فَإِنَّمَا عَلَيْكَ الْبَلَاغُ

*"ಸಂದೇಶವನ್ನು ಮುಟ್ಟಿಸುವುದು ಮಾತ್ರ ನಿನ್ನ ಹೊಣೆಯಾಗಿದೆ." (13:40)*

# ಮುಹಮ್ಮದರು ಕುರ್‌ಆನಿನ ಅರ್ಥ ವಿವರಣೆ, ವ್ಯಾಖ್ಯಾನ ಮಾಡುವುದಿಲ್ಲ ಅವರು ಬರೇ ಅದನ್ನು ತಲುಪಿಸುತ್ತಾರೆ ಮತ್ತು ಸ್ವತಃ ಅನುಸರಿಸುತ್ತಾರೆ

ಹದೀಸ್ ಹಾಗೂ ಸುನ್ನದ ಸಮರ್ಥಕರು, ಕುರ್‌ಆನನ್ನು ವಿವರಿಸಲು ಹದೀಸ್ ಹಾಗೂ ಸುನ್ನದ ಅವಶ್ಯಕತೆ ಇದೆ ಎಂದು ಹಕ್ಕು ಸಾಧಿಸುತ್ತಾರೆ.

ಆದಾಗ್ಯೂ, ಕುರ್‌ಆನನ್ನು ಕಲಿಸುವವನು ಸ್ವತಃ ಅಲ್ಲಾಹನಾಗಿದ್ದಾನೆ ಎಂದು ಕುರ್‌ಆನ್ ನಮಗೆ ಕಲಿಸುತ್ತದೆ. ಅಂದರೆ, ಕುರ್‌ಆನನ್ನು ಪ್ರಾಮಾಣಿಕವಾಗಿ ಕಲಿಯಲು ಬಯಸುವವರ ಮಾತೃಭಾಷೆಯು ಯಾವುದೇ ಆಗಿರಲಿ, ಅಲ್ಲಾಹನು ಕುರ್‌ಆನನ್ನು ಅವರ ಹೃದಯಗಳಿಗೆ ಇಳಿಸಿಕೊಡುವನು.

الرَّحْمَنُ ○ عَلَّمَ الْقُرْآنَ ○

*"ಪರಮ ದಯಾಮಯನು ಕುರ್‌ಆನನ್ನು ಕಲಿಸುವವನಾಗಿದ್ದಾನೆ." (55:1-2)*

لَا تُحَرِّكْ بِهِ لِسَانَكَ لِتَعْجَلَ بِهِ ○ إِنَّ عَلَيْنَا جَمْعَهُ وَقُرْآنَهُ ○ فَإِذَا قَرَأْنَاهُ فَاتَّبِعْ قُرْآنَهُ ○ ثُمَّ إِنَّ عَلَيْنَا بَيَانَهُ ○

*"(ಸಂದೇಶವಾಹಕರೇ) ಈ ಅವತೀರ್ಣವನ್ನು ವೇಗಗೊಳಿಸಲು ನಿಮ್ಮ ನಾಲಿಗೆಯನ್ನು ಚಲಾಯಿಸಬೇಡಿರಿ. ಅವುಗಳನ್ನು ಕುರ್‌ಆನಾಗಿ ಜೋಡಿಸುವ ಜವಾಬ್ದಾರಿ ನಾವು ವಹಿಸಿದ್ದೇವೆ. ನಾವು ಇದನ್ನು ಓದಿ ಕೇಳಿಸಿದಾಗ, ಈ ಕುರ್‌ಆನನ್ನು ನೀವು ಅನುಸರಿಸಿ. ನಂತರ ಅದನ್ನು ವಿವರಿಸುವವರು ನಾವಾಗಿದ್ದೇವೆ." (75:16-19)*

---

ಪುಟ 21ರಲ್ಲಿ ವಚನ 28:56ರ ಉಲ್ಲೇಖದೊಂದಿಗೆ ಸೂಚಿಸಿದಂತೆ, ಸನ್ಮಾರ್ಗಕ್ಕೆ ಅರ್ಹರಾದವರನ್ನು ಅರಿಯುವವನು ಅಲ್ಲಾಹನು ಮಾತ್ರನಾಗಿರುತ್ತಾನೆ. ಹಾಗೆಯೇ ಮೇಲೆ ಸೂಚಿಸಿದಂತೆ ಕುರ್‌ಆನನ್ನು ಅವರ ಮನಸ್ಸಿಗೆ ಅವತರಿಸುವನೂ ಹಾಗೂ ವಿವರಿಸಿ ಕೊಡುವವನೂ ಅಲ್ಲಾಹನೇ ಆಗಿದ್ದಾನೆ.

# ‘ಹದೀಸ್ ಹಾಗೂ ಸುನ್ನ’ದ ಅನುಯಾಯಿಗಳು ತಮ್ಮ ಬೋಧನೆಗಳನ್ನೇ ಅನುಸರಿಸುವುದಿಲ್ಲ

‘ನನ್ನಿಂದ <u>ಕುರ್‌ಆನನ್ನು ಹೊರತು</u> ಬೇರೆ ಯಾವುದನ್ನೂ ದಾಖಲಿಸಬಾರದು’ ಎಂದು ಪ್ರವಾದಿಯರು ಆಜ್ಞಾಪಿಸಿರುವುದಾಗಿ *ಮುಸ್ಲಿಮ್* ಹಾಗೂ *ಇಬ್ನ್ ಹಂಬಲ್* ಎಂಬ ಅತ್ಯಂತ ವಿಶ್ವಾಸಾರ್ಹವೆಂದು ಘೋಷಿಸಲ್ಪಡುವ <u>ಹದೀಸ್</u> ಪುಸ್ತಕಗಳಲ್ಲಿ ವರದಿ ಮಾಡಿರುವುದು ಯಾರಿಗೂ ಪರಿಶೀಲಿಸಿ ನೋಡಬಹುದಾದ ಸತ್ಯಾಂಶವಾಗಿದೆ. ಆ ವರದಿಯನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ:

«السابع – النهي عن كتابة غير القرآن»

عن أبي سعيد الخدري رضي الله عنه قال : قال رسول الله صلى الله عليه وسلم : «لاتكتبوا عني شيئا سوى القرآن . من كتب شيئا سوى القرآن فليمحه»[١] .

(احمد ج ١ ص ١٧١ ومسلم)

‘ಅಬೀ ಸಈದ್ ಅಲ್ ಖುದ್ರಿ (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ವರದಿ ಮಾಡುತ್ತಾರೆ – ಅಲ್ಲಾಹನ ಸಂದೇಶವಾಹಕರು (ಅಲ್ಲಾಹನು ಅವರನ್ನು ಉನ್ನತಿಗೇರಿಸಲಿ ಹಾಗೂ ಅವರಿಗೆ ಶಾಂತಿಯನ್ನು ದಯಪಾಲಿಸಲಿ) ಹೇಳಿದರು - ನನ್ನಿಂದ ಕುರ್‌ಆನಿನ ಹೊರತು ಬೇರೆ ಯಾವುದನ್ನೂ ದಾಖಲಿಸಿಡಬಾರದು. ಯಾರಾದರು <u>ಕುರ್‌ಆನಿನ ಹೊರತು</u> ಯಾವುದನ್ನಾದರೂ ಬರೆದಿಟ್ಟಿದ್ದರೆ ಅವರು ಅದನ್ನು ಅಳಿಸಿಬಿಡಬೇಕು.’

---

ಆದುದರಿಂದ, ತಮ್ಮದೇ ಆದ ಬೋಧನೆಗಳ ಪ್ರಕಾರ,

**ಅವರು ಪ್ರವಾದಿಯ ಆಜ್ಞೆಯನ್ನು ಉಲ್ಲಂಘಿಸುತ್ತಾರೆ**

# ವಿಶ್ಮಯಕಾರಿ ವಾಸ್ತವಿಕತೆ:

# ಅವರು ತಮ್ಮ ಬೋಧನೆಗಳನ್ನೇ ಅನುಸರಿಸುವುದಿಲ್ಲ

---

ಅತ್ಯಂತ “ವಿಶ್ವಾಸಾರ್ಹ” ಎಂದು ಪರಿಗಣಿಸಲ್ಪಡುವ ಹದೀಸ್ ಮೂಲಗಳ ಪ್ರಕಾರ, ಪ್ರವಾದಿಯು ತನ್ನಿಂದ ಕೇವಲ ಕುರ್‌ಆನನ್ನು ಮಾತ್ರ ದಾಖಲಿಸಿಡಬೇಕೆಂಬ ತನ್ನ ನಿಲುವುನಿಂದ ಎಂದೂ ಬದಲಾಗಿಲ್ಲ.

عَنْ عَبْدِ الْمُطَّلِبِ بْنِ عَبْدِ اللهِ قَالَ : [دَخَلَ زَيْدُ بْنُ ثَابِتٍ رَضِيَ اللهُ
عَنْهُ عَلَى مُعَاوِيَةَ رَضِيَ اللهُ عَنْهُ ، فَحَدَّثَهُ حَدِيثاً ، فَأَمَرَ إِنْسَاناً أَنْ يَكْتُبَ .
فَقَالَ زَيْدٌ : إِنَّ رَسُولَ اللهِ صَلَّى اللهُ عَلَيْهِ وَسَلَّمَ نَهَى أَنْ نَكْتُبَ شَيْئاً
مِنْ حَدِيثِهِ ، فَمَحَاهُ] .

(أحمد جـ ١ ص ١٩٢)

‘ಝೈದ್ ಇಬ್ನ್ ಸಾಬಿತ್ (ಪ್ರವಾದಿಯ ನಿಕಟ ಸಂಗಾತಿ) ಖಲೀಫ ಮುಆವಿಯರನ್ನು (ಪ್ರವಾದಿಯ ಮರಣದ 30 ವರ್ಷಗಳ ನಂತರ) ಭೇಟಿ ನೀಡಿ, ಅವರಿಗೆ ಪ್ರವಾದಿಯ ಬಗ್ಗೆ ಒಂದು ಹದೀಸನ್ನು ಹೇಳಿದರು. ಮುಆವಿಯರು ಆ ಹದೀಸ್ ಬರೆದಿಡಲು ಒರ್ವನಿಗೆ ಆಜ್ಞಾಪಿಸಿದರು. ಆದರೆ ಆಗ ಝೈದ್ ಹೇಳಿದರು, ‘ಅಲ್ಲಾಹನ ಸಂದೇಶವಾಹಕರು, ತಮ್ಮ ಯಾವುದೇ ಹದೀಸುಗಳನ್ನು ಬರೆದಿಡುವುದನ್ನು ನಮಗೆ ನಿಷೇಧಿಸಿದ್ದಾರೆ’. (ವರದಿ: ಇಬ್ನ್ ಹಂಬಲ್)’

---

**ಅವರು ತಾವೇ ಸೃಷ್ಟಿಸಿರುವ ತಮ್ಮ ಮೂರ್ತಿಯ ಅವಿಧೇಯರಾಗಿದ್ದಾರೆ**

# ತಾವು ಮೆಚ್ಚುವವುಗಳನ್ನೆಲ್ಲಾ ಕಂಡುಕೊಳ್ಳುವಂತಹ ಒಂದು ಪುಸ್ತಕವು ಅವರೊಂದಿಗಿದೆಯೇ?: ಕುರ್‌ಆನ್

ಹಿಂದಿನ ಪುಟಗಳಲ್ಲಿ ಉಲ್ಲೇಖಿಸಿರುವಂತಹ ಹದೀಸಿನೊಂದಿಗೆ, ಹದೀಸ್ ಹಾಗೂ ಸುನ್ನದ ಅನುಯಾಯಿಗಳನ್ನು ಎದುರಾದರೆ, ಅಂತಹ ಹದೀಸಿನ ಅಸ್ಥಿತ್ವವನ್ನು ಅವರು ಒಪ್ಪಿಕೊಳ್ಳುತ್ತಾರೆ. ಆದರೆ, ಪ್ರವಾದಿಗಳು ತಮ್ಮ ಹದೀಸುಗಳನ್ನು ಬರೆದಿಡಲು ಆಜ್ಞಾಪಿಸಿರುವಂತಹ ಅಷ್ಟೇ "ವಿಶ್ವಾಸಾರ್ಹ"ವಾದ ಬೇರೆ ಹದೀಸುಗಳೂ ಅಸ್ಥಿತ್ವದಲ್ಲಿರುವ ಅಂಶವನ್ನು ಮುಂದಿಟ್ಟುಕೊಂಡು, ತಮ್ಮದೇ ಆದ ಬೋಧನೆಗಳನ್ನು ಅನುಸರಿಸಲಾಗದ ತಮ್ಮ ವೈಫಲ್ಯತೆಯನ್ನು ವಿವರಿಸಲು ಪ್ರಯತ್ನಿಸುತ್ತಾರೆ.

ಇಂತಹ ಜನರನ್ನು ಕುರ್‌ಆನ್ "ಅಕ್ರಮಿಗಳು" ಎಂದು ಗುರುತಿಸಿಕೊಡುತ್ತದೆ ಮತ್ತು 'ಅವರು ಇಚ್ಛಿಸುವುದನ್ನೆಲ್ಲಾ ಕಂಡುಕೊಳ್ಳುವಂತಹ ಒಂದು ಪುಸ್ತಕವು ಅವರೊಂದಿಗಿದೆಯೇ???' ಎಂಬ ಪ್ರಶ್ನೆಯನ್ನು ಕೇಳುತ್ತದೆ:

مَا لَكُمْ كَيْفَ تَحْكُمُونَ ○ أَمْ لَكُمْ كِتَابٌ فِيهِ تَدْرُسُونَ ○ إِنَّ لَكُمْ فِيهِ لَمَا تَخَيَّرُونَ ○

*"ನಿಮಗೇನಾಗಿದೆ? ಅದೆಂತಹ ತೀರ್ಮಾನ ಮಾಡುತ್ತಿರುವಿರಿ? ಅಥವಾ ನೀವು ಏನನ್ನು ಮೆಚ್ಚುತ್ತೀರೋ ಅದನ್ನೇ ನಿಖರವಾಗಿ ಕಂಡುಕೊಳ್ಳುವ ತಾವು ಓದಿಕೊಳ್ಳಬಹುದಾದ ಪುಸ್ತಕವೇನಾದರೂ ನಿಮ್ಮ ಬಳಿಯಿದೆಯೇ?" (68:35-38)*

---

'ಹೌದು!!!' ಎಂದು ಹೆಮ್ಮೆಯಿಂದ ಅವರು ಅಲ್ಲಾಹನಿಗೆ ಪ್ರತಿಯುತ್ತರ ನೀಡುತ್ತಿದ್ದಾರೆ. "ಅವರು ಮೆಚ್ಚುವುದನ್ನೆಲ್ಲಾ ನಿಖರವಾಗಿ ಕಂಡುಕೊಳ್ಳುವಂತಹ ಪುಸ್ತಕ" ಎಂಬ ಕುರ್‌ಆನಿನ ವರ್ಣನೆಗೆ ಅವರ ಹದೀಸ್ ಹಾಗೂ ಸುನ್ನ ಪರಿಪೂರ್ಣವಾಗಿ ಹೊಂದಿಕೊಳ್ಳುತ್ತದೆ.

---

ಸಂದೇಶವಾಹಕರ ಉನ್ನತ ದರ್ಜೆಯನ್ನೂ, ಇಸ್ಲಾಮಿನ ಸುಂದರ ನಿಲುವನ್ನೂ, ಕುರ್‌ಆನಿನ ಮೂಲ ಆಶಯವನ್ನೂ ಧ್ವಂಸಗೊಳಿಸುವ ತಂತ್ರದೊಂದಿಗೆ ಹೆಣೆಯಲಾದ ಈ ಹದೀಸ್ ಹಾಗೂ ಸುನ್ನ ಎಂಬ ಪುಸ್ತಕ ರಾಶಿಗಳು - ಇಂದು ಘನತೆ ಗೌರವನ್ನು ಮೆರೆದು ಇಸ್ಲಾಮಿನ ಎರಡನೇ ಮೂಲಾಧಾರವಾಗಿ ಅಂಗೀಕರಿಸಲ್ಪಡುತ್ತಿದೆ. ಆದರೆ, ಅವುಗಳ ಸಂಶಯಾಸ್ಪದ ಹಾಗೂ ವೈರುಧ್ಯಮಯ ಸ್ವರೂಪವು ಸರಳವಾಗಿ ಪತ್ತೆಹಚ್ಚಬಹುದಾದ ಸಂಗತಿಯಾಗಿದೆ. ಆದರೆ, ಅವರ ಹೃದಯಗಳಿಗೆ ಮುದ್ರೆಯೊತ್ತಿ ಬಿಟ್ಟಿದೆ!

# ಇಸ್ಲಾಮ್ ನುಚ್ಚುನೂರಾಗಿ ಒಡೆದು ಹೋಗಿರುವುದಕ್ಕೆ ಕಾರಣವೇನು?

ಇಂದು ಇಸ್ಲಾಮಿನ ಹೆಸರಲ್ಲಿ ಹಲವಾರು ಪಂಗಡಗಳು, ಮಧ್'ಹಬ್'ಗಳು ಅಣಬೆಗಳಂತೆ ಅಸ್ಥಿತ್ವದಲ್ಲಿರುವುದು ನಾವೆಲ್ಲರೂ ಅಸಹ್ಯಪಡಬೇಕಾದಂತಹ ಸತ್ಯಾಂಶವಾಗಿದೆ. ಗಮನಿಸಬೇಕಾದ ಅಂಶವೆಂದರೆ, ಈ ಅಸಂಖ್ಯ ಪಂಗಡಗಳ ಅಸ್ಥಿತ್ವದ ಮೂಲಾಧಾರಗಳು ಒಂದೇ - ಅದು ಹದೀಸ್ ಹಾಗೂ ಸುನ್ನ. ಆದಾಗ್ಯೂ, ಪ್ರತಿಯೊಂದು ಪಂಗಡಗಳ ಆಶಯ, ಆಚಾರ-ವಿಚಾರ, ವೇಷಭೂಷಣ ಎಲ್ಲವೂ ವ್ಯತ್ಯಸ್ತವಾಗಿದೆ. ವಿಚಿತ್ರವೇನೆಂದರೆ, ಈ ಎಲ್ಲಾ ಪಂಗಡಗಳಿಗೂ ತಮ್ಮ ನಿಲುವನ್ನು ಸಮರ್ಥಿಸಲು ತಮಗೆ ಬೇಕಾದ ಹದೀಸುಗಳು ತಮ್ಮ ಹತೋಟಿಯಲ್ಲಿದೆ ಮತ್ತು 'ಇದುವೇ ಮುಹಮ್ಮದರ ನೈಜ್ಯ ಸುನ್ನವಾಗಿದೆ' ಎಂದು ಹೆಮ್ಮೆಯಿಂದ ದಾವೆ ಮಾಡುತ್ತಾರೆ. ಇದನ್ನು ಅವರು ತಮ್ಮ ನಡುವೆ ಪರಸ್ಪರ ನ್ಯಾಯೀಕರಿಸುವ ಸೆಣಸಾಟದಲ್ಲಿ ತೊಡಗಿದ್ದಾರೆ. ಆ ಕಾರಣದಿಂದ ಪ್ರಪಂಚದ ಯಾವ ಮೂಲೆಯಲ್ಲಿ ನೋಡಿದರೂ ಇಂತಹ ಪಂಗಡಗಳ ನಡುವೆ ನಡೆಯುವ ಜಗಳ, ದಂಗೆ, ಕೊಲೆಪಾತಕಗಳು ನಮಗೆ ವಿಷಾದಕರವಾದ ಕಹಿ-ಸತ್ಯವಾಗಿದ್ದರೂ, ಸಹಜವಾಗಿ ಇತರ ಜನರಿಗೆ ಇದು ಹಾಸ್ಯಾಸ್ಪದ ಸಂಗತಿಯಾಗಿಬಿಟ್ಟಿದೆ. ಕುರ್'ಆನಿನ ಈ ಎಚ್ಚರಿಕೆಯನ್ನು ಪರಿಗಣಿಸುತ್ತಿರುತ್ತಿದ್ದರೆ, ಮುಸ್ಲಿಮರಿಗೆ ಈ ದುರ್ಗತಿ ಬಂದೊದಗುತ್ತಿರಲಿಲ್ಲ:

وَاعْتَصِمُواْ بِحَبْلِ اللّهِ جَمِيعًا وَلاَ تَفَرَّقُواْ

*"ನೀವೆಲ್ಲರೂ ಒಟ್ಟಾಗಿ ಅಲ್ಲಾಹನ ಹಗ್ಗವನ್ನು (ಅವನು ಇಳಿಸಿಕೊಟ್ಟಿರುವಂತಹ ಕುರ್'ಆನನ್ನು) ಬಿಗಿಯಾಗಿ ಹಿಡಿಯಿರಿ ಮತ್ತು ಭಿನ್ನಭಿನ್ನರಾಗದಿರಿ" (3:103)*

---

ಅಲ್ಲಾಹನು ಪ್ರವಾದಿ ಮುಹಮ್ಮದರಿಗೆ ಇಳಿಸಿಕೊಟ್ಟಿರುವುದು ಕೇವಲ ಕುರ್'ಆನ್ ಮಾತ್ರವಾಗಿದೆ ಎಂಬುವುದು ಈಗಾಗಲೇ ಹಿಂದಿನ ಪುಟಗಳಲ್ಲಿ ಕುರ್'ಆನಿನ ಉಲ್ಲೇಖಗಳೊಂದಿಗೆ ಸೂಚಿಸಲಾಗಿರುವಂತೆ ನಿಮಗೆ ಸ್ಪಷ್ಟವಾಗಿರಬೇಕು. ಅಂತಹ ಕುರ್'ಆನನ್ನು ಭದ್ರವಾಗಿ ಹಿಡಿದುಕೊಂಡರೆ - ಮುಸ್ಲಿಮರು ಒಗ್ಗಟ್ಟಾಗಿರಬಹುದೆಂದೂ, ಅದನ್ನು ಕೈಬಿಟ್ಟು ಇತರ ಮಾನವ ನಿರ್ಮಿತ ಹಗ್ಗಗಳನ್ನು ಹಿಡಿಯಲು ಹೋದರೆ ಕುಸಿದು ಬಿದ್ದು ಛಿದ್ರಛಿದ್ರವಾಗಿ ಬಿಡುವಿರೆಂದೂ ಮೇಲಿನ ವಚನವು ಭವಿಷ್ಯ ನುಡಿದಿದೆ.

# ತೀರ್ಪಿನ ದಿನದಂದು ಪ್ರವಾದಿ ಮುಹಮ್ಮದರ ಆಕ್ಷೇಪಣೆ

ಸಂದೇಶವಾಹಕರು ತೀರ್ಪಿನ ದಿನದಂದು ಹೇಳಲಿರುವ ಮಾತನ್ನು ಇನ್ನೊಮ್ಮೆ ಶ್ರದ್ಧೆಯಿಂದ ನೋಡಿರಿ:

وَقَالَ الرَّسُولُ يَا رَبِّ إِنَّ قَوْمِي اتَّخَذُوا هَٰذَا الْقُرْآنَ مَهْجُورًا ○

*“ಸಂದೇಶವಾಹಕರು ಹೇಳುವರು, ‘ಓ ಪ್ರಭುವೇ, ನನ್ನ ಜನಾಂಗವು ಈ ಕುರ್‌ಆನನ್ನು ತ್ಯಜಿಸಿದರು’.” (25:30)*

ಅಂದು ಸಂದೇಶವಾಹಕರು ತನ್ನ ಹೆಸರಿನಲ್ಲಿ ಪ್ರಚಾರ ಮಾಡಲಾಗಿದ್ದ ಹದೀಸ್ ಅಥವಾ ಸುನ್ನವನ್ನು ತ್ಯಜಿಸಿದರೆಂದು ಹೇಳುವುದಾಗಿ ಕುರ್‌ಆನ್ ನಮಗೆ ಇಲ್ಲಿ ಹೇಳುತ್ತಿಲ್ಲ. ಸಹಜವಾಗಿ ಅಂದು ಸಂದೇಶವಾಹಕರು ಆಕ್ಷೇಪಿಸಲಿರುವುದು ತಾವು ತಲುಪಿಸಿರುವಂತಹ ಕುರ್‌ಆನನ್ನು ತ್ಯಜಿಸಿರುವವರ ಬಗ್ಗೆಯಾಗಿರುತ್ತದೆ ಎಂಬುವುದು ಮೇಲಿನ ವಚನದಲ್ಲಿ ಸ್ಪಟಿಕದಂತೆ ಹೊಳೆಯುತ್ತಿದೆ. ನಾನು ಇನ್ನೇನು ಹೇಳಲಿ?

# ಜೀವನದ ಎರಡು ದೌರ್ಭಾಗ್ಯಕರ ವಾಸ್ತವಿಕತೆ

1. ಜನರಲ್ಲಿ ಹೆಚ್ಚಿನವರು ಸತ್ಯ-ನಿಷೇಧಿಗಳಾಗಿರುತ್ತದೆ.
2. ಸತ್ಯ-ವಿಶ್ವಾಸಿಗಳಲ್ಲಿ ಹೆಚ್ಚಿನವರು ಮೂರ್ತಿ-ಆರಾಧಕರಾಗಿರುತ್ತಾರೆ.

وَمَا أَكْثَرُ النَّاسِ وَلَوْ حَرَصْتَ بِمُؤْمِنِينَ ○

*“ನೀವು ಎಷ್ಟೇ ಆಗ್ರಹಿಸಿದರೂ ಸಹ, ಜನರಲ್ಲಿ ಹೆಚ್ಚಿನವರು ವಿಶ್ವಾಸವಿರಿಸುವವರಲ್ಲ.” (12:103)*

وَمَا يُؤْمِنُ أَكْثَرُهُمْ بِاللَّهِ إِلَّا وَهُمْ مُشْرِكُونَ ○

*“ಅವರಲ್ಲಿ ಹೆಚ್ಚಿನವರು ಮೂರ್ತೀ-ಆರಾಧಕರಾಗಿ ಅಲ್ಲದೆ ಅಲ್ಲಾಹನಲ್ಲಿ ವಿಶ್ವಾಸವಿರಿಸುವುದಿಲ್ಲ.” (12:106)*

---

ಆದುದರಿಂದ, ನೀವು ಬಹುಮತೀಯರಲ್ಲಿದ್ದರೆ, ನೀವು ಆಪತ್ತಿನಲ್ಲಿದ್ದೀರಿ. ನೀವು ವಿಶ್ವಾಸಿಗಳಲ್ಲಿ ಬಹುಮತೀರಲ್ಲಿದ್ದರೂ ಸಹ ನೀವು ದೊಡ್ಡ ಆಪತ್ತಿನಲ್ಲಿದ್ದೀರಿ.

ಕೇವಲ ಅಲ್ಲಾಹನ ಸೇವೆ ಮಾಡುವವರು ವಿರಳವಾಗಿರುತ್ತಾರೆ ಮತ್ತು ಭಾಗ್ಯಶಾಲಿಗಳಾಗಿರುತ್ತಾರೆ. ಅವರು ಯಾವಾಗಲೂ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರಾಗಿರುತ್ತಾರೆ.

## ಸಮಸ್ಯೆ ಏನೆಂದರೆ – ತಾವು ಸನ್ಮಾರ್ಗಿಗಳೆಂದು ಅವರು ಭಾವಿಸುತ್ತಾರೆ

---

وَمَن يَعْشُ عَن ذِكْرِ الرَّحْمَٰنِ نُقَيِّضْ لَهُ شَيْطَانًا فَهُوَ لَهُ قَرِينٌ o وَإِنَّهُمْ لَيَصُدُّونَهُمْ عَنِ السَّبِيلِ وَيَحْسَبُونَ أَنَّهُم مُّهْتَدُونَ o

*“ದಯಾಮಯನಾದವನ ಸ್ಮರಣೆಯನ್ನು (ಅಥವಾ ಅವನು ದಯಪಾಲಿಸಿರುವ ನೆನಪೋಲೆಯನ್ನು) ಯಾರು ಅಲಕ್ಷಿಸುವನೋ, ಅವನಿಗೆ ನಾವೊಬ್ಬ ಶೈತಾನನನ್ನು ನೇಮಿಸಿ ಬಿಡುವೆವು ಮತ್ತು ಅವನು ಆತನ ಆಪ್ತಮಿತ್ರನಾಗಿ ಬಿಡುತ್ತಾನೆ. ಈ ಶೈತಾನರು ಇಂತಹವರನ್ನು ಸನ್ಮಾರ್ಗದಿಂದ ತಡೆಯುತ್ತಾರೆ ಮತ್ತು ನಾವು ಸನ್ಮಾರ್ಗದಲ್ಲೇ ಸಾಗುತ್ತಿದ್ದೇವೆಂದು ಅವರು ತಮ್ಮ ಪಕ್ಕೆ ತಿಳಿದುಕೊಂಡಿರುತ್ತಾರೆ.” (43:36-37)*

---

قُلْ هَلْ نُنَبِّئُكُم بِالْأَخْسَرِينَ أَعْمَالًا o الَّذِينَ ضَلَّ سَعْيُهُمْ فِي الْحَيَاةِ الدُّنْيَا وَهُمْ يَحْسَبُونَ أَنَّهُمْ يُحْسِنُونَ صُنْعًا o

*“(ಸಂದೇಶವಾಹಕರೇ) ಹೇಳಿರಿ, ತಮ್ಮ ಕರ್ಮಗಳಲ್ಲಿ ಅತ್ಯಧಿಕ ವಿಫಲರಾಗುವವರು ಯಾರೆಂದು ನಿಮಗೆ ತಿಳಿಸಲೇ? ಈ ಲೌಕಿಕ ಜೀವನದಲ್ಲಿ ಯಾರ ಪರಿಶ್ರಮಗಳು ಸನ್ಮಾರ್ಗದಿಂದ ತಪ್ಪಿಹೋಗಿದ್ದು, ತಾವು ಮಾಡುತ್ತಿರುವುದೆಲ್ಲವೂ ಸರಿಯೇ ಎಂದು ತಿಳಿದುಕೊಂಡಿರುವವರಾಗಿದ್ದಾರೋ ಅವರು.” (18:103-104)*

---

مِنَ الَّذِينَ فَرَّقُوا دِينَهُمْ وَكَانُوا شِيَعًا كُلُّ حِزْبٍ بِمَا لَدَيْهِمْ فَرِحُونَ o

*“ದೀನನ್ನು (ಅಲ್ಲಾಹನು ಸಮ್ಮತಿಸಿರುವ ಜೀವನ ರೀತಿಯನ್ನು) ಧರ್ಮಗಳನ್ನಾಗಿ ವಿಂಗಡನೆ ಮಾಡಿದವರಲ್ಲಿರುವ ಪ್ರತಿಯೊಂದು ಪಂಗಡವೂ ತಮ್ಮ ಬಳಿ ಏನಿದೆಯೋ ಅದರಲ್ಲಿ ತಲ್ಲೀನವಾಗಿದೆ. (30:32)*

# ಅವರಿಗೆ ತಮ್ಮ ಮೂರ್ತಿ ಆರಾಧನೆಯ ಬಗ್ಗೆ ಅರಿವಿಲ್ಲ

ವಿಶ್ವಾಸಿಗಳಲ್ಲಿ ಹೆಚ್ಚಿನವರು ತಮ್ಮ ಅರಿವಿಲ್ಲದೆಯೇ ಮೂರ್ತಿ ಆರಾಧನೆಗೆ ತುತ್ತಾಗಿ ಬಿಡುತ್ತಾರೆ. ತಾವು ಮೂರ್ತಿ ಆರಾಧಕರೆಂದು ಅವರು ತಿಳಿದಿಲ್ಲ:

وَيَوْمَ نَحْشُرُهُمْ جَمِيعًا ثُمَّ نَقُولُ لِلَّذِينَ أَشْرَكُوا أَيْنَ شُرَكَاؤُكُمُ الَّذِينَ كُنتُمْ تَزْعُمُونَ○ ثُمَّ لَمْ تَكُن فِتْنَتُهُمْ إِلاَّ أَن قَالُوا وَاللّهِ رَبِّنَا مَا كُنَّا مُشْرِكِينَ○ انظُرْ كَيْفَ كَذَبُوا عَلَى أَنفُسِهِمْ وَضَلَّ عَنْهُم مَّا كَانُوا يَفْتَرُونَ○

*“ನಾವು ಅವರನ್ನೆಲ್ಲಾ ಆ ದಿನದಂದು ಒಟ್ಟುಗೂಡಿಸುವೆವು. ನಂತರ ‘ನೀವು ಸೃಷ್ಟಿಸಿಕೊಂಡಿದ್ದಂತಹ ಮೂರ್ತಿಗಳು ಎಲ್ಲಿದ್ದಾರೆ?’ ಎಂದು ಮೂರ್ತಿ ಆರಾಧಕರೊಂದಿಗೆ ಕೇಳಲಾಗುವುದು. ಆಗ ಅವರು ‘ಓ ಪ್ರಭೂ, ನಿನ್ನಾಣೆ ನಾವು ಮೂರ್ತಿ ಆರಾಧಕರಾಗಿರಲಿಲ್ಲ’ ಎಂಬ ನೆವವನ್ನು ನುಡಿಯುವರು. ಅವರು ತಾವೇ ತಮ್ಮ ಮೇಲೆ ಸುಳ್ಳನ್ನು ಹೇಗೆ ಸೃಷ್ಟಿಸಿಕೊಂಡಿದ್ದರೆಂದು ಮತ್ತು ತಾವು ಸೃಷ್ಟಿಸಿಕೊಂಡಿದ್ದ ಮೂರ್ತಿಗಳು ಅವರನ್ನು ಹೇಗೆ ದಾರಿತಪ್ಪಿಸಿದವೆಂದು ನೀವು ನೋಡಿರಿ. (6:22-24)*

---

ಆದುದರಿಂದ, ಅವರು ತಮ್ಮ ಮೂರ್ತಿ ಆರಾಧನೆಯ ಬಗ್ಗೆ ತಮಗೇ ಅರಿವಿಲ್ಲದಂತಹ ಜನರಿದ್ದಾರೆ. ಅವರಲ್ಲಿ ಒಬ್ಬರು ನೀವಾಗಿರಲು ಸಾಧ್ಯವಿದೆಯೇ? ಅವರಲ್ಲಿ ನೀವು ಒಬ್ಬರಾಗಿಲ್ಲ ಎಂದು ನಿಮಗೆ ಹೇಗೆ ತಿಳಿದಿದೆ? ಇದು, ನೀವು ಒಬ್ಬ ಮೂರ್ತಿ ಆರಾಧಕರಲ್ಲವೆಂದು ಖಚಿತಗೊಳಿಸಬಹುದಾದ ನಿಮಗಿರುವ ಏಕೈಕ ಅವಕಾಶವಾಗಿದೆ.

---

**ನೀವು ಮೂರ್ತಿ ಆರಾಧಕರಲ್ಲಿ ಒಬ್ಬರಲ್ಲವೆಂದು ಖಚಿತಗೊಳಿಸುವುದು ಹೇಗೆ?**

ಉತ್ತರಕ್ಕಾಗಿ ನಂತರದ ಪುಟವನ್ನು ನೋಡಿ.

# ‘ಹದೀಸ್ ಹಾಗೂ ಸುನ್ನ’ದ ಮಹತ್ವ

‘ಹದೀಸ್ ಹಾಗೂ ಸುನ್ನ’ ಎಂಬುವವುಗಳು ಮಿಥ್ಯ ಮುಸ್ಲಿಮರಿಂದ ನೈಜ್ಯ ಮುಸ್ಲಿಮರನ್ನು ಬೇರ್ಪಡಿಸುವ ಅನಿವಾರ್ಯ ಪರೀಕ್ಷೆಯ ಕಾರ್ಯವನ್ನು ನಿರ್ವಹಿಸುತ್ತದೆ.

ಕುರ್‌ಆನ್ ಸಮಗ್ರವಾಗಿದೆ, ಪರಿಪೂರ್ಣವಾಗಿದೆ ಮತ್ತು ವಿವರಪೂರ್ಣವಾಗಿದೆ ಎಂಬ ಅಲ್ಲಾಹನ ಹೇಳಿಕೆಯ ಮೇಲೆ (6: 38, 114, 115) ನೈಜ್ಯ ಮುಸ್ಲಿಮರು ವಿಶ್ವಾಸವಿರಿಸುತ್ತಾರೆ. ನೈಜ್ಯ ಮುಸ್ಲಿಮರು ದೀನಿನ (ಜೀವನ ರೀತಿಯ) ಮೂಲವಾಗಿ ಬೇರೆ ಯಾವುದನ್ನೂ ಸ್ವೀಕರಿಸುವುದಿಲ್ಲ.

ಮಿಥ್ಯ ಮುಸ್ಲಿಮರ ಕುರಿತಂತೆ, ಅವರು ‘ಹದೀಸ್ ಹಾಗೂ ಸುನ್ನ’ದ ಕಡೆಗೆ ಆಕರ್ಷಿತರಾಗುತ್ತಾರೆ. ಹಾಗೆ ಅವರು ತಮ್ಮ ಹೃದಯಗಳು ನಿರಾಕರಿಸುತ್ತದೆಯಾದರೂ, ವಿಶ್ವಾಸದ ದಾವೆಯನ್ನು ಹೂಡುವ ಕಪಟವಿಶ್ವಾಸಿಗಳಾಗಿ ಬಯಲಿಗೆಳೆಯಲ್ಪಡುತ್ತಾರೆ. (16:22ನ್ನು ನೋಡಿ).

وَكَذَٰلِكَ جَعَلْنَا لِكُلِّ نَبِيٍّ عَدُوًّا شَيَاطِينَ الْإِنسِ وَالْجِنِّ يُوحِي بَعْضُهُمْ إِلَىٰ بَعْضٍ زُخْرُفَ
الْقَوْلِ غُرُورًا وَلَوْ شَاءَ رَبُّكَ مَا فَعَلُوهُ فَذَرْهُمْ وَمَا يَفْتَرُونَ ○

*“ಮತ್ತು ಹಾಗೆ, ಪ್ರತಿಯೊಂದು ಪ್ರವಾದಿಗಳಿಗೆ ನಾವು ಮಾನವ ಶೈತಾನರ ಮತ್ತು ಜಿನ್ನ್ ಶೈತಾನರ ಪೈಕಿ ಶತ್ರುಗಳನ್ನು ನೇಮಕಮಾಡಿದ್ದೇವೆ ಹಾಗೂ ಅವರು ಜನರನ್ನು ಮೋಸಗೊಳಿಸುವ ಸಲುವಾಗಿ ಅಲಂಕಾರಿಕ ಪದಗಳ ಆವಿಷ್ಕಾರ ಮಾಡಿ ಪರಸ್ಪರ ಉತ್ತೇಜಿಸುತ್ತಾರೆ. ನಿಮ್ಮ ಪ್ರಭುವು ಇಚ್ಛೆಸುತ್ತಿದ್ದರೆ, ಅವರು ಇದನ್ನು ಮಾಡುತ್ತಿರಲಿಲ್ಲ. ನೀವು ಅವರನ್ನೂ ಮತ್ತು ಅವರ ಆವಿಷ್ಕಾರವನ್ನೂ ಕಡೆಗಣಿಸಿರಿ.” (6:112)*

---

ನೀವು ಕುರ್‌ಆನಿನೊಂದಿಗೆ ತೃಪ್ತಿಹೊಂದಿದ್ದೀರಾ? ಅಲ್ಲಾಹನಲ್ಲಿ ವಿಶ್ವಾಸವಿರಿಸುತ್ತೀರಾ?

ಅಥವಾ ಅದಕ್ಕೆ ವ್ಯತಿರಿಕ್ತವಾಗಿ, ಕುರ್‌ಆನ್ ಪರಿಪೂರ್ಣವಲ್ಲವೆಂದೂ, ಅದನ್ನು ವಿವರಿಸಲು ಪ್ರವಾದಿಯ ಹೆಸರಲ್ಲಿ ಬರೆದಿಟ್ಟಿರುವ ಮೂಲಗಳ ಅವಶ್ಯಕತೆಯಿದೆ ಎಂದೂ ನಿಮಗನಿಸುತ್ತಿದೆಯಾ? ಹಾಗಿದ್ದಲ್ಲಿ ತೀರ್ಪಿನ ದಿನದಂದು ನಿಮ್ಮ ಬಗ್ಗೆ ಹತಾಶೆಗೊಂಡು ನಿಮ್ಮ ವಿರುದ್ಧ ದೂರು ನೀಡುವವರಲ್ಲಿ ಮೊದಲಿಗರು ನಮ್ಮ ಪ್ರವಾದಿಯರೇ ಆಗಿರುತ್ತಾರೆ. (ಪುಟ 22 ನೋಡಿ)

# ಏಕೈಕ ಅಧಿಕೃತ 'ಹದೀಸ್'

تِلْكَ آيَاتُ اللهِ نَتْلُوهَا عَلَيْكَ بِالْحَقِّ فَبِأَيِّ حَدِيثٍ بَعْدَ اللهِ وَآيَاتِهِ يُؤْمِنُونَ ○ وَيْلٌ لِّكُلِّ
أَفَّاكٍ أَثِيمٍ ○ يَسْمَعُ آيَاتِ اللهِ تُتْلَىٰ عَلَيْهِ ثُمَّ يُصِرُّ مُسْتَكْبِرًا كَأَن لَّمْ يَسْمَعْهَا فَبَشِّرْهُ
بِعَذَابٍ أَلِيمٍ ○ وَإِذَا عَلِمَ مِنْ آيَاتِنَا شَيْئًا اتَّخَذَهَا هُزُوًا أُولَٰئِكَ لَهُمْ عَذَابٌ مُّهِينٌ ○ مِن
وَرَائِهِمْ جَهَنَّمُ وَلَا يُغْنِي عَنْهُم مَّا كَسَبُوا شَيْئًا وَلَا مَا اتَّخَذُوا مِن دُونِ اللهِ أَوْلِيَاءَ وَلَهُمْ
عَذَابٌ عَظِيمٌ ○ هَٰذَا هُدًى وَالَّذِينَ كَفَرُوا بِآيَاتِ رَبِّهِمْ لَهُمْ عَذَابٌ مِّن رِّجْزٍ أَلِيمٌ ○

*"ಇವುಗಳು ನಾವು ನಿಮಗೆ ಸತ್ಯತೆಯೊಂದಿಗೆ ಓದಿಕೇಳಿಸುತ್ತಿರುವ ಅಲ್ಲಾಹನ ಅವತೀರ್ಣವಾಗಿದೆ; ಅಲ್ಲಾಹನ ಹಾಗೂ ಅವನ ವಚನಗಳ ಹೊರತು ಇತರ ಯಾವ ಹದೀಸುಗಳನ್ನು ಅವರು ವಿಶ್ವಾಸವಿಡುತ್ತಾರೆ? ಪ್ರತಿ ಅಪರಾಧಿ ಸಂಶೋಧಕನಿಗೆ ವಿಪತ್ತು ಕಾದಿದೆ. ಅಲ್ಲಾಹನ ವಚನಗಳು ಅವನಿಗೆ ಓದಲಾಗುವುದನ್ನು ಅವನು ಕೇಳಿಸಿಕೊಳ್ಳುತ್ತಾನೆ, ಆನಂತರ ಅವುಗಳನ್ನು ಯಾವತ್ತೂ ಕೇಳಲೇ ಇಲ್ಲವೆಂಬಂತೆ, ಸೊಕ್ಕಿನಿಂದ ತನ್ನದೇ ದಾರಿಯನ್ನು ಸಮರ್ಥಿಸುತ್ತಾನೆ. ಅವನಿಗೆ ವೇದನಾಭರಿತ ಪ್ರತೀಕಾರದ ಭರವಸೆಯನ್ನು ನೀಡಿರಿ. ನಮ್ಮ ವಚನಗಳ ಪೈಕಿ ಏನಾದರೂ ವಿಷಯ ಅವನಿಗೆ ತಿಳಿದಾಗ ಅವನು ಅವುಗಳನ್ನು ಗೇಲಿ ಮಾಡುತ್ತಾನೆ. ಅಂತಹವರಿಗೆ ಅಪಮಾನಕಾರಿ ಯಾತನೆಯಿದೆ. ಅವರ ಮುಂದೆ ನರಕವಿದೆ. ಅವರ ಈ ಲೋಕದ ಯಾವ ಸಂಪಾದನೆಯೂ ಅವರ ಪಾಲಿಗೆ ಕಿಂಚಿತ್ತೂ ಫಲಕಾರಿಯಾಗಲಾರದು ಮತ್ತು ಅಲ್ಲಾಹನನ್ನು ಬಿಟ್ಟು ತಮ್ಮ ರಕ್ಷಕ ಮಿತ್ರರನ್ನಾಗಿ ಮಾಡಿಕೊಂಡವರಾರೂ ಅವರಿಗಾಗಿ ಏನನ್ನೂ ಮಾಡಲಾರರು. ಅವರಿಗೆ ಘೋರ ಯಾತನೆಯಿದೆ. ಇದು (ಈ ಕುರ್‌ಆನ್) ಮಾರ್ಗದರ್ಶನವಾಗಿದೆ ಮತ್ತು ತಮ್ಮ ಪ್ರಭುವಿನ ವಚನಗಳನ್ನು (ಕುರ್‌ಆನನ್ನು) ನಿರಾಕರಿಸುವವರಿಗೆ ತೀವ್ರ ವೇದನಾಯುಕ್ತವಾದ ಯಾತನೆಯಿದೆ."* (45:6-11)

---

ನೀವು ಅಲ್ಲಾಹನ ವಚನಗಳಲ್ಲಿ ವಿಶ್ವಾಸವಿರಿಸುತ್ತೀರಾ? ಕುರ್‌ಆನ್ ಸಮಗ್ರವಾಗಿದೆ, ಪರಿಪೂರ್ಣವಾಗಿದೆ, ಹಾಗೂ ವಿವರಪೂರ್ಣವಾಗಿದೆ (6:38, 114, 115) ಎಂದು ನೀವು ವಿಶ್ವಾಸವಿರಿಸುತ್ತೀರಾ? ಅಥವಾ, ನಿಮ್ಮಲ್ಲಿ ಕುರ್‌ಆನಿನ ಹೊರತು ಇತರ ಮೂಲಗಳಿವೆಯೇ?

# ಅನುಸರಿಸಲ್ಪಡಬೇಕಾದ ಏಕೈಕ ‘ಹದೀಸ್’ ಕುರ್‌ಆನ್ ಆಗಿದೆ – ಇತರ ಹದೀಸುಗಳು ತಪ್ಪುದಾರಿಗೆಳೆಯುವ ಮಿಥ್ಯರಚನೆಗಳಾಗಿವೆ

---

اللهُ نَزَّلَ أَحْسَنَ الْحَدِيثِ كِتَابًا مُّتَشَابِهًا مَّثَانِيَ تَقْشَعِرُّ مِنْهُ جُلُودُ الَّذِينَ يَخْشَوْنَ رَبَّهُمْ
ثُمَّ تَلِينُ جُلُودُهُمْ وَقُلُوبُهُمْ إِلَى ذِكْرِ اللهِ ذَلِكَ هُدَى اللهِ يَهْدِي بِهِ مَنْ يَشَاءُ وَمَن يُضْلِلْ
اللهُ فَمَا لَهُ مِنْ هَادٍ ○

*“ಸ್ಥಿರತೆಯುಳ್ಳಂತಹ ಹಾಗೂ ಸ್ವತಃ ಪುನರಾವರ್ತಿಸುವ ಅತ್ಯುತ್ತಮ ಹದೀಸನ್ನು (ಅಹ್ಸನಲ್ ಹದೀಸ್ – ಅಥವಾ ಅತ್ಯುತ್ತಮ ಮಾಹಿತಿಯನ್ನು) ಅಲ್ಲಾಹನು ಒಂದು ಗ್ರಂಥದ ರೂಪದಲ್ಲಿ ಅವತೀರ್ಣಗೊಳಿಸಿದ್ದಾನೆ. ತಮ್ಮ ಪ್ರಭುವನ್ನು ಲಕ್ಷಿಸುವವರು ಅವುಗಳಿಂದ ರೋಮಾಂಚನಗೊಳ್ಳುತ್ತಾರೆ ಮತ್ತು ಅವರ ಚರ್ಮ ಹಾಗೂ ಹೃದಯಗಳು ಅಲ್ಲಾಹನ ಸ್ಮರಣೆಯ ಕಡೆಗೆ ಮೆದುವಾಗುತ್ತದೆ. ಅದಾಗಿದೆ ಅಲ್ಲಾಹನ ಮಾರ್ಗದರ್ಶನ. ಅವನು ಇಚ್ಛಿಸುವವರಿಗೆ ಅದರ ಮೂಲಕ ಮಾರ್ಗದರ್ಶನವನ್ನು ನೀಡುತ್ತಾನೆ. ಆದರೆ ಅಲ್ಲಾಹನಿಂದ ದಾರಿ ತಪ್ಪಿಸಲ್ಪಟ್ಟವನು ಯಾವುದೇ ಮಾರ್ಗದರ್ಶನವನ್ನು ಪಡೆಯಲು ಸಾಧ್ಯವಿಲ್ಲ.” (39:23)*

وَمِنَ النَّاسِ مَن يَشْتَرِي لَهْوَ الْحَدِيثِ لِيُضِلَّ عَن سَبِيلِ اللهِ بِغَيْرِ عِلْمٍ وَيَتَّخِذَهَا هُزُوًا
أُولَئِكَ لَهُمْ عَذَابٌ مُّهِينٌ ○ وَإِذَا تُتْلَى عَلَيْهِ آيَاتُنَا وَلَّى مُسْتَكْبِرًا كَأَن لَّمْ يَسْمَعْهَا كَأَنَّ
فِي أُذُنَيْهِ وَقْرًا فَبَشِّرْهُ بِعَذَابٍ أَلِيمٍ ○

*“ನಿಷ್ಪ್ರಯೋಜಕವಾದ ಹದೀಸುಗಳನ್ನು ವಿಕ್ರಯಿಸುವ ಮೂಲಕ ಅಲ್ಲಾಹನ ಪಥದಿಂದ ಜ್ಞಾನರಹಿತವಾಗಿ ದಾರಿಗೆಡಿಸುವವರು ಜನರ ನಡುವೆ ಇದ್ದಾರೆ. ಇಂತಹವರಿಗೆ ಬಹಳ ಅಪಮಾನಕರ ಯಾತನೆ ಇದೆ. ಅವನಿಗೆ ನಮ್ಮ ವಚನಗಳು ಓದಿ ಕೇಳಿಸಿದಾಗ ಅವನು ಅವುಗಳನ್ನು ತಾನು ಕೇಳಲೇ ಇಲ್ಲವೆಂಬಂತೆ, ಅವನ ಕಿವಿಗಳು ಕಿವುಡಾಗಿರುವಂತೆ ದುರಹಂಕಾರದಿಂದ ಮುಖ ತಿರುಗಿಸಿ ಬಿಡುತ್ತಾನೆ. ಅವನಿಗೆ ವೇದನಾಯುಕ್ತ ಯಾತನೆಯ ಸುವಾರ್ತೆಯನ್ನು ಕೊಡಿರಿ.” (31:6-7)*

**ವಿವರಿಸಬೇಕಾದ ಯಾವುದೇ ವಿಷಯವು ಕುರ್‌ಆನಿನಲ್ಲಿ ಬಿಟ್ಟುಹೋಗಿಲ್ಲ (6:38)**

**ಕುರ್‌ಆನ್ ವಿವರಪೂರ್ಣವಾಗಿದೆ (6:114)**

**ಕುರ್‌ಆನ್ ಪರಿಪೂರ್ಣವಾಗಿದೆ (6:115)**

**ಮಾನವರಿಗೆ ಪರಿಪೂರ್ಣ ಬೋಧನೆಯು ಕುರ್‌ಆನಿನಲ್ಲಿದೆ (17:41, 18:54, 30:58, 39:27)**

**ಕುರ್‌ಆನ್ ಮಾನವರಿಗಿರುವ ಸುವ್ಯಕ್ತ ಪ್ರಮಾಣವಾಗಿದೆ (4:174)**

**ಕುರ್‌ಆನ್ ವಿಶ್ವಾಸವಿರಿಸುವವರಿಗಾಗಿ ಸವಿಸ್ತಾರಗೊಂಡಿದೆ (7:52)**

**ಸಂದೇಶವಾಹಕರು ಕೇವಲ ಕುರ್‌ಆನನ್ನು ಮಾತ್ರ ತಲುಪಿಸಿದ್ದಾರೆ (69:40-47)**

**ಹದೀಸ್ ಹಾಗೂ ಸುನ್ನ ಎಂಬುವವುಗಳು ದೈವನಿಂದನೀಯ ಮಿಥ್ಯರಚನೆಗಳಾಗಿವೆ (6:112)**

**ಕೇವಲ ಕುರ್‌ಆನನ್ನು ಮಾತ್ರ ಎತ್ತಿಹಿಡಿಯಬೇಕಾಗಿದೆ (6:19 ಮತ್ತು 7:3 ಇತ್ಯಾದಿ)**

**ಕುರ್‌ಆನ್ ಸಾಕಾಗದೇ (29:51)**

**ಹಾಗಾದರೆ, ಇವುಗಳನ್ನು ಕಂಡುಕೊಳ್ಳಲು ಅವರು ಏಕೆ ವಿಫಲರಾಗುತ್ತಾರೆ???!!!**

# ಅವರು ಅಲ್ಲಾಹನಲ್ಲಿ ವಿಶ್ವಾಸವಿರಿಸಲು ಏಕೆ ವಿಫಲರಾಗುತ್ತಾರೆ?

ಏಕೆಂದರೆ, ಅವರ ಅಂತರಾಳದಲ್ಲಿ ನಿರಾಕರಣೆಯು ನೆಲೆನಿಂತು ಬಿಟ್ಟಿದೆ. ಅವರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಕಾರಣ ನೈಜ್ಯ ವಿಶ್ವಾಸವನ್ನು ಸ್ವೀಕರಿಸಲು ನಿರಾಕರಿಸುತ್ತಾರೆ.

إِلَٰهُكُمْ إِلَٰهٌ وَاحِدٌ فَالَّذِينَ لَا يُؤْمِنُونَ بِالْآخِرَةِ قُلُوبُهُم مُّنكِرَةٌ وَهُم مُّسْتَكْبِرُونَ ○

*"ನಿಮ್ಮ ದೇವನು ಕೇವಲ ಏಕ-ದೇವನಾಗಿದ್ದಾನೆ. ಅಂತಿಮ ದಿನ (ಅಲ್ಲಾಹನ ಕಾನೂನು ಕಾರ್ಯಗತವಾಗುವ ಕಾಲ)ದ ಮೇಲೆ ವಿಶ್ವಾಸವಿರಿಸದವರ ಹೃದಯಗಳಲ್ಲಿ ನಿರಾಕರಣೆಯು ನೆಲೆನಿಂತು ಬಿಟ್ಟಿದೆ ಮತ್ತು ಅವರು ಅಹಂಕಾರಿಗಳಾಗಿದ್ದಾರೆ. (16:22)*

---

ಈ ನಿರಾಕರಣೆಯ ಪರಿಣಾಮವಾಗಿ ಅವರು ಕುರ್‌ಆನಿನಿಂದ ಸಂಪೂರ್ಣವಾಗಿ ಬೇರ್ಪಡಿಸಲ್ಪಡುವರು:

وَإِذَا قَرَأْتَ الْقُرْآنَ جَعَلْنَا بَيْنَكَ وَبَيْنَ الَّذِينَ لَا يُؤْمِنُونَ بِالْآخِرَةِ حِجَابًا مَّسْتُورًا ○

وَجَعَلْنَا عَلَىٰ قُلُوبِهِمْ أَكِنَّةً أَن يَفْقَهُوهُ وَفِي آذَانِهِمْ وَقْرًا وَإِذَا ذَكَرْتَ رَبَّكَ فِي الْقُرْآنِ وَحْدَهُ

وَلَّوْا عَلَىٰ أَدْبَارِهِمْ نُفُورًا ○

*"ನೀವು ಕುರ್‌ಆನನ್ನು ಪಠಿಸುವಾಗ, ಅಂತಿಮ (ದಿನ)ದಲ್ಲಿ ವಿಶ್ವಾಸವಿರಿಸದವರ ಮತ್ತು ನಿಮ್ಮ ನಡುವೆ ನಾವು ಒಂದು ಅದೃಷ್ಯ ತೆರೆಯನ್ನು ಹಾಕಿ ಬಿಡುವೆವು. ಮತ್ತು ಅವರು ಅದನ್ನು (ಕುರ್‌ಆನನ್ನು) ಗ್ರಹಿಸದಂತಾಗಲು ಅವರ ಹೃದಯಗಳ ಮೇಲೆ ಹೊದಿಕೆಯನ್ನು ಹಾಗೂ ಅವರ ಕಿವಿಗಳಲ್ಲಿ ಕಿವುಡುತನವನ್ನು ನಿರ್ಮಿಸುವೆವು. ಪರಿಣಾಮವಾಗಿ, ನೀವು **ಕೇವಲ** ಕುರ್‌ಆನಿನ ಮೂಲಕ ನಿನ್ನ ಪ್ರಭುವನ್ನು ಪ್ರಸ್ತಾಪಿಸುವಾಗ ಅವರು ತಿರಸ್ಕಾರದ ಮುಖ ತಿರುಗಿಸಿ ಬಿಡುವರು." (17:45-46)*

---

ಆದುದರಿಂದ, ಅವರಿಗೆ ಕೇವಲ ಕುರ್‌ಆನನ್ನು ಮಾತ್ರ ಸ್ವೀಕರಿಸಲು ಸಾಧ್ಯವಾಗುವುದಿಲ್ಲ – ಅವರು 'ಹದೀಸ್ ಹಾಗೂ ಸುನ್ನ' ಎಂಬ ಇತರ ಮೂಲಗಳ ಬೆನ್ನು ಹಿಡಿಯುತ್ತಾರೆ.

# ಮುಸ್ಲಿಮರು ಏಕೆ ಹಿಂದುಳಿದಿದ್ದಾರೆ

ವಿಜ್ಞಾನ, ಭೌತಶಾಸ್ತ್ರ, ಜೀವಶಾಸ್ತ್ರ ಎಲ್ಲದರಲ್ಲೂ ಅತ್ಯಂತ ಹಿಂದುಳಿದ ಮಟ್ಟದಲ್ಲಿ ಈ ಮುಸ್ಲಿಮ್ ಎಂದುಕೊಳ್ಳುವ ರಾಷ್ಟ್ರಗಳು ಇಂದು ನೆಲೆನಿಂತಿವೆ. ಅವರು ಇಂದಿಗೂ ಮಧ್ಯಯುಗದ ಅರಬೀ ಪುರಾಣ ಮತ್ತು ಸಂಸ್ಕೃತಿಯಲ್ಲಿ ಹೇಗೆ ಪರಿಣಿತರಾಗುವುದೆಂದು ಕಂಡುಹಿಡಿಯುವುದರಲ್ಲಿ ನಿರತರಾಗಿದ್ದರೆ. ಕೇವಲ ಕುರ್‌ಆನನ್ನು ಎತ್ತಿಹಿಡಿದು, ಇತರ ಮಿಥ್ಯರಚನೆಗಳ ಬೆನ್ನು ಹಿಡಿಯಲು ಹೋಗದೆ - ಅಲ್ಲಾಹನು ಕುರ್‌ಆನಿನಲ್ಲಿ ಸೂಚಿಸಿದಂತೆ ಭೂಮಿ ಮತ್ತು ಆಕಾಶಗಳಲ್ಲಿನ ಅಲ್ಲಾಹನ ನಿದರ್ಶನಗಳನ್ನು ಅಧ್ಯಯನ ಮಾಡಿರುತ್ತಿದ್ದರೆ - ಮುಸ್ಲಿಮರು ಬಹುಶಃ ಆಧುನಿಕ ಜಗತ್ತಿನ ನೂತನ ಆವಿಷ್ಕಾರಗಳಲ್ಲಿ ಅಗ್ರಗಣ್ಯರಾಗಿರುತ್ತಿದ್ದರು. ಇಂದು ಅವರಿಗೆ ತಮ್ಮ ಎಲ್ಲಾ ಅವಶ್ಯಕತೆಗಳಿಗೂ ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಅವಲಂಭಿಸಿರಬೇಕಾದ ಅವಸ್ಥೆ ಬಂದೊದಗಿದೆ. ಮುಂಜಾನೆ ಎದ್ದು ರಾತ್ರಿ ಮಳಗಲು ಹೋಗುವ ತನಕ ತಾವು ಉಪಯೋಗಿಸುತ್ತಿರುವ ಬಹುತೇಕ ಪ್ರತಿಯೊಂದು ಉಪಕರಣಗಳೂ ತಾವು ದ್ವೇಷಿಸುತ್ತಿರುವ ಅರಬೇತರ ರಾಷ್ಟ್ರಗಳ ಉತ್ಪನ್ನಗಳಾಗಿವೆ.

ಕುರ್‌ಆನ್ ಸಮಗ್ರ ಹಾಗೂ ವಿವರಪೂರ್ಣವಾಗಿದೆ ಮತ್ತು ಅದುವೇ ದಿವ್ಯಜ್ಞಾನದ ಏಕೈಕ ಮೂಲವಾಗಿದೆ ಎಂಬ ಅಲ್ಲಾಹನ ಪುನರಾವರ್ತಿಸಲ್ಪಟ್ಟ ವಚನಗಳಲ್ಲಿ ವಿಶ್ವಾಸವಿಡಲು ಅವರು ನಿರಾಕರಿಸಿದರು. ಅವರ ಚಿಂತನೆ, ಮಾತು, ಕಾರ್ಯಗಳು - ಅವನತಿ ಹಾಗೂ ಅನುತ್ಪಾದಕತೆಯನ್ನು ಪ್ರೋತ್ಸಾಹಿಸುವ - 'ಹದೀಸ್ ಹಾಗೂ ಸುನ್ನ' ಎಂಬ ಗ್ರಂಥಗಳ ಮೇಲೆ ಆಧರಿತವಾಗಿದೆ.

إِنَّ فِي خَلْقِ السَّمَاوَاتِ وَالأَرْضِ وَاخْتِلاَفِ اللَّيْلِ وَالنَّهَارِ وَالْفُلْكِ الَّتِي تَجْرِي فِي الْبَحْرِ بِمَا يَنفَعُ
النَّاسَ وَمَا أَنزَلَ اللّهُ مِنَ السَّمَاءِ مِن مَّاءٍ فَأَحْيَا بِهِ الأَرْضَ بَعْدَ مَوْتِهَا وَبَثَّ فِيهَا مِن كُلِّ دَآبَّةٍ
وَتَصْرِيفِ الرِّيَاحِ وَالسَّحَابِ الْمُسَخِّرِ بَيْنَ السَّمَاءِ وَالأَرْضِ لآيَاتٍ لِّقَوْمٍ يَعْقِلُونَ ○

*"ಆಕಾಶಗಳ ಮತ್ತು ಭೂಮಿಯ ನಿರ್ಮಾಣದಲ್ಲಿ, ಇರುಳು ಹಗಲುಗಳು ಒಂದರ ಹಿಂದೆ ಇನ್ನೊಂದರಂತೆ ನಿರಂತರವಾಗಿ ಬರುತ್ತಿರುವುದರಲ್ಲಿ, ಜನೋಪಯೋಗಿ ಸಾಮಾಗ್ರಿಗಳನ್ನು ಹೊತ್ತುಕೊಂಡು ಜಲಧಿಗಳಲ್ಲಿ ಸಂಚರಿಸುತ್ತಿರುವ ನೌಕೆಗಳಲ್ಲಿ, ಅಲ್ಲಾಹನು ಆಕಾಶದಿಂದ ಸುರಿಸಿ ಅದರ ಮೂಲಕ ಭೂಮಿಯನ್ನು ನಿರ್ಜೀವಾವಸ್ಥೆಯ ಬಳಿಕ ಸಜೀವಗೊಳಿಸಿ, ಆ ವ್ಯವಸ್ಥೆಯ ಮೂಲಕ ಭೂಮಿಯಲ್ಲಿ ತರತರದ ಜೀವರಾಶಿಗಳು ಹರಡಿದಂತೆ ಮಾಡಿದ ಮಳೆ ನೀರಿನಲ್ಲಿ, ಮಾರುತಗಳ ಚಲನೆಯಲ್ಲಿ ಹಾಗೂ ಆಕಾಶ ಮತ್ತು ಭೂಮಿಯ ನಡುವೆ ನಿಯಂತ್ರಿಸಲ್ಪಟ್ಟಿರುವ ಮೋಡಗಳಲ್ಲಿ ನಿಶ್ಚಯವಾಗಿಯೂ ವಿಚಾರವಂತರಿಗೆ ಅನೇಕಾನೇಕ ನಿದರ್ಶನಗಳಿವೆ." (2:164)*

# ‘ಹದೀಸ್ ಹಾಗೂ ಸುನ್ನ’ಗಳು ಕುರ್‌ಆನಿನ ಎದುರಾಳಿಗಳಾಗಿವೆ

ವ್ಯಭಿಚಾರಿಗಳಿಗೆ ನೂರು ಛಡಿಯೇಟು ಕೊಡಬೇಕೆಂದು ವ್ಯಭಿಚಾರದ ವಿರುದ್ಧ ‘ಸುಸ್ಪಷ್ಟ’ವಾದ ಶಿಕ್ಷೆಯ ಕಾನೂನನ್ನು ಕುರ್‌ಆನ್ ವಿಧಿಸಿದೆ.

سُورَةٌ أَنزَلْنَاهَا وَفَرَضْنَاهَا وَأَنزَلْنَا فِيهَا آيَاتٍ بَيِّنَاتٍ لَّعَلَّكُمْ تَذَكَّرُونَ ○ الزَّانِيَةُ وَالزَّانِي فَاجْلِدُوا كُلَّ وَاحِدٍ مِّنْهُمَا مِئَةَ جَلْدَةٍ وَلَا تَأْخُذْكُم بِهِمَا رَأْفَةٌ فِي دِينِ اللَّهِ إِن كُنتُمْ تُؤْمِنُونَ بِاللَّهِ وَالْيَوْمِ الْآخِرِ وَلْيَشْهَدْ عَذَابَهُمَا طَائِفَةٌ مِّنَ الْمُؤْمِنِينَ ○

*“ಇದೊಂದು ಅಧ್ಯಾಯ, ಇದನ್ನು ನಾವು ಅವತೀರ್ಣಗೊಳಿಸಿದ್ದೇವೆ, ಇದನ್ನು ನಾವು ಕಡ್ಡಾಯಗೊಳಿಸಿರುತ್ತೇವೆ ಮತ್ತು ನೀವು ಪಾಠ ಕಲಿಯುವಂತಾಗಲು, ಇದರಲ್ಲಿ ನಾವು ಸುಸ್ಪಷ್ಟ ಆದೇಶಗಳನ್ನು ಅವತೀರ್ಣಗೊಳಿಸಿದ್ದೇವೆ. ವ್ಯಭಿಚಾರಿ ಮತ್ತು ವ್ಯಭಿಚಾರಿಣಿ ಇವರಿಬ್ಬರಲ್ಲಿ ಪ್ರತಿಯೊಬ್ಬರಿಗೂ ನೂರು ಛಡಿಯೇಟು ಕೊಡಿರಿ. ನೀವು ಅಲ್ಲಾಹನ ಹಾಗೂ ಅಂತಿಮ ದಿನದ ಮೇಲೆ ವಿಶ್ವಾಸವಿರಿಸುತ್ತೀರಾದರೆ, ಅಲ್ಲಾಹನ ದೀನಿನ ವಿಷಯದಲ್ಲಿ ಅವರ ಮೇಲಿನ ಕನಿಕರವು ನಿಮ್ಮನ್ನು ತಡೆಯದಿರಲಿ. ಅವರಿಗೆ ಶಿಕ್ಷೆ ಕೊಡುವಾಗ ಸತ್ಯವಿಶ್ವಾಸಿಗಳ ಒಂದು ಸಮೂಹವು ಅಲ್ಲಿ ಉಪಸ್ಥಿತವಿರಲಿ.” (24:1-2)*

ಆದರೆ, ಕುರ್‌ಆನಿನಲ್ಲಿ ವ್ಯಭಿಚಾರಿಗಳನ್ನು ಅವರ ವೈವಾಹಿತ ಸ್ಥಿತಿಯನ್ನು ಸಂಬಂಧಿಸಿದಂತೆ ನಿರೂಪಿಸಲಾಗಿಲ್ಲ ಎಂದು ಆರೋಪಿಸಿ – ಹಲವಾರು ಹದೀಸುಗಳ ಆಧಾರದಲ್ಲಿ ವಿವಾಹಿತ ವ್ಯಭಿಚಾರಿಗಳನ್ನು ‘ಕಲ್ಲುಹೊಡೆದು ಕೊಲ್ಲುವ’ ಕ್ರೂರ ಶಿಕ್ಷೆಯನ್ನು ‘ಮುಸ್ಲಿಮ್ ವಿದ್ವಾಂಸರು’ ಜಾರಿಗೊಳಿಸಿದರು. ಅಷ್ಟೇ ಅಲ್ಲದೆ, ಇದನ್ನು ಸಮರ್ಥಿಸಲು, ಕುರ್‌ಆನನ್ನು ಹೀಯ್ಯಾಳಿಸುವಂತಹ ಈ ಕೆಳಗಿನ ಹದೀಸನ್ನು ಮುಂದಿಡುತ್ತಾರೆ:

[ಆಯಿಷಾ (ರ) ಹೇಳಿದರು] ‘ಕಲ್ಲುಹೊಡೆದು ಕೊಲ್ಲುವ ಹಾಗೂ ವಯಸ್ಕರಿಗೆ ಹತ್ತು ಬಾರಿ ಮೊಲೆಯುನಿಸುವ ವಚನಗಳು ಅವತೀರ್ಣಗೊಂಡಿತ್ತು ಮತ್ತು ಅವುಗಳು ಒಂದು ಕಾಗದದಲ್ಲಿ ಬರೆಯಲಾಗಿತ್ತು ಮತ್ತು ಅದನ್ನು ನನ್ನ ಹಾಸಿಗೆಯ ಅಡಿಯಲ್ಲಿ ಇಡಲಾಗಿತ್ತು. ಅಲ್ಲಾಹನ ಸಂದೇಶವಾಹಕರು ಮರಣಹೊಂದಿದಾಗ, ನಾವು ಅವರ ಮರಣದ ಬಗ್ಗೆ ಮಗ್ನರಾಗಿದ್ದೆವು. ಒಂದು ಆಡು ಒಳನುಗ್ಗಿ ಆ ಕಾಗದವನ್ನು ತಿಂದುಬಿಟ್ಟಿತು.’

(Musnad Ahmad bin Hanbal. vol. 6. p.269; Sunan Ibn Majah, p.626; Ibn Qutbah, Tawil Mukhtalafi'l-Hadith (Cairo: Maktaba al-Kulliyat al-Azhariyya.1966) p.310; As-Suyuti, ad-Durru'l-Manthur, vol.2. p. 13)

ಕುರ್‌ಆನನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಸ್ವತಃ ಅಲ್ಲಾಹನೇ ವಹಿಸಿದ್ದಾನೆಂದು ವಚನ 15:9ರಲ್ಲಿ ಅವನು ನಮಗೆ ತಿಳಿಸಿದ್ದಾನೆ. ಹೀಗೆ ಅಲ್ಲಾಹನನ್ನು, ಇಸ್ಲಾಮನ್ನು, ಕುರ್‌ಆನನ್ನು, ಸಂದೇಶವಾಹಕರನ್ನು ಹಾಸ್ಯಾಸ್ಪದವಾಗಿ ಚಿತ್ರಿಸಿರುವುದು ಹದೀಸುಗಳ ಸರ್ವೇಸಾಮಾನ್ಯ ಅಂಶವಾಗಿದೆ ಹಾಗೂ ಪ್ರಮುಖ ಧ್ಯೇಯವಾಗಿದೆ.

# ಅಲ್ಲಾಹನನ್ನು ಅನುಸರಿಸಿರಿ ಹಾಗೂ ಸಂದೇಶವಾಹಕರನ್ನು ಅನುಸರಿಸಿರಿ

**ಅಲ್ಲಾಹನನ್ನು ಅನುಸರಿಸುವುದೆಂದರೆ ಕುರ್‌ಆನನ್ನು ಅನುಸರಿಸುವುದಾಗಿದೆ ಮತ್ತು ಸಂದೇಶವಾಹಕರನ್ನು ಅನುಸರಿಸುವುದೆಂದರೆ 'ಹದೀಸ್ ಹಾಗೂ ಸುನ್ನ'ವನ್ನು ಅನುಸರಿಸುವುದಾಗಿದೆ** - ಎಂದು ನಂಬುವಂತೆ ಶೈತಾನನು ಲಕ್ಷಾಂತರ ಮುಸ್ಲಿಮರನ್ನು ವಂಚಿಸಿದ್ದಾನೆ.

ಮೊದಲನೆಯದಾಗಿ, ಮುಸ್ಲಿಮ್ ಸಮುದಾಯದೊಳಗೆ ಕುರ್‌ಆನಿನ ಬಗ್ಗೆ ಇರುವ ಸಾಮಾನ್ಯ ಅಜ್ಞಾನ ಮತ್ತು ಎರಡನೆಯದಾಗಿ, ನ್ಯಾಯಶಾಸ್ತ್ರದ ಹಾಗೂ ದೀನಿನ ಮಾರ್ಗದರ್ಶನದ **ಏಕೈಕ ಮೂಲ**ವು ಕೇವಲ ಕುರ್‌ಆನ್ ಮಾತ್ರವಾಗಿದೆ ಎಂಬ ದೈವಿಕ ಆಜ್ಞೆಗೆ ಗಮನ ನೀಡದಿರುವುದು – ಇವೆರಡು, ಶೈತಾನನ ಈ ತಂತ್ರವು ಇಷ್ಟೊಂದು ಜನಪ್ರಿಯಗೊಳ್ಳಲು ಸಹಕಾರಿಯಾದ ಅಂಶಗಳಾಗಿದೆ.

ಕುರ್‌ಆನ್ ಒಂದು ಗ್ರಂಥದ ರೂಪದಲ್ಲಿ ನಮಗೆ ತಲುಪಿರುವುದು ಸಂದೇಶವಾಹಕರಾದ ಮುಹಮ್ಮದರ ಮೂಲಕವಾಗಿದೆ ಮತ್ತು ಅದು ನಮಗೆ ಅಲ್ಲಾಹನಿಂದ ನೇರವಾಗಿ ತಲುಪಿಲ್ಲ. ಅವರು ಅಲ್ಲಾಹನಿಂದ ದೊರೆಯುವ ಪದಗಳನ್ನು ನಮಗೆ ತಲುಪಿಸಿದ ಕಾರಣವಾಗಿ, ಸಂದೇಶವಾಹಕರನ್ನು ಅನುಸರಿಸಿರಿ ಎಂಬ ಆಜ್ಞೆಯು ಕುರ್‌ಆನಿನಲ್ಲಿ ತಿಳಿಸಲಾಗಿದೆ ಎಂಬುವುದನ್ನು ಯಾವ ಸರಳ ಮನಸ್ಸಿಗೂ ಅರಿತುಕೊಳ್ಳಬಹುದಾದ ಸಂಗತಿಯಾಗಿದೆ.

"ಯಾರು ಸಂದೇಶವಾಹಕರನ್ನು ಅನುಸರಿಸುವರೋ ಅವರು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸುತ್ತಿದ್ದಾನೆ" ಎಂಬ ಕುರ್‌ಆನಿನ ಸತ್ಯಾಂಶವು ಕುರ್‌ಆನಿಗಿಂತ ಮುಂಚೆ ಅವತೀರ್ಣಗೊಂಡ ಎಲ್ಲಾ ಗ್ರಂಥದಲ್ಲೂ ದಾಖಲಾಗಿದೆ. ಸಹಜವಾಗಿ, ಸಂದೇಶವಾಹಕರು ದೇವನಲ್ಲ. ಆದುದರಿಂದ, ಈ ಆಜ್ಞೆಯು ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಸಂದೇಶವಾಹಕರು ಉಚ್ಚರಿಸಿದ ಅಲ್ಲಾಹನಿಂದ ದೊರೆಯುವ ಪದಗಳನ್ನು ಅನುಸರಿಸುವುದಾಗಿದೆ.

'ಹದೀಸ್ ಹಾಗೂ ಸುನ್ನ' ಎಂಬುವವುಗಳು, ಜನರನ್ನು ಅಲ್ಲಾಹನ ಪಥದಿಂದ ದಾರಿ ತಪ್ಪಿಸಲು ಹೆಣೆದಿರುವ ಶೈತಾನನ ಮಿಥ್ಯರಚನೆಗಳಾಗಿದೆ ಎಂದು ಜ್ಞಾನಿಗಳು ಮತ್ತು ಅದೃಷ್ಟ ವಿಶ್ವಾಸಿಗಳು ಮನದಟ್ಟು ಮಾಡಿಕೊಳ್ಳುತ್ತಾರೆ.

# ಪ್ರವಾದಿಯ ಹದೀಸುಗಳು ಪ್ರವಾದಿಯರದ್ದೇ ಅಲ್ಲ

ಪ್ರವಾದಿ ಮುಹಮ್ಮದರ ಮೇಲೆ ಹೊರಿಸಲಾಗಿರುವ ಹದೀಸುಗಳ ಒಳಅಂಶ ಹಾಗೂ ಅವುಗಳನ್ನು ಕ್ರೋಡೀಕರಿಸಿದ ವಿಧಾನ, ಅವುಗಳು ಪ್ರಕಾಶನಗೊಂಡ ಅವಧಿ ಹಾಗೂ ಅವುಗಳ ವಿರುದ್ಧ ಕುರ್‌ಆನಿನ ಸುಸ್ಪಷ್ಟ ಹೇಳಿಕೆಗಳ ಆಧಾರದಲ್ಲಿ, ಅವುಗಳು ಪ್ರವಾದಿಯವರ ಮಾತುಗಳೇ ಅಲ್ಲವೆಂಬ ಸತ್ಯಾಂಶವು ಇಂದು ರಹಸ್ಯದ ವಿಷಯವಾಗಿ ಉಳಿದಿಲ್ಲ. ಅವುಗಳು ಪ್ರವಾದಿಯನ್ನು ಎಂದಿಗೂ ಕಣ್ಣಾರೆ ಕಾಣದಂತಹ ಪುರುಷರ ಹಾಗೂ ಮಹಿಳೆಯರ ಹದೀಸುಗಳು (ಹೇಳಿಕೆಗಳು, ನಿರೂಪಣೆಗಳು) ಆಗಿವೆ. ವಾಸ್ತವದಲ್ಲಿ, ಅವರ ಮುತ್ತಜ್ಜರ ಮುತ್ತಜ್ಜರು ಸಹ ಪ್ರವಾದಿಯವರನ್ನು ಭೇಟಿಮಾಡಿರಲಿಲ್ಲ.

ಪ್ರವಾದಿಯವರ ಮರಣದ ಸುಮಾರು 200 ವರ್ಷಗಳ ನಂತರ ಜನಿಸಿದ ಬುಖಾರಿ ಎಂಬವರ ಹದೀಸ್ ಸಂಕಲನವು, ಮೊತ್ತ ಮೊದಲ ಪುಸ್ತಕವಾಗಿದೆ ಎಂಬುವುದು ಎಲ್ಲರೂ ತಿಳಿದಿರುವ ಸಂಗತಿಯಾಗಿದೆ. ಬುಖಾರಿಯು ತನ್ನ ಹದೀಸ್ ಪುಸ್ತಕವನ್ನು ಬರೆಯುವಾಗ, ತಾವು 'ಅಧಿಕೃತ ಮೂಲಗಳು' ಎಂದು ಪರಿಗಣಿಸಲ್ಪಡುವ ವ್ಯಕ್ತಿಗಳನ್ನು ಭೇಟಿಮಾಡುತ್ತಿದ್ದರು. ಆ ವ್ಯಕ್ತಿಯ ಮೂಲವು 'ಪ್ರಾಮಾಣಿಕ'ವಾಗಿದೆ ಮತ್ತು ಆ ವ್ಯಕ್ತಿಯು ಸದಾಚಾರಿ ಆಗಿದ್ದಾನೆ ಅಥವಾ ಆಗಿದ್ದಾಳೆ ಎಂದು ಪರಿಶೀಲಿಸಿದ ನಂತರ, ಬುಖಾರಿಯು ಅವರೊಂದಿಗೆ ಹೀಗೆ ಕೇಳುತ್ತಾರೆ, 'ನಿಮಗೆ ಯಾವುದಾದರೂ ಹದೀಸ್ ತಿಳಿದಿದೆಯೇ?'. ಆ ವ್ಯಕ್ತಿಯು 'ಹೌದು' ಎಂದು ಉತ್ತರಿಸಿ, ಹದೀಸನ್ನು ಹೀಗೆ ನಿರೂಪಿಸಲು ಮುಂದುವರಿಸುತ್ತಾರೆ: "*ನನ್ನ ತಂದೆಯು (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ), ಹೇಳಿದ ಪ್ರಕಾರ – ಅವರು ಅದನ್ನು ತಮ್ಮ ಹಿರಿಯ ಸಹೋದರನಿಂದ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಕೇಳಿದ್ದರು – ಅವರು ಅದನ್ನು ತನ್ನ ಮುತ್ತಜ್ಜಿಯೊಂದಿಗೆ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಒಮ್ಮೆ ಕುಳಿತುಕೊಂಡಿದ್ದಾಗ ಕೇಳಿದ್ದರು – ಅವರು ಅದನ್ನು ತನ್ನ ದೊಡ್ಡಪ್ಪನೊಂದಿಗೆ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಸಂಜೆಯ ಭೋಜನಕ್ಕೆ ಕುಳಿತ್ತಿದ್ದಾಗ ಕೇಳಿದ್ದರು – ಅವರು ಅದನ್ನು ತನ್ನ ಅಜ್ಜನಿಗೆ ತಮಗೆ ಪರಿಚಯವಿದ್ದ ಅಹ್ಮದ್ ಇಬ್ನ್ ಮುಹಮ್ಮದ್ ಅಲ್ ಅಮಾವಿ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಎಂಬ ಇಮಾಮರಿಂದ ಕೇಳಿದ್ದರು – ಅವರು ಅದನ್ನು ತಮ್ಮ ಅತಿ ಹಿರಿಯ ದೊಡ್ಡಪ್ಪರಿಂದ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಕೇಳಿದ್ದರು – ಅವರು ಅದನ್ನು ಪ್ರವಾದಿಯ ಗೌರವಾನ್ವಿತ ಸಹಚರರಾದ ಉಮರ್ ಬಿನ್ ಖಾಲಿದ್ ಅಲ್ ಯಮನಿ (ಅಲ್ಲಾಹನು ಅವರ ಆತ್ಮವನ್ನು ಅನುಗ್ರಹಿಸಲಿ) ಎಂಬವರಿಂದ ಕೇಳಿದ್ದರು – ಅದೇನೆಂದರೆ, ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ಹೀಗೆ ಹೇಳಿದ್ದರು, "................"*.

ಹೀಗೆ, ಹದೀಸ್ ಎಂಬುವುದು – ಒರ್ವ ವ್ಯಕ್ತಿಯು ಎಂಟು ತಲೆಮಾರುಗಳ ಮುಖಾಂತರ, 'ಪ್ರವಾದಿಯ ಇಂತಿಂತಹ ಹೇಳಿಕೆ'ಯನ್ನು ಕೇಳಿರುವುದಾಗಿ ದಾವೆಮಾಡುವಂತಹ ಬುಖಾರಿ ಮತ್ತು (ಅವರ ಅನುಯಾಯಿಗಳಾದ) ತಮ್ಮ ತಂಡದ <u>ಮೂಲಗಳ</u> <u>ನಿರೂಪಣೆಗಳಾಗಿವೆ</u>. ಇನ್ನೊಂದೆಡೆ, ಕುರ್‌ಆನ್ - ಅಲ್ಲಾಹನು ಸ್ವಯಂ ಸಂರಕ್ಷಿಸಿದಂತಹ, ಅವನ ಸಂದೇಶವಾಹಕರ ಮೂಲಕ ತಲುಪಿಸಿದಂತಹ <u>ಅವನ ವಚನಗಳಾಗಿವೆ</u>. ಆದುದರಿಂದ, ಯಾವುದು ಯೋಗ್ಯ ಎಂದು ನೀವೇ ತೀರ್ಮಾನಿಸಿ.

# ಮಹಾ ದುರಂತ

إِنَّ الَّذِينَ كَفَرُوا يُنَادَوْنَ لَمَقْتُ اللَّهِ أَكْبَرُ مِن مَّقْتِكُمْ أَنفُسَكُمْ إِذْ تُدْعَوْنَ إِلَى الْإِيمَانِ
فَتَكْفُرُونَ oقَالُوا رَبَّنَا أَمَتَّنَا اثْنَتَيْنِ وَأَحْيَيْتَنَا اثْنَتَيْنِ فَاعْتَرَفْنَا بِذُنُوبِنَا فَهَلْ إِلَىٰ
خُرُوجٍ مِّن سَبِيلٍ oذَٰلِكُم بِأَنَّهُ إِذَا دُعِيَ اللَّهُ وَحْدَهُ كَفَرْتُمْ وَإِن يُشْرَكْ بِهِ تُؤْمِنُوا فَالْحُكْمُ
لِلَّهِ الْعَلِيِّ الْكَبِيرِo

*“(ತೀರ್ಪಿನ ದಿನದಂದು) ಸತ್ಯನಿಷೇಧಿಗಳೊಂದಿಗೆ ಹೀಗೆ ಹೇಳಲಾಗುವುದು, ‘ಇಂದು ನಿಮಗೆ ನಿಮ್ಮ ಮೇಲೆ ಎಷ್ಟು ತೀವ್ರವಾದ ಕೋಪ ಬರುತ್ತಿದೆಯೋ ಅದಕ್ಕಿಂತಲೂ ತೀವ್ರವಾದ ಕೋಪವು ನಿಮ್ಮನ್ನು ಸತ್ಯವಿಶ್ವಾಸದ ಕಡೆಗೆ ಕರೆಯಲಾಗುತ್ತಿದ್ದ ವೇಳೆ ನೀವು ನಿರಾಕರಿಸುತ್ತಿದ್ದಾಗ, ಅಲ್ಲಾಹನಿಗೆ ನಿಮ್ಮ ಮೇಲೆ ಬರುತ್ತಿತ್ತು’. ಆಗ ಅವರು ಹೇಳುವರು, ‘ನಮ್ಮ ಪ್ರಭೂ, ನಿಜಕ್ಕೂ ನೀನು ನಮಗೆ ಎರಡು ಸಲ ಮರಣವನ್ನೂ ಎರಡು ಸಲ ಜೀವನವನ್ನೂ ನೀಡಿರುವೆ. ಈಗ ನಾವು ನಮ್ಮ ಅಪರಾಧವನ್ನು ಒಪ್ಪಿಕೊಳ್ಳುತ್ತೇವೆ. ಈಗ ಇದರಿಂದ ಪಾರಾಗುವ ಮಾರ್ಗವು ಯಾವುದಾದರೂ ಇದೆಯೇ?’. (ಅವರಿಗೆ ಹೀಗೆ ಉತ್ತರ ಸಿಗುವುದು) ‘ಇದಕ್ಕೆ ಕಾರಣವೇನೆಂದರೆ, ಕೇವಲ ಅಲ್ಲಾಹನನ್ನು ಮಾತ್ರ ಪ್ರಸ್ತಾಪಿಸಲಾಗುತ್ತಿದ್ದಾಗ ನೀವು ನಿರಾಕರಿಸುತ್ತಿದ್ದೀರಿ ಮತ್ತು ಅವನ ಜೊತೆಗೆ ಮೂರ್ತಿಗಳನ್ನು ಸಂಯೋಜಿಸುತ್ತಿದ್ದಾಗ ನೀವು ವಿಶ್ವಾಸವಿರಿಸುತ್ತಿದ್ದೀರಿ. ಈಗ ತೀರ್ಮಾನವು ಅತ್ಯುನ್ನತನೂ ಮಹಾನನೂ ಆದ ಅಲ್ಲಾಹನ ಕೈಯಲ್ಲಿದೆ.” (40:10-12)*

---

**ಕೇವಲ ಅಲ್ಲಾಹನನ್ನು ಮಾತ್ರ ಪ್ರಸ್ತಾಪಿಸುವಾಗ ನೀವು ವಿಶ್ವಾಸವಿರಿಸುತ್ತೀರಾ?**

ಅಥವಾ

**ನಿಮಗೆ ಅವನ ಜೊತೆ ಇತರರನ್ನು ಪ್ರಸ್ತಾಪಿಸಲೇ ಬೇಕಾಗಿದೆಯೇ?**

# ಮಹಾ ದುರಂತ

فَلَمَّا جَاءَتْهُمْ رُسُلُهُم بِالْبَيِّنَاتِ فَرِحُوا بِمَا عِندَهُم مِّنَ الْعِلْمِ وَحَاقَ بِهِم مَّا كَانُوا بِهِ يَسْتَهْزِؤُونo فَلَمَّا رَأَوْا بَأْسَنَا قَالُوا آمَنَّا بِاللهِ وَحْدَهُ وَكَفَرْنَا بِمَا كُنَّا بِهِ مُشْرِكِينَo فَلَمْ يَكُ يَنفَعُهُمْ إِيمَانُهُمْ لَمَّا رَأَوْا بَأْسَنَا سُنَّتَ اللهِ الَّتِي قَدْ خَلَتْ فِي عِبَادِهِ وَخَسِرَ هُنَالِكَ الْكَافِرُونَo

*"ಅವರ ಸಂದೇಶವಾಹಕರು ಅವರ ಬಳಿಗೆ ಪ್ರತ್ಯಕ್ಷ ಪ್ರಮಾಣಗಳನ್ನು ತಂದಾಗ ಅವರು ತಮ್ಮಲ್ಲಿದ್ದ ವಿದ್ಯೆಯಲ್ಲೇ ಮಗ್ನರಾಗಿದ್ದರು ಮತ್ತು ತಾವು ಅಪಹಾಸ್ಯ ಮಾಡುತ್ತಿದ್ದುದರ ಸುಳಿಯಲ್ಲೇ ಅವರು ಸಿಲುಕಿಕೊಂಡರು. ಅವರು ತಮ್ಮ ಯಾತನೆಯನ್ನು ಕಂಡುಕೊಂಡಾಗ, 'ನಾವು ಏಕೈಕನಾದ ಅಲ್ಲಾಹನಲ್ಲಿ ವಿಶ್ವಾಸವಿರಿಸಿದೆವು ಹಾಗೂ ನಾವು ಮೂರ್ತೀಕರಿಸುತ್ತಿದ್ದವುಗಳನ್ನು ಬಿಟ್ಟುಬಿಟ್ಟೆವು' ಎಂದು ಕೂಗಾಡುವವರು. ಆದರೆ, ನಮ್ಮ ಯಾತನೆಯನ್ನು ಕಂಡ ಬಳಿಕ ಅವರ ವಿಶ್ವಾಸವು ಅವರಿಗೆ ಏನೂ ಫಲಕಾರಿಯಾಗುವಂತಿಲ್ಲ. ಏಕೆಂದರೆ, ಅಲ್ಲಾಹನ ಸೇವಕರ ಮಧ್ಯೆ ಸದಾ ಜಾರಿಯಲ್ಲಿದ್ದ ನಿಶ್ಚಿತ ನಿಯಮವು (ಸುನ್ನತ-ಲ್ಲಾಹಿ) ಇದುವೇ ಆಗಿತ್ತು. ಮತ್ತು ಆಗ ಸತ್ಯನಿಷೇಧಿಗಳು ನಷ್ಟದಲ್ಲಿ ಬಿದ್ದು ಬಿಡುವರು." (40:83-85)*

---

ನಿಮ್ಮ ಮಾತಾಪಿತರಿಂದ, ಹಿರಿಯರಿಂದ ಅಥವಾ ವಿದ್ವಾಂಸರುಗಳಿಂದ ಪಾರಂಪರ್ಯವಾಗಿ ಅಥವಾ ಆನುವಂಶಿಕವಾಗಿ ಪಡೆದಿರುವ 'ಹದೀಸ್ ಹಾಗೂ ಸುನ್ನ'ದ ಸಾಂಪ್ರದಾಯಿಕ ತಿಳಿವಳಿಕೆಯಲ್ಲಿ ನೀವು ತೃಪ್ತಿ ಹಾಗೂ ಸಂತೋಷ ಹೊಂದಿರುವಿರಾ?

ಅಲ್ಲಾಹನ ಭೋದನೆಗಳ ಪರವಾಗಿ ಅಂತಹ ತಿಳಿವಳಿಕೆಯನ್ನು ತಿರಸ್ಕರಿಸುವಿರಾ?

ಅಥವಾ ನಿಮಗೆ ಆ ತೀರ್ಮಾನವನ್ನು ತೆಗೆಯಲು ಬಹು ತಡವಾಗಿ ಬಿಡುವುದೋ?

وَإِذَا ذُكِرَ اللهُ وَحْدَهُ اشْمَأَزَّتْ قُلُوبُ الَّذِينَ لَا يُؤْمِنُونَ
بِالْآخِرَةِ وَإِذَا ذُكِرَ الَّذِينَ مِن دُونِهِ إِذَا هُمْ
يَسْتَبْشِرُونَ ○

ಕೇವಲ ಅಲ್ಲಾಹನ ಪ್ರಸ್ತಾಪವೆತ್ತಲಾದಾಗ ಅಂತ್ಯ ದಿನದಲ್ಲಿ ವಿಶ್ವಾಸವಿಲ್ಲದವರ ಹೃದಯಗಳು ಮರುಗಳಾರಂಭಿಸುತ್ತವೆ ಮತ್ತು ಅವನ ಹೊರತು ಇತರರ ಪ್ರಸ್ತಾಪ ಬರುವಾಗ ಅವರು ಒಮ್ಮೆಲೇ ಆನಂದ ತುಂದಿಲರಾಗುತ್ತಾರೆ.”

(39: 45)

# ಸ್ಪಷ್ಟೀಕರಣ – ನಾವು ಯಾಕಾಗಿ ಇಲ್ಲಿದ್ದೇವೆ

ನಾವು ನಮ್ಮ ಅಸ್ಥಿತ್ವದ ಉದ್ದೇಶವನ್ನು ಚೆನ್ನಾಗಿ ಅರಿತುಕೊಂಡರೆ, 'ಹದೀಸ್ ಹಾಗೂ ಸುನ್ನ'ಗಳು ಕುರ್‌ಆನಿನ ಎದುರಾಳಿಗಳಾಗಿವೆ ಎಂಬ ವಿಷಯವು ಸ್ಪಷ್ಟಗೊಳ್ಳುತ್ತದೆ.

ನಾವು ಈ ಪ್ರಪಂಚದಲ್ಲಿ ಜೀವಿಸುತ್ತಿರುವುದರ ಉದ್ದೇಶವು ಒಂದು, ಕೇವಲ ಒಂದೇ ಆಗಿದೆ. ಕುರ್‌ಆನಿನಲ್ಲಿ (67:12 ಮತ್ತು 51:56) ನಮೂದಿಸಿರುವಂತೆ, ನಮ್ಮನ್ನು ಕೇವಲ ಅಲ್ಲಾಹನ ಸೇವೆಗಾಗಿ ಸೃಷ್ಟಿಸಲಾಗಿದೆ.

ಶೈತಾನನು ಅಲ್ಲಾಹನ ಜೊತೆಗೆ ಸಹಭಾಗಿಯಾಗಲು ಇಚ್ಛಿಸಿದನು. ಪರಿಣಾಮವಾಗಿ, ಅಲ್ಲಾಹನು ತನ್ನ ಅಧಿಕಾರವನ್ನು ಪ್ರತಿಭಟಿಸುವ ಶೈತಾನನ ಯೋಜನೆಯನ್ನು ಬಹಿರಂಗ ಪಡಿಸುವ ಸಲುವಾಗಿ ಆದಮರನ್ನು ಸೃಷ್ಟಿಸಿದನು. ಮತ್ತು ನಾವೆಲ್ಲರೂ ಯಾವುದೇ ಮೂರ್ತಿಗಳನ್ನು ಅಥವಾ ಸಹಭಾಗಿಗಳನ್ನು ಮಾಡಿಕೊಳ್ಳದೆ ಕೇವಲ ಅಲ್ಲಾಹನ ಸೇವೆಯನ್ನು ಮಾಡಲು ಸಾಧ್ಯವಿದೆ ಎಂಬುವುದನ್ನು ಶೈತಾನನಿಗೆ ಹಾಗೂ ಎಲ್ಲಾ ಮಲಾಯಿಕರಿಗೆ ತೋರಿಸಲಿಕ್ಕಾಗಿ ಅವನು ನಮ್ಮನ್ನು ಸೃಷ್ಟಿಸಿದನು.

ಆದುದರಿಂದ, ನಮ್ಮ ಅಸ್ಥಿತ್ವದ ಉದ್ದೇಶವು <u>ಕೇವಲ ಅಲ್ಲಾಹನ</u> ಸೇವೆಯನ್ನು ಮಾಡುವುದಾಗಿದೆ. ಇದೇ ಕಾರಣಕ್ಕಾಗಿ, ಕ್ಷಮಿಸಲಾಗದ ಏಕೈಕ ಅಪರಾಧವು <u>ಮೂರ್ತಿ ಆರಾಧನೆಯಾಗಿದೆ</u>. ಏಕೆಂದರೆ, ಅಲ್ಲಾಹನ (ಅಥವಾ ಅವರ ಮಾತುಗಳ, ಆಜ್ಞೆಗಳ, ಕಾನೂನುಗಳ) ಜೊತೆಗೆ ನಾವು ಯಾರನ್ನಾದರೂ ಅಥವಾ ಯಾವುದನ್ನಾದರೂ ಮೂರ್ತೀಕರಿಸಿದರೆ, ನಾವು ಪರೀಕ್ಷೆಯಲ್ಲಿ ಸೋತು ಹೋಗುತ್ತೇವೆ.

ನಾವು ಮುಹಮ್ಮದ್ ಅಥವಾ ಈಸಾ ಅಥವಾ ಮರ್ಯಮ್ ಅಥವಾ ಯಾವುದೇ ಸಂತರ, ಇಮಾಮರ ಅಥವಾ ಯಾರನ್ನೇ ಆಗಲಿ, ಯಾವುದನ್ನೇ ಆಗಲಿ <u>ಮೂರ್ತೀಕರಿಸದೆ</u>, ಅವನು ನಮಗಾಗಿ ನಿಗದಿ ಪಡಿಸಿರುವ ಕುರ್‌ಆನಿನ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ <u>ಕೇವಲ ಅಲ್ಲಾಹನ ಸೇವೆ</u>ಯನ್ನು ಮಾಡುವುದರಲ್ಲಿ ಸಫಲರಾದರೆ ಮಾತ್ರ ನಾವು ನಮ್ಮ ಅಸ್ಥಿತ್ವದ ಉದ್ದೇಶವನ್ನು ಪೂರೈಸಿದಂತಾಗುತ್ತದೆ.

ನಾವು ಅಲ್ಲಾಹನ ಹೊರತು ಇತರ ಯಾವುದೇ ಮೂಲಗಳನ್ನು ದೀನಿನ ಕಾನೂನುಗಳಾಗಿ ಸ್ವೀಕರಿಸಿದರೆ, ಅಲ್ಲಾಹನಿಗೆ ಸಹಭಾಗಿಗಳ ಅವಶ್ಯಕತೆ ಇದೆ ಎಂಬ ಶೈತಾನನ ದಾವೆಯನ್ನು ನಾವು ಬೆಂಬಲಿಸಿದಂತಾಗುತ್ತದೆ. ಆದುದರಿಂದ, ಕೇವಲ ಅಲ್ಲಾಹನ ಸೇವೆಯನ್ನು ಮಾಡುವವರು ಕೇವಲ ಅಲ್ಲಾಹನ ನಿರ್ದೇಶನ ಹಾಗೂ ಬೋಧನೆಗಳನ್ನು ಅನುಸರಿಸುತ್ತಾರೆ. ಈ ಲೇಖನದಲ್ಲಿ ಈಗಾಗಲೇ ವಿವರಿಸಿರುವಂತೆ, ಅಲ್ಲಾಹನ ಬೋಧನಗೆಳು ಕುರ್‌ಆನಿನಲ್ಲಿ ಸಮಗ್ರ, ಪರಿಪೂರ್ಣ ಹಾಗೂ ವಿವರಪೂರ್ಣವಾಗಿದೆ.

# ಅಂತಿಮವಾಗಿ – ಅತ್ಯಂತ ಮಹತ್ವದ ಪ್ರಶ್ನೆ

ನಿಮ್ಮ ಮನಸ್ಸಿನಲ್ಲಿ, ಕೇವಲ ಅಲ್ಲಾಹನನ್ನು ಮಾತ್ರ ನೆಲೆಗೊಳಿಸಲು ಸಾಧ್ಯವಿದೆಯೇ?

ಅಥವಾ ಅಲ್ಲಾಹನನ್ನು ವೈಭವೀಕರಿಸುವಾಗ ಅಥವಾ ಅವನ ಸೇವೆಯನ್ನು ಮಾಡುವಾಗ ಅಲ್ಲಾಹನಿಗೆ ನಿಮ್ಮ ಮನಸ್ಸಿನಲ್ಲಿ ಪ್ರವಾದಿ ಮುಹಮ್ಮದರು ಇರಬೇಕಾದ ಅವಶ್ಯಕತೆ ಇದೆಯೇ?

ನಿಮ್ಮ ಮನಸ್ಸಿನಲ್ಲಿ, ಕೇವಲ ಅಲ್ಲಾಹನನ್ನು ಮಾತ್ರ ನೆಲೆಗೊಳಿಸಲು ಸಾಧ್ಯವಿದೆಯೇ?

ಅಥವಾ ಅಲ್ಲಾಹನಿಗೆ ನಿಮ್ಮ ಮನಸ್ಸಿನಲ್ಲಿ ಸಹಭಾಗಿಗಳಂತೆ ಮುಹಮ್ಮದರು, ಇಬ್ರಾಹೀಮರು, ಈಸಾರು, ಮರ್ಯಮರು, ಸಂತರು, ಇಮಾಮರು ಅಥವಾ ಇತರ ಯಾರಾದರೂ, ಯಾವುದಾದರೂ ಇರಬೇಕಾದ ಅವಶ್ಯಕತೆ ಇದೆಯೇ?

ನಿಮಗೆ ಕೇವಲ ಅಲ್ಲಾಹನ ಬಗ್ಗೆ ಮಾತ್ರ ಮಾತನಾಡುವಾಗ ಅಸಮಧಾನವಾಗುತ್ತದೆಯೇ?

ನಾನು ಕೇವಲ ಅಲ್ಲಾಹನ ಬಗ್ಗೆ ಮಾತ್ರ ಚರ್ಚಿಸುವಾಗ ನಿಮಗೆ ಅತೃಪ್ತಿಯ ಅನುಭವವಾಗುತ್ತದೆಯೇ? ನಿಮಗೆ ಅಲ್ಲಾಹನೊಂದಿಗೆ ಇತರರ ಹೆಸರನ್ನೂ ಕೇಳಲು ಹಂಬಲವಾಗುತ್ತದೆಯೇ? ನಿಮ್ಮ ಮನಸ್ಸಿನಲ್ಲಿ, ಕೇವಲ ಅಲ್ಲಾಹನನ್ನು ಮಾತ್ರ ನೆಲೆಗೊಳಿಸಲು ಸಾಧ್ಯವಿದೆಯೇ?

ಕೇವಲ ಅಲ್ಲಾಹನ ಬಗ್ಗೆ ಪುನರಾವರ್ತಿಸಿ, ಪದೇ ಪದೇ ಮಾತಾಡುವಾಗ ನಿಮಗೆ ಜಿಗುಪ್ಸೆಯಾಗುತ್ತದೆಯೇ? ಅಥವಾ ಕೇವಲ ಅಲ್ಲಾಹನ ಬಗ್ಗೆ ಪ್ರಸ್ತಾಪಿಸಲಾದಾಗ ಸಂತೋಷ ಹಾಗೂ ತೃಪ್ತಿಯಾಗುತ್ತದೆಯೇ?

39:45 ರಲ್ಲಿ ನಮೂದಿಸಿರುವಂತೆ, ಕುರ್‌ಆನಿನ ಮಹತ್ತರ ನಿರ್ಣಾಯಕ ಅಂಶದ ಪ್ರಕಾರ (ಪುಟ 47), ಮೇಲಿನ ಪ್ರಶ್ನೆಗಳಿಗಿರುವ ನಿಮ್ಮ ಉತ್ತರವು, ನಿಮ್ಮನ್ನು ಹಾಗೂ ನಿಮ್ಮ ಅಂತ್ಯವನ್ನು ಅರಿತುಕೊಳ್ಳುವುದಕ್ಕಿರುವ ಕೀಲಿಕೈಯನ್ನು ಒದಗಿಸುತ್ತದೆ.

## ಭಾಗ ಎರಡು

# ಹದೀಸಿನ ವಾಸ್ತವಿಕತೆ

*“ಅಲ್ಲಾಹನು ಅವತೀರ್ಣಗೊಳಿಸಿರುವುದರ (ಕುರ್‌ಆನಿನ) ಆಧಾರದಲ್ಲಿ ವಿಷಯಗಳನ್ನು ತೀರ್ಮಾನಿಸದವರು ಸತ್ಯನಿಷೇಧಿಗಳಾಗಿದ್ದಾರೆ.” (5:44)*

*ಉಲ್ಲೇಖ:*

**Actual Status of Hadith – Quran V/s Hadith Youtube Channel**

# ಕಣ್ಣು ತೆರೆಯಿರಿ

ಸಹೋದರ ಸಹೋದರಿಯರೇ, ನಮ್ಮ ಶ್ರೇಷ್ಠ ನಾಯಕರಾದ ಸಂದೇಶವಾಹಕ ಮುಹಮ್ಮದರ ಯಥಾರ್ಥವಾದ ಹೇಳಿಕೆಗಳನ್ನು ನಾವು ತಿರಸ್ಕರಿಸುತ್ತಿಲ್ಲ ಹಾಗೂ ಯಾವ ಮುಸ್ಲಿಮರು ಸಹ ಅದನ್ನು ತಿರಸ್ಕರಿಸಬಾರದು. ಆದರೆ, ಕಪಟ ಇಮಾಮರ ಪುಸ್ತಕಗಳಲ್ಲಿ ಒಟ್ಟುತ್ತ ತುಂಬಿರುವಂತಹ ಅನೈತಿಕ ಮಾಲಿನ್ಯಗಳನ್ನು ನಾವು ತಿರಸ್ಕರಿಸುತ್ತೇವೆ. ಏಕೆಂದರೆ, ಈ ದುಷ್ಟ ಪುಸ್ತಕಗಳಲ್ಲಿ ನಾವು ಕಾಣುವುದನ್ನು ನಮ್ಮ ಗೌರವಾನ್ವಿತ ಪ್ರವಾದಿಗಳು ಹೇಳಿರಲು ಸಾಧ್ಯವೇ ಇಲ್ಲ. ಇವುಗಳು ನಕಲಿ ದಾಖಲೆಗಳಾಗಿವೆ. ನಾವು ಅವುಗಳನ್ನು ತಿರಸ್ಕರಿಸುತೇವೆ. ಏಕೆಂದರೆ, ಈ ಕೆಟ್ಟ ಪುಸ್ತಕಗಳು, ಅಲ್ಲಾಹನನ್ನು, ಪ್ರವಾದಿಯನ್ನು ಹಾಗೂ ಕುರ್ಆನನ್ನು ನಗ್ನವಾಗಿ ಪದೇ ಪದೇ ಅವಮಾನಿಸುತ್ತದೆ.

ನಿಮ್ಮ ತಂದೆ, ಅಜ್ಜ, ಮುತ್ತಜ್ಜರೆಲ್ಲರೂ ಇವುಗಳನ್ನು ಪಾಲಿಸುತ್ತಾ ಬಂದಿರುವುದರಿಂದ ನಿಮ್ಮಲ್ಲಿ ಹೆಚ್ಚಿನವರು ಈ ದುಷ್ಟ ಕೃತಿಗಳನ್ನು ಬೆಂಬಲಿಸುತ್ತಿದ್ದೀರಿ.

ಆದರೆ, ನಾವು ನಿಮ್ಮೊಂದಿಗೆ ಒಂದು ಪ್ರಶ್ನೆಗೆ ಉತ್ತರವನ್ನು ಯಾಚಿಸಬಹುದೇ?

ಕಪಟ ಇಮಾಮರುಗಳ ಮಿಥ್ಯರಚನೆಗಳಾದ ಈ ಹದೀಸ್ ಪುಸ್ತಕಗಳನ್ನು - ನೀವು ಅಥವಾ ನಿಮ್ಮ ತಂದೆ ಅಥವಾ ಮುತ್ತಜ್ಜರು ಸಂಪೂರ್ಣವಾಗಿ ಓದಿರಲು ಸಾಧ್ಯವಿದೆಯೇ? ಅಂದರೆ, ಎಲ್ಲಾ ಕೃತಿಗಳನ್ನು - ಮುಖಪುಟದಿಂದ ಕೊನೆಯಪುಟದ ತನಕ?

ಖಂಡಿತವಾಗಿಯೂ, ನೀವು ಅಥವಾ ನಿಮ್ಮ ತಂದೆ, ಮುತ್ತಜ್ಜರು ಯಾವತ್ತೂ ಅದನ್ನು ಪರಿಪೂರ್ಣವಾಗಿ ಓದಿಲ್ಲ. ಅಷ್ಟೊಂದು ಪುಸ್ತಕಗಳನ್ನು ಸಂಪೂರ್ಣವಾಗಿ ಓದಲು ಸಾಕಷ್ಟು ಸಮಯವು ದೊರೆತಿರಲ್ಲ. ಕೇವಲ ವಂಚಕ ಪುರೋಹಿತರು ನಿಮಗೆ ಅಥವಾ ನಿಮ್ಮ ತಂದೆ, ಮುತ್ತಜ್ಜರಿಗೆ ಹೇಳಿರುವುದನ್ನು ನೀವು ಅಥವಾ ಅವರು ಅಂಧವಾಗಿ ನಂಬಿರುವಿರಿ.

ಸಹೋದರ ಸಹೋದರಿಯರೆ, ಪ್ರಮಾಣಿಕ ಬುದ್ಧಿಶಕ್ತಿಯೊಂದಿಗೆ ನೀವು ಈ ದುಷ್ಟ ಪುಸ್ತಕಗಳನ್ನು ಓದಿದರೆ, ನಿಸ್ಸಂಶವಾಗಿಯೂ ಈ ಪುಸ್ತಕಗಳನ್ನು ನೀವು ಕಸದ ದೊಡ್ಡಿಗೆ ಎಸೆದು ಬಿಡುವಿರಿ. ಈ ಪುಸ್ತಕಗಳು ಅಲ್ಲಾಹನನ್ನು, ಪ್ರವಾದಿಯವರನ್ನು ಬೆತ್ತಲೆಯಾಗಿ ಹೀಯಾಳಿಸುತ್ತದೆ. ಸ್ವತಃ ತಪಾಸಣೆ ಮಾಡದೆ ಇತರರನ್ನು ಅಂಧವಾಗಿ ಅನುಸರಿಸುವವರನ್ನು 'ಭೂಗ್ರಹದ ಮೇಲಿರುವ ಅತಿ ಹೀನವಾದ ಮೃಗಗಳು' ಎಂದು ಅಲ್ಲಾಹನು ಘೋಷಿಸಿದ್ದಾನೆ.

# ನೆನಪಿಡಿ

ಅಲ್ಲಾಹನು ಕುರ್‍ಆನಿನಲ್ಲಿ ಹೇಳುತ್ತಾನೆ: ಕುರ್‍ಆನ್ ಅತ್ಯುತ್ತಮ ಹದೀಸ್ ಆಗಿದೆ, ಅದು ಸಮಗ್ರವಾಗಿದೆ, ಅದು ಸಂರಕ್ಷಿಸಲ್ಪಟ್ಟಿದೆ, ಅದು ವಿವರಪೂರ್ಣವಾಗಿದೆ, ಸತ್ಯವನ್ನು ನಾನಾ ವಿಧವಾಗಿ ಸ್ಪಷ್ಟ ಪಡಿಸಿಕೊಡುತ್ತದೆ. ಪ್ರವಾದಿಯವರು ಕುರ್‍ಆನಿನಲ್ಲಿಯೇ ಸಮರ್ಪಕವಾಗಿ ಚಿತ್ರೀಕರಿಸಲ್ಪಟ್ಟಿದ್ದಾರೆ. ನೀವು ಕುರ್‍ಆನನ್ನು ಅನುಸರಿಸಿದರೆ, ನಿಶ್ಚಯವಾಗಿಯೂ ನೀವು ಅಲ್ಲಾಹನನ್ನೂ ಹಾಗೂ ಅವರ ಸಂದೇಶವಾಹಕರನ್ನೂ ಅನುಸರಿಸಿದಂತಾಗುತ್ತದೆ. ಆದರೆ, ನೀವು ಹದೀಸುಗಳನ್ನು ಅನುಸರಿಸಿದರೆ ಸಂದೇಶವಾಹಕರನ್ನು ಅನುಸರಿಸಿದಂತಾಗುವುದಿಲ್ಲ, ಬದಲಿಗೆ ಕಪಟ ಇಮಾಮರನ್ನು ಅನುಸರಿಸಿದಂತಾಗುತ್ತದೆ.

ಅವುಗಳು ನಿಜವಾಗಿಯೂ ಪ್ರವಾದಿಯವರ ಹೇಳಿಕೆಗಳಾಗಿದ್ದರೆ, ಅವುಗಳನ್ನು ಕುರ್‍ಆನಿನಂತೆಯೇ ಗೌರವಿಸಿ ಪಾಲಿಸುವವರಲ್ಲಿ ನಾವು ಮುಂಚೂಣಿಯಲ್ಲಿರುತ್ತಿದ್ದೆವು. ಆದರೆ, ಪ್ರವಾದಿಯವರ ಹೆಸರಿನಲ್ಲಿ ಹೆಣೆಯಲಾದ ಹಾಗೂ ಅವರು ಯಾವತ್ತೂ ಹೇಳಿರಲು ಸಾಧ್ಯವಿಲ್ಲದಂತಹ ಮಿಥ್ಯ ಲೇಖನಗಳನ್ನು ನಾವು ಸ್ವೀಕರಿಸಬಾರದು. ಸಂದೇಶವಾಹಕರಾದ ಮುಹಮ್ಮದರಲ್ಲಿ ನಿಮಗೆ ಅತ್ಯುತ್ತಮ ಆದರ್ಶವಿದೆ ಹಾಗೂ ಅವರು ಈ ಲೋಕಕ್ಕೆ ಕರುಣೆಯಾಗಿದ್ದಾರೆ ಎಂದು ಕುರ್‍ಆನ್ ಹೇಳುತ್ತದೆ. ಆದರೆ, ಹದೀಸ್ ಪುಸ್ತಕಗಳು ಅವರನ್ನು ಭೂಲೋಕದ ಅತ್ಯಂತ ನೀಚ ವ್ಯಕ್ತಿಯಾಗಿ ಚಿತ್ರೀಕರಿಸಲಾಗಿದೆ.

ಅಪರಾಧಿಗಳಾದ ಬುಖಾರಿ ಹಾಗೂ ತಂಡದವರು ಕುರ್‍ಆನನ್ನು, ಅಲ್ಲಾಹನನ್ನು ಹಾಗೂ ಸಂದೇಶವಾಹಕರನ್ನು ಅಸಂಖ್ಯಾತವಾಗಿ ಅವಹೇಳನ ಮಾಡಿದೆ. ಉದಾಹರಣೆಗೆ: ಅಲ್ಲಾಹನು ವಿಶ್ವಾಸಿಗಳಿಗೆ ತನ್ನ ಕಾಲನ್ನು ತೋರಿಸುವನು, ಮಹಿಳೆಯರು ಕತ್ತೆಗೆ ಅಥವಾ ಕೋತಿಗಳಿಗೆ ಸಮಾನ, ಮಹಿಳೆಯರನ್ನು ಹಾಗೂ ಕುದುರೆಯನ್ನು ನಂಬಬೇಡಿರಿ, ಪ್ರವಾದಿಯರು ಪತ್ನಿಯರೊಂದಿಗೆ ಋತುಮತಿಯ ಅವಧಿಯಲ್ಲಿ ಸಂಭೋಗ ನಡೆಸಿದ್ದರು, ಜೀವಂತ ಜನರ ಕಣ್ಣನ್ನು ಕಿತ್ತೆಗೆಯಲು ಮತ್ತು ಮಹಿಳೆಯರನ್ನು ಹಾಗೂ ಮಕ್ಕಳನ್ನು ಕೊಲ್ಲಲು ಪ್ರವಾದಿಯವರು ಆದೇಶಿಸಿದ್ದರು, 9 ವರ್ಷ ಪ್ರಾಯದ ಹೆಣ್ಣು ಮಗುವನ್ನು ಪ್ರವಾದಿಯವರು ಮದುವೆಯಾಗಿದ್ದರು, ಮೂತ್ರವನ್ನು ಕುಡಿಯಲು ಪ್ರವಾದಿಯವರು ಆಜ್ಞೆ ಮಾಡಿದ್ದರು, ಕುರ್‍ಆನಿನ ಕೆಲವು ವಚನಗಳನ್ನು ಆಡು ತಿಂದಿತ್ತು, ಕುರ್‍ಆನಿನ ಅವತೀರ್ಣದೊಳಗೆ ಶೈತಾನನು ಮಧ್ಯಪ್ರವೇಶಿಸಿದ್ದನು, ಪ್ರವಾದಿಯು ಒಂದು ಗಂಟೆಯ ಅವಧಿಯಲ್ಲಿ ಹದಿನೊಂದು ಪತ್ನಿಯರೊಂದಿಗೆ ಸಂಭೋಗವನ್ನು ನಡೆಸಿದ್ದರು ಇತ್ಯಾದಿ, ಇತ್ಯಾದಿ...ಇಂತಹ ಅವಹೇಳನಕಾರಿ ಕಲ್ಮಶಗಳು ಈ ಹದೀಸ್ ಗ್ರಂಥಗಳಲ್ಲಿ ಹೇರಳವಾಗಿ ಕಾಣಸಿಗುತ್ತದೆ. ಕುರ್‍ಆನ್ ಚಿತ್ರೀಕರಿಸುವಂತಹ ಗೌರವಾನ್ವಿತರಾದ ಹಾಗೂ ಆದರ್ಶ ಪುರುಷರಾದ ನಮ್ಮ ಹೆಮ್ಮೆಯ ಪ್ರವಾದಿ ಮುಹಮ್ಮದರು ಇಂತಹ ಕೆಳದರ್ಜೆಯ ವ್ಯಕ್ತಿತ್ವವನ್ನು ಹೊಂದಿರಲು ಸಾಧ್ಯವೇ ಇಲ್ಲದ ಕಾರಣ ಈ ಹದೀಸ್ ಪುಸ್ತಕ ಭಂಡಾರಗಳು ಪ್ರವಾದಿಯವರನ್ನು ಹಾಗೂ ಇಸ್ಲಾಮನ್ನು ಮುಖಭಂಗಗೊಳಿಸುವ ದುರುದ್ದೇಶದಿಂದ ಸೃಷ್ಟಿಸಿರುವ ಜಾಲಗಳಾಗಿವೆ ಎಂದು ಸಾಮಾನ್ಯ ಜ್ಞಾನವಿರುವ ಯಾವುದೇ ಮನುಷ್ಯನಿಗೆ ಸುಲಭವಾಗಿ ಪತ್ತೆ ಹಚ್ಚಬಹುದು.

# ಈ ಕಪಟ ಇಮಾಮರ ನೈಜ್ಯ ಹಿನ್ನಳೆ ಏನು?

ಪ್ರವಾದಿ ಮುಹಮ್ಮದರ ಅವಧಿಯಲ್ಲಿ ಎರಡು ಪ್ರಬಲ ರಾಷ್ಟ್ರಗಳು ಮುಂಚೂಣಿಯಲ್ಲಿದ್ದವು. ಅವುಗಳಲ್ಲಿ ಒಂದು 'ರೋಮನ್ಸ್ ಹಾಗೂ ಬೈಜಂಟೀನಿನ ಮೈತ್ರಿಕೂಟ' ಇನ್ನೊಂದು 'ಪರ್ಷಿಯನ್ಸ್'. ಇವೆರಡೂ ಸೈನಿಕ ಸಾಮರ್ಥ್ಯದಲ್ಲಿ ಬಲಿಷ್ಠವಾಗಿದ್ದವು. ಆದಾಗ್ಯೂ, ಪರ್ಷಿಯನ್ನರು ಕೆಲವು ವಿಷಯಗಳಲ್ಲಿ ಅದ್ವಿತೀಯರಾಗಿದ್ದರು. ಐದು ಸಾವಿರ ವರ್ಷಗಳಿಂದಲೂ ನಾಗರಿಕತೆಯು ವಿಕಸಿಸುತ್ತಾ ಇತಿಹಾಸದ ಭಾಗವಾಗಿ ಮುನ್ನಡೆಯುತ್ತಿದ್ದಾಗಲೂ, ಪರ್ಷಿಯನ್ನರು ಹಾಗೂ ಅವರ ಸ್ವರೂಪವು ಅಚ್ಚಳಿಯದೆ ಉಳಿದಿತ್ತು. ಇತಿಹಾಸವು ಇದಕ್ಕೆ ಸಾಕ್ಷ್ಯ ಹೇಳುತ್ತದೆ.

- ಬ್ಯಾಬಿಲೋನಿಯಾ ಎದುರು ಪರ್ಷಿಯನ್ನರ ಕದನ – ಬ್ಯಾಬಿಲೋನಿಯಾ ಸಾಮ್ರಾಜ್ಯದ ಅವನತಿ.
- ಗ್ರೀಕರ ಎದುರು ಪರ್ಷಿಯನ್ನರ ಕದನ – ಗ್ರೀಕ್ ಸಾಮ್ರಾಜ್ಯದ ಪಥನ ಹಾಗೂ ಪರ್ಷಿಯನ್ನರ ಪುನರೋದಯ.
- ರೋಮನರ ಎದುರು ಪರ್ಷಿಯನ್ನರ ಕದನ – (ಲೋಕವು ಕಂಡ ಅತ್ಯಂತ ದೀರ್ಘವಾದ 600 ವರ್ಷದ ಕಾಳಗ).

ಪರ್ಷಿಯನ್ನರು ಅಖಂಡವಾಗಿ ಉಳಿದಿದ್ದುದಕ್ಕೆ ಕಾರಣವಾದ ಅವರ ಅಸಾಧಾರಣ ಸಾಮರ್ಥ್ಯವು ಯಾವುದಾಗಿತ್ತು? ಹೌದು. ಅವರು ಅತೀವ ನಿಪುಣರು ಹಾಗೂ ಚತುರರಾಗಿದ್ದರು. ಅವರು ತಮ್ಮ ವೈರಿಗಳ ಬಗ್ಗೆ ಪೂರ್ಣಶೋಧನೆ ನಡೆಸುತ್ತಿದ್ದರು ಮತ್ತು ಅವರ ಬೆಳವಣಿಗೆಯ ಪ್ರಾಥಮಿಕ ಕಾರಣವನ್ನು ಪತ್ತೆಹಚ್ಚುತ್ತಿದ್ದರು. ಅವರು ತಮ್ಮ ಸಂಸ್ಕೃತಿಗೆ ಸಂಬಂಧಿಸಿದಂತೆ ಅಚ್ಚಳಿಯದೆ ಉಳಿಯುವ ಸಲುವಾಗಿ ಕಠಿಣವಾಗಿ ಪ್ರಯತ್ನಿಸುತ್ತಿದ್ದರು.

ಪ್ರವಾದಿ ಮುಹಮ್ಮದರು ಕುರ್‌ಆನನ್ನು ತಲುಪಿಸಿ ಅದರ ಮಾರ್ಗದರ್ಶನದಂತೆ ಇಸ್ಲಾಮನ್ನು ಪುನರ್-ಸಂಸ್ಥಾಪಿಸಿದ ತಕ್ಷಣದ ಅವಧಿಯ ಖಲೀಫತ್ ಆಡಳಿತದ ತಳಹದಿಯಲ್ಲಿ - ಕುರ್‌ಆನಿನ ಕಾನೂನಿನ ಪ್ರಭಾವದಿಂದ ಅರೇಬಿಯಾ ಹಾಗೂ ಸುತ್ತುಮುತ್ತಲಿನ ರಾಷ್ಟ್ರಗಳಲ್ಲಿ ನಾಗರೀಕ, ವೈಜ್ಞಾನಿಕ ಹಾಗೂ ಇತರ ಹಲವು ಕ್ಷೇತ್ರಗಳು ಅಭಿವೃದ್ಧಿ ಹೊಂದಲು ಪ್ರಾರಂಭವಾಯಿತು. ಈ ಬೆಳವಣಿಗೆಯು ಪರ್ಷಿಯನ್ನರನ್ನು ವ್ಯಾಕುಲಗೊಳಿಸಲು ಆರಂಭಿಸಿತು. ಅವರು ಮುಸ್ಲಿಮರನ್ನು (ಪ್ರಮುಖವಾಗಿ ಅರಬರನ್ನು) ಸದೆಬಡೆಯಲು ಪ್ರಯತ್ನಿಸಿದರು. ಪ್ರತಿಯುತ್ತರವಾಗಿ, ಸೈನಿಕ ಬಲ ಹಾಗೂ ಆಧುನಿಕ ಶಸ್ತ್ರಾಸ್ತ್ರದಲ್ಲಿ ಪ್ರಬಲರಾಗಿ ಬೆಳೆದಿದ್ದ

ಮುಸ್ಲಿಮರು, ಖಲೀಫತ್ ನಾಯಕತ್ವದ ಮುಖಂಡತೆಯಲ್ಲಿ ಮೊತ್ತಮೊದಲ ಬಾರಿಗೆ ಕದಸಿಯ್ಯಾದ ಯುದ್ಧದಲ್ಲಿ ಪರ್ಷಿಯನ್ನರಿಗೆ ಸೋಲಿನ ರುಚಿಯನ್ನು ಉಣಿಸಿದರು.

ತಮ್ಮನ್ನು ಸೋಲಿಸಿರುವುದು ಅರಬರಲ್ಲ ಬದಲಿಗೆ ಅಲ್ಲಾಹನ ಪ್ರಬಲ ವ್ಯವಸ್ಥೆಯಾಗಿತ್ತು ಎಂದು ಪರ್ಷಿಯನ್ನರು ತಕ್ಷಣ ಅರಿತುಕೊಂಡರು. ಆ ವ್ಯವಸ್ಥೆಯ ಮೂಲವು ಕುರ್‌ಆನ್ ಆಗಿತ್ತು ಎಂದೂ ಶೀಘ್ರದಲ್ಲೇ ಅವರು ಪತ್ತೆಹಚ್ಚಿದರು. ತಮ್ಮ ಸೋಲಿನ ಸೇಡನ್ನು ತೀರಿಸಲು ಹಾಗೂ ತಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಮುನ್ನಡೆಸಿಕೊಂಡು ಹೋಗುವ ಸಲುವಾಗಿ ಅವರು ನಿಪುಣ-ತಂತ್ರವನ್ನು ಹೂಡಲು ತೊಡಗಿದರು.

ಕುರ್‌ಆನಿನಲ್ಲಿ ಯಾವುದೇ ರೀತಿಯ ಮೂರ್ಪಾಡು ಅಥವಾ ತಿದ್ದುಪಡಿ ಮಾಡಲು ಸಾಧ್ಯವಿಲ್ಲವೆಂದು ಅರಿತುಕೊಂಡರು. ಏಕೆಂದರೆ, ಆ ಸಮಯದಲ್ಲಿ (ಪ್ರವಾದಿಯ ಮರಣದ ಸುಮಾರು ಎರಡು ಅಥವಾ ಮೂರು ಶತಮಾನದ ಬಳಿಕ) ಕುರ್‌ಆನ್ ಅರೇಬಿಯಾ ಮಾತ್ರವಲ್ಲದೆ ಇನ್ನಿತರ ರಾಷ್ಟ್ರಕ್ಕೂ ಹರಡಿತ್ತು. ಗ್ರಂಥಗಳ ರೂಪದಲ್ಲಿ ಮಾತ್ರವಲ್ಲದೆ ಅದನ್ನು ಕಂಠಪಾಠ ಮಾಡುವ ಮೂಲಕ ಪ್ರದೇಶದಾದ್ಯಂತ ಮುಸ್ಲಿಮರ ಚಿತ್ತದಲ್ಲೂ ಅದು ದಾಖಲೆಗೊಂಡಿದ್ದವು.

ಆದುದರಿಂದ ಅವರು ಝುರತುಷ್ಟ್ರ (Zoroastrian) ಪರ್ಷಿಯನ್ ಧಾರ್ಮಿಕ ಮುಖಂಡರುಗಳಾದ ಬುಖಾರಿ, ಮುಸ್ಲಿಮ್ ಹಾಗೂ ತಂಡಗಳಿಗೆ ಪ್ರವಾದಿಯ ಹೆಸರಲ್ಲಿ ವರದಿಗಳನ್ನು ಸೃಷ್ಟಿಸಲು ಆಜ್ಞೆಯಿತ್ತರು. ಆ ವರದಿಗಳ ಮೂಲ ಉದ್ದೇಶವು ಮುಸ್ಲಿಮರ ಗೆಲುವಿನ ಹಾಗೂ ಅಭಿವೃದ್ಧಿಯ ತಳಹದಿಯಾಗಿದ್ದ ಕುರ್‌ಆನನ್ನು ನಿರ್ಜೀವಗೊಳಿಸಿ ಇಸ್ಲಾಮನ್ನು ವಿನಾಶಗೊಳಿಸುವುದಾಗಿತ್ತು. ಶಾಂತಿಪರತೆಯನ್ನು ಪ್ರೋತ್ಸಾಹಿಸಿದಂತಹ ಹಾಗೂ ಅಭಿವೃದ್ಧಿಯ ಜೀವನ ರೀತಿಗೆ ವಿನ್ಯಾಸವನ್ನು ರೂಪಿಸಿದಂತಹ - ಅಲ್ಲಾಹನು ಕುರ್‌ಆನಿನ ಮೂಲಕ ಸಮ್ಮತಿಕೊಟ್ಟ ಇಸ್ಲಾಮ್ ದೀನನ್ನು - ಅಸಹಿಷ್ಣುತೆಯ, ಅನಾಚಾರದ ಹಾಗೂ ಅನಾಗರಿಕರತೆಯ ಧರ್ಮವಾಗಿ ಮಾರ್ಪಡಿಸಬೇಕೆಂಬ ಬೃಹದ್ಯೋಜನೆಯನ್ನು ನಿಪುಣತೆಯಿಂದ ರೂಪಿಸಿದರು.

ಇಂತಹ ಕುತಂತ್ರವು ಅವರಿಗೆ ಹೊಸ ಪ್ರಯೋಗವಾಗಿರಲಿಲ್ಲ. ಅವರು ಇಂತಹ ಪಿತೂರಿಗಳಲ್ಲಿ ಪ್ರವೀಣರಾಗಿದ್ದರು. ಅಲ್ಲಾಹನು ಮೂಸಾರಿಗೆ ನೀಡಿದ ಗ್ರಂಥವನ್ನು ವಿರೂಪಗೊಳಿಸುವುದರಲ್ಲೂ ಪರ್ಷಿಯನ್ನರದೇ ಕೈವಾಡವಿತ್ತು. ಹಳೆಯ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವಂತಹ (Old Testament) ಉಝೈರ್ ಎಂಬವನು ಬ್ಯಾಬಿಲೋನಿನ ಒಬ್ಬ ಪರ್ಷಿಯನ್ ಧಾರ್ಮಿಕ ಮುಖಂಡನಾಗಿದ್ದನು. ಅವನ ಮುಖ್ಯ ಉದ್ದೇಶವು, ಪರ್ಷಿಯನ್ ಸಾಮ್ರಾಜ್ಯದ ರಾಜರ ರಾಜನಾದ ಅರ್ಟಾಕ್ಷರಕ್ಸಸ್’ನ ಆಸಕ್ತಿಯನ್ನು ರಕ್ಷಿಸುವುದಾಗಿತ್ತು. ಆ ರಾಜನು ಜುದಹ್ ಮತ್ತು ಜೆರುಸಲೆಮ್ ಸೇರಿದಂತೆ, ಟ್ರಾನ್ಸ್-ಯೂಪ್ರಟಿಸ್ ಖಂಡದ ಮುಖ್ಯ ಪುರೋಹಿತನಾಗಿ ಉಝೈರನ್ನು ನಿಯೋಜಿಸಿದನು. ಅವನಿಗೆ ಧಾರ್ಮಿಕ ಕಾನೂನುಗಳು, ತೆರಿಗೆಗಳು, ಆಚರಣೆಗಳು, ಆರಾಧನೆಗಳನ್ನು ರಚಿಸುವ ಸಂಪೂರ್ಣ ಅಧಿಕಾರವನ್ನು ನೀಡಲಾಗಿತ್ತು. ಧರ್ಮವಿರೋಧಿಗಳಿಗೆ ಮರಣದಂಡನೆ, ಬಹಿಷ್ಕಾರ, ಆಸ್ತಿ ಜಪ್ತಿ ಮತ್ತು ಜೈಲುವಾಸದಂತಹ ದಂಡನೆಗಳನ್ನು ಸೇರಿರುವ ಅವನ

ಕಾನೂನುಗಳು ಪವಿತ್ರವಾದುದೆಂದು ಮಂಜೂರು ಮಾಡಲಾಯಿತು. ಹೊಸ ಒಡಂಬಡಿಕೆಯಲ್ಲಿ (New Testament) ಈಸಾರು ಪಾರ್ಷಿಗಳ ನಿಯಮದ ಶಿಕ್ಷಕರನ್ನು ಖಂಡಿಸಿ ಹೀಗೆ ಹೇಳಿದ್ದಾಗಿ ಕಾಣಬಹುದು: 'ಪರ್ಷಿಯನ್ ಪ್ರಭಾವವನ್ನು ಜನರು ಬಹಿರಂಗವಾಗಿ ಖಂಡಿಸುವ ತನಕ ಅವರಿಗೆ ವಿಮೋಚನೆಯಿಲ್ಲ'. ಹಾಗೆಯೇ, ಅಲ್ಲಾಹನು ಈಸಾರಿಗೆ ನೀಡಿದ ಗ್ರಂಥದಲ್ಲೂ ತಮ್ಮ ಕೈಚಳವನ್ನು ತೋರಿಸಿ, ರಾಜಕೀಯ ವ್ಯಾಮೋಹಕ್ಕೆ ಬಲಿಯಾಗುವಂತಹ ರಾಜರ ಬೆಂಬಲವನ್ನು ಪಡೆದು ಅಂಥ ಕಾನೂನುಗಳನ್ನು ಹಾಗೂ ಕಟ್ಟುಕಥೆಗಳನ್ನು ಪರಿಚಯಿಸಿದರು.

ಮುಹಮ್ಮದರು ಪುನರ್-ಸಂಸ್ಥಾಪಿಸಿದಂತಹ ಇಸ್ಲಾಮ್ ಎಂಬ ಶಾಂತಿಪರತೆಯ ಜೀವನ ರೀತಿಯನ್ನು ಬುಡಸಹಿತ ಕಿತ್ತುಹಾಕಿ ಅದನ್ನು ನಿಶ್ಯಕ್ತ ಹಾಗೂ ಪರಾಧೀನ ದುರ್ವ್ಯವಸ್ಥೆಯಾಗಿ ಮಾರ್ಪಡಿಸಲು ಪರ್ಷಿಯನ್ನರು ಪುನಃ ಅದೇ ಯಶಸ್ವಿ ಕುತಂತ್ರವನ್ನು ಬಳಸಿದರು. ಅವರು ಕಪಟ ವಿಶ್ವಾಸಿ ಹಾಗೂ ಕ್ರೂರನಾದ ಮುಆವಿಯ ಎಂಬ ರಾಜನ ಜೊತೆಗೆ ಕೈಜೋಡಿಸಿ ತಮ್ಮ ಕೈಚಳವನ್ನು ಪ್ರಯೋಗಿಸತೊಡಗಿದರು. ಮುಆವಿಯ ಹಾಗೂ ಅವನ ತಂದೆಯು ಸೇರಿದಂತೆ ಅವರ ಪರಿವಾರವು ಮುಹಮ್ಮದರ ಕಟ್ಟಾ ಶತ್ರುಗಳಾಗಿದ್ದರು. ಮುಸ್ಲಿಮ್ ಖಲೀಫರ ಕೈಯಿಂದ ಮುಆವಿಯನ ತಂದೆಯ ಯುದ್ಧದಲ್ಲಿ ಕೊಳ್ಳಪಟ್ಟಿದ್ದರು. ನಂತರ ಮುಆವಿಯನು ಕಪಟತನದೊಂದಿಗೆ ಇಸ್ಲಾಮನ್ನು ಸ್ವೀಕರಿಸಿದ್ದನು. ಅವನ ಈ ಪರಿವರ್ತನೆಯ ಉದ್ದೇಶವು, ತನ್ನ ತಂದೆಯ ಸಾವಿನ ಸೇಡಿನ್ನು ತೀರಿಸುವುದು ಮತ್ತು ರಾಜಕೀಯ ಹಾಗೂ ಭೌತಿಕ ಲಾಭವನ್ನು ಗಳಿಸುವುದಾಗಿತ್ತು. ಪರ್ಷಿಯನ್ನರು ಹಾಗೂ ಮುಆವಿಯರು ಸೇರಿ ಕುತಂತ್ರಗಳನ್ನು ಬಳಸಿ, ಬಹುತೇಕ ಖಲೀಫರನ್ನು ಹಾಗೂ ಮುಸ್ಲಿಮರನ್ನು ಕ್ರೂರವಾಗಿ ವಧಿಸಲಾಯಿತು. ಹೀಗೆ ಅವನು ಸಿಂಹಾಸನವನ್ನು ಮೋಸದಿಂದ ಸ್ವಾಧೀನ ಪಡೆಸಿದನು.

ಅವರು ನಡೆಸಿದ ಪ್ರಥಮ ಹಾಗೂ ಅತ್ಯಂತ ಗಮನಾರ್ಹ ಪಿತೂರಿಯು ಯಾವುದೆಂದರೆ, ಮುಸ್ಲಿಮರನ್ನು 'ಸುನ್ನಿ' ಹಾಗೂ 'ಶಿಯಾ' ಎಂಬ ಎರಡು ಪಂಗಡಗಳಾಗಿ ವಿಭಜಿಸುವುದಾಗಿತ್ತು. ಶಿಯಾ ಪಂಗಡವು ಪರ್ಷಿಯನ್ನರ ಸಂಸ್ಕೃತಿ ಹಾಗೂ ಸಂಪ್ರದಾಯದ ನೀಲನಕ್ಷೆಯಾಗಿತ್ತು. ಹಾಗೆ ಅವರು ತಮ್ಮ ಸಾಂಸ್ಕೃತಿಕ ಗುರುತನ್ನು ಚುರುಕಾಗಿ ಮುನ್ನಡೆಸಿದರು. ತದನಂತರ ಪರ್ಷಿಯನ್ ಧಾರ್ಮಿಕ ವಿದ್ವಾಂಸರುಗಳಾದ ಬುಖಾರಿ ಹಾಗೂ ತಂಡಗಳು ಪ್ರವಾದಿ ಮುಹಮ್ಮದರ ಹೆಸರಲ್ಲಿ - ಆ ತನಕ ಅಸ್ಥಿತ್ವದಲ್ಲೇ ಇರದಂತಹ, ಪ್ರವಾದಿಯವರಿಗೆ ಅರಿವೇ ಇಲ್ಲದಂತಹ, ಕುರ್‌ಆನನ್ನು ಪ್ರತಿಷೇಧಿಸುವಂತಹ ವಿಕೃತಿಗಳನ್ನು - 'ಹದೀಸ್ ಹಾಗೂ ಸುನ್ನ' ಎಂಬ ಹೆಸರಿನಲ್ಲಿ ಪ್ರಕಟಿಸಲು ಪ್ರಾರಂಭಿಸಿದರು. ಇದು ಪ್ರವಾದಿಯ ಮರಣದ ಸುಮಾರು 200-300 ವರ್ಷಗಳ ಕಾಲದ ನಂತರದ ಅವಧಿಯಲ್ಲಾಗಿತ್ತು.

'ಹದೀಸ್ ಹಾಗೂ ಸುನ್ನ' ಎಂಬುವುದು, ಇಸ್ಲಾಮಿನ ನಿರ್ಹಹಣಾ ವ್ಯವಸ್ಥೆಯೊಳಗಡೆ ಚುಚ್ಚಲಾದ ಸೋಂಕು ಭರಿತ ಸೂಕ್ಷ್ಮಕ್ರಿಮಿಯಾಗಿದೆ.

ಈ ಹಿಂದೆ, ತೌರಾತಿನ ಅವತೀರ್ಣದ ಹಾಗೂ ಮೂಸಾರ ಮರಣದ ನಂತರ –ಮೂಸಾರ ಹೆಸರಿನಲ್ಲಿ, ಯಹೂದೀ ಕಾನೂನುಗಳನ್ನು ಹಾಗೂ ಧಾರ್ಮಿಕ ಆಚರನೆಗಳನ್ನು – ಜೆಮಾರಾ, ಮಿಶ್ನಾ, ಶಮ್ಮಾಯಿ ಮತ್ತು ಹಿಲ್ಲೇಲ್ ಎಂಬ ಪುಸ್ತಕಗಳ ಮೂಲಕ ಪರಿಚಯಿಸಿ - ಮೂಸಾರಿಗೆ ಅರಿವೇ ಇಲ್ಲದಂತಹ ಯಹೂದಿತ್ವ ಎಂಬ ಧರ್ಮಕ್ಕೆ ಚಾಲನೆ ನೀಡಿದವರು ಇದೇ ಪರ್ಷಿಯನ್ನರಾಗಿದ್ದಾರೆ.

ತರುವಾಯ, ಪ್ರವಾದಿ ಈಸಾರು ಇಂಜೀಲ್ ಗ್ರಂಥದ ಮೂಲಕ ಇಸ್ಲಾಮನ್ನು ಪುನರ್ಸ್ಥಾಪಿಸಿ ಮರಣ ಹೊಂದಿದ ನಂತರ - ಪರ್ಷಿಯನ್ನರು ಕಪಟ ಯಹೂದಿ ರಬ್ಬಿಗಳ ಸಹಾಯ ಹಾಗೂ ಪ್ರೋತ್ಸಾಹದಿಂದ ಈಸಾರಿಗೆ ಅವರಿಯೇ ಇಲ್ಲದಂತಹ ಕ್ರೈಸ್ತ ಧರ್ಮವನ್ನು ಸೃಷ್ಟಿಸುವ ಮೂಲಕ ಅವರು ಮತ್ತೊಮ್ಮೆ ತಮ್ಮ ಒಳಸಂಚನ್ನು ಯಸಶ್ವಿಯಾಗಿ ಪ್ರಯೋಗಿಸಿದರು.

ಹಾಗೆಯೇ, ಪ್ರವಾದಿ ಮುಹಮ್ಮದರ ಮರಣಾ ನಂತರ – ಕುರ್‌ಆನ್ ಗ್ರಂಥವು ಬೋಧಿಸುವ ಆಶಯವನ್ನು ಹಾಗೂ ದೃಷ್ಟಿಕೋನವನ್ನು ಬುಡಮೇಲುಗೊಳಿಸುವ ಸಲುವಾಗಿ – ಕಪಟವಿಶ್ವಾಸ ಹಾಗೂ ಸತ್ಯನಿಷೇಧದಲ್ಲಿ ಕಠೋರರಾದ ಅರಬೀ ದೊರೆಗಳ ಬೆಂಬಲದೊಂದಿಗೆ – ಪ್ರವಾದಿ ಮುಹಮ್ಮದರ ಹೆಸರಿನಲ್ಲಿ ‘ಹದೀಸ್ ಹಾಗೂ ಸುನ್ನ’ ಎಂಬ ಪುಸ್ತಕಗಳನ್ನು ಪರಿಚಯಿಸಿ – ಮುಹಮ್ಮದರಿಗೆ ಅರಿವೇ ಇಲ್ಲದಂತಹ – ‘ಪರ್ಷಿಯನ್ ಅರಬೀ ಧರ್ಮ’ವನ್ನು ಪರಿಚಯಿಸಿದರು. ಆದರೆ, ಈ ಅನ್ವೇಷಿತ ಧರ್ಮಕ್ಕೆ ‘ಇಸ್ಲಾಂ’ ಎಂದೇ ಹೆಸರಿಡುವ ಮೂಲಕ ತಮ್ಮ ಚಾಣಕ್ಯತನದ ಇನ್ನೊಂದು ಪ್ರಹಾರವನ್ನು ನಡೆಸಿದರು. ದುರದೃಷ್ಟವಾಗಿ, ಇಂದಿಗೂ ಮುಗ್ಧ ಮುಸ್ಲಿಮರು ಈ ಪರ್ಷಿಯನ್ ಅರಬೀ ಧರ್ಮವೇ ಇಸ್ಲಾಮ್ ಆಗಿದೆ ಎಂಬ ತಪ್ಪುತಿಳುವಳಿಕೆಗೆ ಬಲಿಯಾಗಿ ಮೋಸಗೊಳಿಸಲ್ಪಟ್ಟಿದ್ದಾರೆ.

# ಹದೀಸ್ ಸಂಗ್ರಹ ಹಾಗೂ ಅವುಗಳ ಅಂಕಿ ಅಂಶಗಳು

| ಹದೀಸ್ ಸಂಕಲನಕಾರರು | ಸಂಗ್ರಹಿಸಿದ ಹದೀಸುಗಳ ಮೊತ್ತ | ತಮ್ಮ ಹದೀಸ್ ಪುಸ್ತಕಗಳಿಗಾಗಿ ಆರಿಸಿರುವುದು | ಸಂಗ್ರಹದಲ್ಲಿನ ನಕಲಿ ದಾಖಲೆಗಳು | ತಮ್ಮ ವೈಯುಕ್ತಿಕ ಆಯ್ಕೆಯ ಮೇಲೆ ಹೆಕ್ಕಲಾದ ಹದೀಸುಗಳು |
|---|---|---|---|---|
| ಇಮಾಮ್ ಬುಖಾರಿ | 6,00,000 | 2,762 | 99.54% | 0.46% |
| ಇಮಾಮ್ ಮುಸ್ಲಿಮ್ | 3,00,000 | 4,348 | 98.551% | 1.449% |
| ಇಮಾಮ್ ತಿರ್ಮೀದಿ | 3,00,000 | 3,115 | 98.961% | 1.039% |
| ಇಮಾಮ್ ಅಬೂ ದಾವೂದ್ | 5,00,000 | 4,800 | 99.04% | 0.96% |
| ಇಮಾಮ್ ಇಬ್ನ್ ಮಾಜಾ | 4,00,000 | 4,000 | 99% | 1% |
| ಇಮಾಮ್ ನಸಾಯಿ | 2,00,000 | 4,321 | 97.84% | 2.16% |
| ಮೊತ್ತ = | **23,00,000** | **23,346** | | ಸರಾಸರಿ = **1.02%** |

---


وَكَذَٰلِكَ جَعَلْنَا لِكُلِّ نَبِيٍّ عَدُوًّا شَيَاطِينَ الْإِنسِ وَالْجِنِّ يُوحِي بَعْضُهُمْ إِلَىٰ بَعْضٍ زُخْرُفَ
الْقَوْلِ غُرُورًا وَلَوْ شَاءَ رَبُّكَ مَا فَعَلُوهُ فَذَرْهُمْ وَمَا يَفْتَرُونَ ○

*"ಮತ್ತು ಹಾಗೆ, ಪ್ರತಿಯೊಂದು ಪ್ರವಾದಿಗಳಿಗೆ ನಾವು ಮಾನವ ಶೈತಾನರ ಮತ್ತು ಜಿನ್ನ್ ಶೈತಾನರ ಪೈಕಿ ಶತ್ರುಗಳನ್ನು ನೇಮಕಮಾಡಿದ್ದೇವೆ ಹಾಗೂ ಅವರು ಜನರನ್ನು ಮೋಸಗೊಳಿಸುವ ಸಲುವಾಗಿ ಅಲಂಕಾರಿಕ ಪದಗಳ ಆವಿಷ್ಕಾರ ಮಾಡಿ ಪರಸ್ಪರ ಉತ್ತೇಜಿಸುತ್ತಾರೆ. ನಿಮ್ಮ ಪ್ರಭುವು ಇಚ್ಛಿಸುತ್ತಿದ್ದರೆ, ಅವರು ಇದನ್ನು ಮಾಡುತ್ತಿರಲಿಲ್ಲ. ನೀವು ಅವರನ್ನೂ ಮತ್ತು ಅವರ ಆವಿಷ್ಕಾರವನ್ನೂ ಕಡೆಗಣಿಸಿರಿ." (6:112)*

# ಹದೀಸ್ ಸಂಗ್ರಹ ಹಾಗೂ ಅವುಗಳ ಅಂಕಿ ಅಂಶಗಳು

ಸಂಗ್ರಹಿಸಲಾದ ಮೊತ್ತ ಹದೀಸುಗಳ ಸಂಖ್ಯೆ: 23 ಲಕ್ಷ

ಸಂಗ್ರಹಕಾರರ ಪ್ರಕಾರ - ಸಂಗ್ರಹಿಸಲಾದ ಹದೀಸುಗಳಲ್ಲಿ ಸರಿಸುಮಾರು 99% ಹದೀಸುಗಳು ನಕಲಿ ಅಥವಾ ಖೋಟಾ ವರದಿಗಳಾಗಿತ್ತು.




23 ಲಕ್ಷ ಹದೀಸ್ ಬಂಢಾರದಿಂದ ಅವರು ಬರೇ 1% ಹದೀಸುಗಳನ್ನು ಮಾತ್ರ ವಿಶ್ವಾಸಾರ್ಹವೆಂದು ಆಯ್ದುಕೊಂಡರು.

ಆದರೆ, ವಿಶ್ವಾಸಾರ್ಹವೆಂದು ಘೋಷಿಸುವಾಗ ಅವರು ತಮ್ಮದಾಗಿಸಿದ **ನಿರ್ಣಯಾಧಾರ ಅಥವಾ ಮಾನದಂಡವು** ಯಾವುದು?

ಯಾವುದು ತಪ್ಪು, ಯಾವುದು ಸರಿ ಎಂದು ತಾಳೆ ನೋಡಿ ತಪಾಸಣೆ ಮಾಡಲು ಯಾವುದೇ ಪೂರ್ವ ದಾಖಲೆಗಳಿಲ್ಲದಂತಹ ಆ ಅವಧಿಯಲ್ಲಿ ಮತ್ತು ಪ್ರವಾದಿಯವರು ಮರಣ ಹೊಂದಿ 2 ಶತಮಾನ ಕಳೆದ ಆ ಸಮಯದಲ್ಲಿ – ಆರಿಸಲಾದ ಈ 1% ಹದೀಸುಗಳು – ಸಂಗ್ರಹಕಾರರ **ವೈಯುಕ್ತಿಕ ಆಯ್ಕೆ**ಗಳಾಗಿದ್ದವೇ ಹೊರತು ಬೇರೇನೂ ಅಲ್ಲ.

# ನೀವೇ ಸ್ವತಃ ಪರಿಶೀಲಿಸಿ

ನಾವು 1400 ವರ್ಷಗಳ ಇತಿಹಾಸವನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದರೆ – ಎಲ್ಲಾ ವಿಕೃತಿಗಳು ಇಸ್ಲಾಮೀ ಕಾನೂನು ಹಾಗೂ ನಿಯಮಗಳೊಳಗೆ ಈ ನಕಲಿ ಹದೀಸುಗಳಿಂದಾಗಿ ನುಸುಳಿ ಬಂದಿದೆ ಎಂಬುವುದು ಸುಸ್ಪಷ್ಟವಾಗುತ್ತದೆ. ನೀವು ನಿಮ್ಮ ವಂಚಕ ಪುರೋಹಿತರಿಗೆ ಕಿವಿಗೊಡದೆ, ನಿಮ್ಮಷ್ಟಕ್ಕೆ ಮುಕ್ತ ಹಾಗೂ ಪ್ರಜ್ಞಾಪೂರ್ವಕ ಮನಸ್ಸಿನಿಂದ ಈ ಹದೀಸ್ ಪುಸ್ತಕಗಳನ್ನು ಓದಿ ನೋಡಿರಿ. ಬುಖಾರಿ, ಮುಸ್ಲಿಮ್ ಇತ್ಯಾದಿ ಹೆಸರುಗಳನ್ನಿಟ್ಟಿರುವ ಕಪಟ ಇಮಾಮರು ನಿಮಗೆ ಇಸ್ಲಾಮಿನ ಕಠೋರ ಶತ್ರುಗಳೆಂದು ಖಾತ್ರಿಗೊಳ್ಳುತ್ತದೆ. ಅವರ ಪುಸ್ತಕಗಳು ಸುಳ್ಳು, ಅವೈಚಾರಿಕ, ಯುಕ್ತಿರಹಿತ ಹಾಗೂ ಹಾಸ್ಯಾಸ್ಪದ ವಿಷಯಗಳಿಂದ ತುಂಬಿದೆ. ನಮ್ಮ ಸಮುದಾಯದ ಎದುರಿಸುತ್ತಿರುವ ಅವಮಾನ ಹಾಗೂ ಯಾತನೆಗಳು, ಈ ಹದೀಸ್ ಪುಸ್ತಕಗಳ ಫಿತ್ನದಿಂದ ಅಸ್ಥಿತ್ವಕ್ಕೆ ಬಂದಿರುವ ಪಂಗಡಗಳ ಪರಿಣಾಮವಾಗಿದೆ. ಪಂಗಡಗಳ ಅನುಯಾಯಿಗಳು ಮುಶ್ರಿಕುಗಳಾಗಿರುತ್ತಾರೆಂದು ಕುರ್‌ಆನ್ ಸಾರಿದೆ.

ಹಾಗಾದರೆ, ಈ ಲೋಕದಲ್ಲಿ ಇಂದು ಮುಸ್ಲಿಮರಿದ್ದಾರೆಯೇ? ಹೌದು. ತಾವು ಯಾವುದಾದರೊಂದು ಪಂಗಡಗಳಿಗೆ ಸೇರಿದವರೆಂದು ಹೇಳಿಕೊಳ್ಳದೆ, ಕುರ್‌ಆನಿನಲ್ಲಿರುವವುಗಳನ್ನು ಮಾತ್ರ ಅಲ್ಲಾಹನ ದೀನಿನ ಕಾನೂನುಗಳಾಗಿ ಪಾಲಿಸುವವರು ಮಾತ್ರ ಮುಸ್ಲಿಮರೆಂದು ಹೇಳಿಕೊಳ್ಳಲು ಅರ್ಹರಾದವರಾಗಿದ್ದಾರೆ. ಇಸ್ಲಾಂ ದೀನಿನ ಎರಡನೇ ಮೂಲವಾಗಿ ಅಂಗೀಕರಿಸಲ್ಪಡುವ ಹದೀಸ್ ಗ್ರಂಥಗಳು ಅಲ್ಲಾಹನನ್ನು, ಪ್ರವಾದಿಯವರನ್ನು ಅವಹೇಳಿಸುತ್ತದೆ ಮತ್ತು ಕುರ್‌ಆನನ್ನು ಹಾಗೂ ಸಾಮಾನ್ಯ ತಿಳುವಳಿಕೆಯನ್ನು ಪ್ರತಿಷೇಧಿಸುತ್ತದೆ.

ಹದೀಸ್ ಪುಸ್ತಕಗಳ ಕರ್ತರಾದ ಇಬ್ನೆ ಇಸಾಕ್, ವಾಕಿದಿ ಮತ್ತು ಇಬ್ನೆ ಹಿಶಾಮ್ ಎಂಬ ಕಪಟ ಯಹೂದಿ ಹಾಗೂ ಮಾಗೂಸ್ ಚರಿತ್ರಕಾರರು ಮತ್ತು ಝುರತುಷ್ಟ್ರ ಪಾರ್ಷಿಯನ್ನರು – ಅಲ್ಲಾಹನಿಂದ ಸಂರಕ್ಷಿಸಲ್ಪಟ್ಟ ಕೊನೆಯ ಅನುಶಾಸನವಾದ ಪವಿತ್ರವಾದ ಕುರ್‌ಆನಿನಿಂದ – ಮುಸ್ಲಿಮ್ ವಿದ್ವಾಂಸರೆಂದು ಕರೆಯಿಸಿಕೊಳ್ಳುವ ನಮ್ಮ ಬಹುದೇತ ಮುಲ್ಲಾಗಳನ್ನು ಯಶ್ವಸಿಯಾಗಿ ದಿಕ್ಕು ಬದಲಾಯಿಸಿ ಬಿಟ್ಟಿದ್ದಾರೆ – ಹಾಗೂ ಅವರು ನಮ್ಮ ಈ ದುರಾವಸ್ಥೆಯನ್ನು ನೋಡಿ ಹೊಟ್ಟೆ ತುಂಬಾ ನಗುತ್ತಿರಬೇಕು. ಆದರೆ, ಮುಸ್ಲಿಮರು ತಮ್ಮ ವಿವೇಕ, ಯುಕ್ತಿ ಹಾಗೂ ಸಾಮಾನ್ಯ ಜ್ಞಾನವನ್ನು ಮುಲ್ಲಾಗಳ ಪಾದದ ಕೆಳಗೆ ಮುಡಿಪಾಗಿಟ್ಟು ಅವರಿಗೆ ಸಂಪೂರ್ಣವಾಗಿ ಶರಣಾಗಿದ್ದಾರೆ. ಧಾರ್ಮಿಕ ಪುರೋಹಿತರೇ ಅಲ್ಲಾಹನ ದೀನಿನ ಉತ್ತರಾಧಿಕಾರಿಗಳು ಹಾಗೂ ಅವರು ಹೇಳುವುದೇ ಸತ್ಯವಾಗಿದೆ ಎಂಬ ರಾಜ್ಯಭಾರವನ್ನು ಅವರು ಸ್ಥಾಪಿಸಿ – ಅದನ್ನು ವಿರೋಧಿಸುವ ಅಥವಾ ಪ್ರಶ್ನಿಸುವವರನ್ನು ಸದೆಬಡೆಯಲು ತಮ್ಮ ಮೂರ್ಖ ಅಥವಾ ಮುಗ್ಧ ಅನುಯಾಯಿಗಳನ್ನು ಪ್ರಚೋದಿಸುವ ಮೂಲಕ - ಸಾಮಾನ್ಯ ಜನರಿಗೆ ತಮ್ಮ ಬುದ್ಧಿಶಕ್ತಿಯನ್ನು ಬಳಸುವ ಎಲ್ಲಾ ರೀತಿಯ ಹಕ್ಕನ್ನು ಕಬಳಿಸಿ – ಅಲ್ಲಾಹನ ದೀನನ್ನು ತಮ್ಮ ವಶದಲ್ಲಿಡುವ ಪುರೋಹಿತ ವರ್ಗದ ನೀಚ ರಾಜಕೀಯಕ್ಕೆ ನಮ್ಮ ಮುಸ್ಲಿಮ್ ಸಮಾಜವು ಬಲಿಯಾಗಿದೆ.

# ಇದೇನಿದು ಒಂದು ಹೊಸ ಸಂಗತಿ?

ಹದೀಸ್ ಪುಸ್ತಕಗಳ ವಾಸ್ತವಿಕತೆಯನ್ನು ಮುಸ್ಲಿಮರ ಮುಂದಿಟ್ಟಾಗ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಯಲ್ಲಿ ಇದೂ ಒಂದಾಗಿದೆ.

'ಇಷ್ಟರವರೆಗೆ ಕೇಳಿಬರದಂತಹ, ಶತಮಾನಗಳಿಂದ ವಂಶ-ಪಾರಂಪರ್ಯವಾಗಿ ನಡೆದು ಬಂದಂತಹ ಸಂಪ್ರದಾಯ, ಸಂಸ್ಕೃತಿ ಹಾಗೂ ಆಚರಣೆಗಳನ್ನೊಳಗೊಂಡಂತಹ ಈ ಧಾರ್ಮಿಕ ವ್ಯವಸ್ಥೆಯು ಸಮಗ್ರವಾಗಿ ಒಂದು ಕುತಂತ್ರವಾಗಿದೆ ಎಂದರೆ ಹೇಗೆ ನಂಬುವುದು?'

'ಯಾವುದೇ ವಿಷಯಗಳನ್ನು ಅಥವಾ ಸಿದ್ಧಾಂತಗಳನ್ನು ಪರಿಶೀಲನೆ ಮಾಡದೇ ಸ್ವೀಕರಿಸಬಾರದು' ಎಂದು ಕುರ್‌ಆನ್ ನಮಗೆ 17:36 ರಲ್ಲಿ ಎಚ್ಚರಿಕೆ ನೀಡಿದೆ. ಆದರೆ, ನಮ್ಮ ಧಾರ್ಮಿಕ ಮುಲ್ಲಾಗಳು, ತಾವು ಹೇಳುವುದನ್ನು ಕಣ್ಣುಮುಚ್ಚಿ, ಮರು ಪ್ರಶ್ನೆಯನ್ನು ಹಾಕದೆ ಅನುಸರಿಸಬೇಕು ಎಂದು ನೀಡಿರುವ ಅಪ್ಪಣೆಯನ್ನು ನಮ್ಮಲ್ಲಿ ಹೆಚ್ಚಿನವು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ಈ ಮೇಲಿನ ಪ್ರಶ್ನೆಯನ್ನು ಮುಂದಿಡುತ್ತಾರೆ. ಹಾಗೆ ಅವರು ತಮ್ಮ ಸಾಮಾನ್ಯ ಜ್ಞಾನ, ವಿವೇಕಶಕ್ತಿ ಹಾಗೂ ಬುದ್ಧಿವಂತಿಕೆಯನ್ನು ತಮ್ಮ ಧಾರ್ಮಿಕ ಮುಖಂಡರ ವಶಕ್ಕೆ ಅರ್ಪಿಸಿದ್ದಾರೆ. ಅದೇ ವಚನದ ಕೊನೆಯಲ್ಲಿ ಎಚ್ಚರಿಸಿರುವಂತೆ, 'ನಿಶ್ಚಯವಾಗಿಯೂ ನಿಮ್ಮ ದೃಷ್ಟಿ, ಶ್ರವಣ ಮತ್ತು ಮಿದುಳುಗಳು ಪ್ರಶ್ನಿಸಲ್ಪಡುವುದು' ಎಂಬುವುದೂ ಜ್ಞಾಪನೆಯಲ್ಲಿ ಇಡಬೇಕಾದ ಅಂಶವಾಗಿದೆ.

ಆದಾಗ್ಯೂ, ಈ ಕುತಂತ್ರವು ಪತ್ತೆ ಹಚ್ಚಿ ಅದನ್ನು ವಿರೋಧಿಸಲು ಪ್ರಾರಂಭಿಸಿರುವುದು ಇತ್ತೀಚಿನ ಸಂಗತಿಯೇನಲ್ಲ. ಶತಮಾನಗಳಿಂದೀಚೆಗೆ ಇದರ ವಿರುದ್ಧ ಹೋರಾಟವು ನಡೆಯುತ್ತಾ ಬಂದಿದೆ. ಈ ಮಿಥ್ಯ-ಧರ್ಮವನ್ನು ಅನುಷ್ಠಾನಗೊಳಿಸುವ ಅವಧಿಯಲ್ಲೇ ಇದನ್ನು ವಿರೋಧಿಸಿದವರ ಕತ್ತಿನಿಂದ ತಲೆಯನ್ನು ಬೇರ್ಪಡಿಸಲಾಗಿತ್ತು. ಆ ಕಠೋರ ಅನೀತಿಯು ಹಾಗೆಯೇ ಮುಂದುವರೆದು, ಪರ್ಷಿಯನ್-ಅರಬ್ ವಂಚಕ ಇಮಾಮರ ಅನುಯಾಯಿಗಳಾದ ಇಂದಿನ ಮುಲ್ಲಾಗಳು – ತಮ್ಮ ವ್ಯವಸ್ಥೆಯನ್ನು ವಿರೋಧಿಸಿದವರನ್ನು ಧರ್ಮಭ್ರಷ್ಟರೆಂದು ಘೋಷಿಸಿ - ಗಡಿಪಾರು, ಸೆರೆವಾಸ, ಕಲ್ಲುಹೊಡೆದು ಸಾಯಿಸುವುದು ಅಥವಾ ಸಾರ್ವಜನಿಕವಾಗಿ ಗಲ್ಲಿಗೇರಿಸುವುದು ಇತ್ಯಾದಿ ಶಿಕ್ಷೆಗಳನ್ನು ವಿಧಿಸುತ್ತಾ ಬಂದಿದ್ದಾರೆ. ಇಸ್ಲಾಮ್ ರಾಷ್ಟ್ರವೆಂದು ತಪ್ಪಾಗಿ ಕರೆಯಿಸಿಕೊಳ್ಳುವಂತಹ, ಸೌದಿ ಅರೇಬಿಯಾ, ಪಾಕಿಸ್ತಾನ, ಮಲೇಸಿಯಾ, ಈಜಿಪ್ಟ್ ಇತ್ಯಾದಿ ರಾಷ್ಟ್ರಗಳಲ್ಲಿ ಅಸಂಖ್ಯಾತ ನೈಜ್ಯ ಮುಸ್ಲಿಮರನ್ನು ವಿಚಾರಣೆಯ ವಿನಹ ಇಂತಹ ಅನಾಗರೀಕ ಹಾಗೂ ಅನಾಚಾರಿಕ ದಂಡನೆಗೆ ಒಳಪಡಿಸಿ ಕೊಲ್ಲಲಾಗುತ್ತಿದೆ.

ಹದೀಸ್ ಪುಸ್ತಕಗಳನ್ನು ವಿರೋಧಿಸಿದಂತಹ ಕೆಲವು ಕ್ರಾಂತಿಕಾರರ ಹೆಸರುಗಳು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. ದುರದೃಷ್ಟವಾಗಿ, ಸತ್ಯ ನುಡಿಯುವವರನ್ನು ಲೋಕವು ಸಕಾರಾತ್ಮಕವಾಗಿ ಸ್ವೀಕರಿಸುವುದಿಲ್ಲ.

ಬಹುಶಃ ಅವರು ಅಂತಹ ಔದಾರ್ಯವನ್ನು ನಿರೀಕ್ಷಿಸಲೂ ಇಲ್ಲ. ಆದಾಗ್ಯೂ, ಇವುಗಳಲ್ಲಿ ಹೆಚ್ಚಿನವುಗಳು ಜನಪ್ರಸಿದ್ಧ ಹೆಸರುಗಳೇ ಆಗಿವೆ:

- ಇಮಾಮ್ ಮೌನುದ್ದೀನ್ ಅಲ್ ಅಶ್ಅರೀ: ಹಿಜ್ರಿ 313-163– ಇರಾಕ್ - (ಶಿಲುಬೆಗೇರಿಸಲ್ಪಟ್ಟರು)
- ಇಮಾಮ್ ನಫೀಸ್ ಶೆರಿಸ್ತಾನಿ: ಹಿಜ್ರಿ 395-461 – ಅರೇಬಿಯಾ - (ಶಿಲುಬೆಗೇರಿಸಲ್ಪಟ್ಟರು)
- ಇಮಾಮ್ ಶರೀಕ್ ಅಲಾವಿ ಮುತಝಾಲಿ: ಹಿಜ್ರಿ 407-457– ಫಾಲಸ್ತೀನ್ - (ಗಲ್ಲಿಗೇರಿಸಲ್ಪಟ್ಟರು)
- ಇಮಾಮ್ ಅಲ್ ಶೈಖ್ ಮುಹಮ್ಮದ್ ತಾಹಿರ್ ಅಲ್ ಮಕ್ಕಿ: ಹಿಜ್ರಿ 417-460– (ಜೀವಂತ ಸುಡಲ್ಪಟ್ಟರು)
- ಇಮಾಮ್ ಅಬ್ದುಲ್ಲಾಹ್ ಝುಂಜಾನಿ: ಹಿಜ್ರಿ 459-610 – ಅರೇಬಿಯಾ - (ಗಲ್ಲಿಗೇರಿಸಲ್ಪಟ್ಟರು)
- ಇಮಾಮ್ ರಾಘಿಬ್ ಅಲ್ ಇಸ್ಫಹಾನಿ: ಕ್ರಿ.ಶ. 1327-1409 – ಪರ್ಷಿಯಾ – (ಶಿರಚ್ಛೇದಮಾಡಲ್ಪಟ್ಟರು).
- ಸರ್ ಸಯ್ಯದ್ ಅಹ್ಮದ್ ಖಾನ್: ಕ್ರಿ.ಶ. 1817-1898 – ಹಿಂದುಸ್ಥಾನ
- ಜಮಾಲುದ್ದೀನ್ ಅಫ್ಘಾನಿ: ಕ್ರಿ.ಶ. 1830-1899 – ಅಫ್ಘಾನಿಸ್ತಾನ
- ಖ್ವಾಜ ಅಲ್ತಾಫ್ ಹುಸೈನ್ ಹಾಲಿ: ಕ್ರಿ.ಶ. 1837-1914 – ಹಿಂದುಸ್ಥಾನ
- ಚಿರಾಗ್ ಅಲಿ: ಕ್ರಿ.ಶ. 1844-1895 – ಹಿಂದುಸ್ಥಾನ
- ಮುಫ್ತಿ ಮುಹಮ್ಮದ್ ಅಬ್ದುಲ್ಲಾಹ್: ಕ್ರಿ.ಶ. 1849-1906 – ಈಜಿಪ್ಟ್
- ಸಯ್ಯದ್ ಅಮೀರ್ ಅಲಿ: ಕ್ರಿ.ಶ. 1849-1928 – ಹಿಂದುಸ್ಥಾನ
- ಕಾಸಿಮ್ ಅಮಿನ್: ಕ್ರಿ.ಶ. 1863-1908 – ಈಜಿಪ್ಟ್
- ಹಮೀದುದ್ದೀನ್ ಫರಾಹಿ: ಕ್ರಿ.ಶ. 1863 – 1930 - ಹಿಂದುಸ್ಥಾನ
- ಅಲ್ಲಾಮ ಉಬೈದುಲ್ಲಾಹ್ ಸಿಂಧಿ: ಕ್ರಿ.ಶ. 1872-1944 – ಹಿಂದುಸ್ಥಾನ
- ಅಲ್ಲಾಮ ಇಕ್ಬಾಲ್: ಕ್ರಿ.ಶ. 1877-1938 – ಹಿಂದುಸ್ಥಾನ/ಪಾಕಿಸ್ತಾನ

- ಮುಹಮ್ಮದ್ ತೌಫೀಕ್ ಸಿದ್ಕಿ: ಕ್ರಿ.ಶ. 1881-1920 – ಲೆಬನಾನ್
- ಮುಹಮ್ಮದ್ ಅಸ್ಲಮ್ ಜಯರಾಜಪುರಿ: ಕ್ರಿ.ಶ. 1882-1955 – ಹಿಂದುಸ್ಥಾನ
- ಇಮಾಮ್ ಅಹ್ಮದ್ ಅಮೀನ್ ತಾಹಿರ್ ಅಲ್ ಮಸ್ರಿ: ಕ್ರಿ.ಶ. 1883-1953 - ಈಜಿಪ್ಟ್ – (ಜೈಲಿನಲ್ಲಿ ಚಿತ್ರಹಿಂಸೆ ನೀಡಿ ಕೊಲ್ಲಲ್ಪಟ್ಟರು)
- ಅಲ್ಲಾಮ ರಶೀದ್ ರಿಧಾ: ಕ್ರಿ.ಶ. 1887-1914 – ಇರಾನ್
- ಅಲ್ಲಾಮ ಹಬೀಬುರ್ರಹ್ಮಾನ್ ಕಂಧಲ್ವಿ: ಕ್ರಿ.ಶ. 1887-1957 – ಹಿಂದುಸ್ಥಾನ
- ಅಲ್ಲಾಮ ಇನಾಯತುಲ್ಲಾಹ್ ಮಶ್ರಿಕಿ: ಕ್ರಿ.ಶ. 1888-1964 – ಹಿಂದುಸ್ಥಾನ
- ಅಲ್ಲಾಮ ತಮನ್ನಾ ಇಮಾದಿ: ಕ್ರಿ.ಶ.1895-1961 – ಹಿಂದುಸ್ಥಾನ
- ಮುಹಮ್ಮದ್ ಅಸಾದ್ ಲಿಯೋಪೋಲ್ಡ್ ವೈಸ್: ಕ್ರಿ.ಶ. 1900-1992 – ಆಸ್ಟ್ರಿಯಾ
- ಫಾಝಿಲ್ ದೀನಿಯಾತ್ ಘುಲಾಮ್ ಜೀಲಾನಿ ಬರ್ಕ್: ಕ್ರಿ.ಶ. 1901-1983 – ಹಿಂದುಸ್ಥಾನ
- ಅಲ್ಲಾಮ ಜಿ. ಎ. ಪರ್ವೇಝ್: ಕ್ರಿ.ಶ. 1903-1985 – ಹಿಂದುಸ್ಥಾನ/ಪಾಕಿಸ್ತಾನ
- ಅಮೀನ್ ಅಹ್ಸನ್ ಇಸ್ಲಾಹಿ: ಕ್ರಿ.ಶ. 1904-1997 - ಹಿಂದುಸ್ಥಾನ/ಪಾಕಿಸ್ತಾನ
- ಡಾ. ಮೌರಿಸ್ ಬುಕ್ಕೈಲ್ ಅಬುಸ್ಸಲಾಮ್: ಕ್ರಿ.ಶ. 1911-1989 – ಫ್ರಾನ್ಸ್
- ಫಾಝಿಲ್ ಉಲೂಮ್ ದೀನಿಯ್ಯ ಮಸೂದುದ್ದೀನ್ ಉಸ್ಮಾನಿ: ಕ್ರಿ.ಶ. 1919-1985 – ಹಿಂದುಸ್ಥಾನ
- ಡಾ. ರಾಶದ್ ಖಲೀಫ: ಕ್ರಿ.ಶ. 1935-1990 – ಈಜಿಪ್ಟ್ - (ಕೊಲೆಗೈಯ್ಯಲ್ಪಟ್ಟರು)
- ಚೇಗನ್ನೂರ್ ಮೌಲವಿ: ಕ್ರಿ.ಶ. 1936-1993 – ಹಿಂದುಸ್ಥಾನ – (ಕುತಂತ್ರದಿಂದ ಅಪಹರಿಸಿ ಕೊಲೆಗೈಯ್ಯಲ್ಪಟ್ಟರು)
- ಇಮಾಮ್ ಮುಫ್ತಿ ವೆಹ್ಬಿ ಇಸ್ಮಾಯೀಲ್: ಕ್ರಿ.ಶ. 1917-2002 – ಅಲ್ಬಾನಿಯಾ
- ಮುಜ್ತಹಿದ್ ಇಮಾಮ್ ಅಲ್ ಹುಸೈನಿ: ಕ್ರಿ.ಶ. 1919-2006 – ಇರಾನ್
- ಅಬ್ದು-ಸ್ಸತ್ತಾರ್ ಘೌರಿ: ಕ್ರಿ.ಶ. 1935 - ಪಾಕಿಸ್ತಾನ

- ಡಾ. ಶಬ್ಬೀರ್ ಅಹ್ಮದ್: ಕ್ರಿ.ಶ. 1947 – ಪಾಕಿಸ್ತಾನ
- ಜಾವೆದ್ ಅಹ್ಮದ್ ಘಮೀದಿ: ಕ್ರಿ.ಶ. 1951 - ಪಾಕಿಸ್ತಾನ
- ಡಾ. ಖಾಲಿದ್ ಝುಹೀರ್: ಕ್ರಿ.ಶ. 1951 - ಪಾಕಿಸ್ತಾನ
- ಶೆಹಝಾದ್ ಸಲೀಮ್: ಕ್ರಿ.ಶ. 1953 - ಪಾಕಿಸ್ತಾನ
- ಮುಹಮ್ಮದ್ ರಫೀ ಮುಫ್ತಿ: ಕ್ರಿ.ಶ. 1953 - ಪಾಕಿಸ್ತಾನ
- ತಾಲಿಬ್ ಮೊಹ್ಸಿನ್: ಕ್ರಿ.ಶ. 1959 - ಪಾಕಿಸ್ತಾನ
- ಮೊಯಿಝ್ ಅಮ್ಜದ್: ಕ್ರಿ.ಶ. 1962 - ಪಾಕಿಸ್ತಾನ
- ಸಾಜಿದ್ ಹಮೀದ್ ಸಾಜಿದ್ ಶಹಬಾಝ್ ಖಾನ್: ಕ್ರಿ.ಶ. 1965 - ಪಾಕಿಸ್ತಾನ
- ಆಸಿಫ್ ಇಫ್ತಿಕಾರ್: ಕ್ರಿ.ಶ. 1966 - ಪಾಕಿಸ್ತಾನ
- ಡಾ. ಅಸರುಲ್ ಇಸ್ಲಾಮ್ ಸಯ್ಯದ್: ಪಾಕಿಸ್ತಾನ
- ಅಬ್ದುಲ್ಲಾಹ್ ಚಕ್ರಲಾವಿ: ಮರಣ - ಕ್ರಿ.ಶ. 1930 - ಪಾಕಿಸ್ತಾನ
- ಡಾ. ಖಮರ್ ಝುಮಾನ್: ಪಾಕಿಸ್ತಾನ

# ಕೆಲವು ಮಹತ್ವವುಳ್ಳ ಕುರ್‌ಆನ್ ವಚನಗಳು

- ✓ ಇದು (ಕುರ್‌ಆನ್) ಸಂದೇಹಾತೀತವಾದ ಗ್ರಂಥವಾಗಿದೆ. (2:2)
- ✓ ಕುರ್‌ಆನನ್ನು ವಿವರಿಸುವ ಜವಾಬ್ದಾರಿಯನ್ನು ಸ್ವತಃ ಅಲ್ಲಾಹನೇ ತೆಗೆದುಕೊಂಡಿದ್ದಾನೆ. (75:19)
- ✓ ಅಲ್ಲಾಹನೇ ಕುರ್‌ಆನನ್ನು ಅವತೀರ್ಣಗೊಳಿಸಿದ್ದಾನೆ ಹಾಗೂ ಅವನೇ ಅದನ್ನು ಸಂರಕ್ಷಿಸುತ್ತಾನೆ. (15:9)
- ✓ ಅಲ್ಲಾಹನ ಕಡೆಯಿಂದ ಪ್ರವಾದಿಗೆ ತಲುಪುವ ಅವತೀರ್ಣಗಳು ಈ ಕುರ್‌ಆನಿನಲ್ಲಿಯೇ ದಾಖಲೆಗೊಂಡಿದೆ (6:19). ಪ್ರವಾದಿಗೆ ಅಲ್ಲಾಹನಿಂದ ಬಂದಿರುವ ಅವತೀರ್ಣಗಳು ಕುರ್‌ಆನಿನ ಹೊರಗೂ ಇದೆ ಎಂಬ ಒಂದೇ ಒಂದು ವಚನವು ಕುರ್‌ಆನಿನಲ್ಲಿಲ್ಲ.
- ✓ ಪ್ರವಾದಿಯವರಿಗೆ ತಮ್ಮ ಕಡೆಗೆ ತಲುಪುವ ಅವತೀರ್ಣವನ್ನು ಅನುಸರಿಸುವಂತೆ ಆಜ್ಞಾಪಿಸಲಾಗಿದೆ. (10:109, 75:18, 6:155)
- ✓ ಅಲ್ಲಾಹನಿಂದಿರುವ ಅವತೀರ್ಣವನ್ನು ಅನುಸರಿಸಲು ವಿಶ್ವಾಸಿಗಳಿಗೆ ಆಜ್ಞಾಪಿಸಲಾಗಿದೆ. (7:3)
- ✓ ಪ್ರವಾದಿಯವರು ತಮಗೆ ಅವತೀರ್ಣಗೊಳಿಸಿರುವುದರ ಆಧಾರದಲ್ಲಿ ವಿಷಯಗಳನ್ನು ತೀರ್ಮಾನಿಸುತ್ತಿದ್ದರು. (5:48)
- ✓ "ಅಲ್ಲಾಹನು ಅವತೀರ್ಣಗೊಳಿಸಿರುವುದರ ಆಧಾರದಲ್ಲಿ ವಿಷಯಗಳನ್ನು ತೀರ್ಮಾನಿಸದವರು ಸತ್ಯನಿಷೇಧಿಗಳಾಗಿದ್ದಾರೆ." (5:44)
- ✓ ಅಲ್ಲಾಹನು ತನ್ನ ಸಂದೇಶವನ್ನು ಕುರ್‌ಆನಿನಲ್ಲಿಯೇ ಸಂಪೂರ್ಣಗೊಳಿಸಿದ್ದಾನೆ ಮತ್ತು ಅದರಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಯಾರಿಗೂ ಸಾಧ್ಯವಿಲ್ಲ. (6:34, 6:115)
- ✓ ಕುರ್‌ಆನ್ ಹಿಂದಿನ ಗ್ರಂಥಗಳ ಸಂದೇಶವನ್ನೂ ಒಳಗೊಂಡಿದೆ (5:48). ಆದುದರಿಂದ, ಹಿಂದಿನ ಗ್ರಂಥಗಳಲ್ಲಿದ್ದ ಸಂದೇಶವು ಈಗ ಕುರ್‌ಆನಿನಲ್ಲಿದೆ.
- ✓ ಕುರ್‌ಆನಿನಲ್ಲಿ ವೈರುಧ್ಯಗಳಿಲ್ಲ. (4:82)
- ✓ ಅಲ್ಲಾಹನು ಕುರ್‌ಆನನ್ನು, '*ತಿಬ್ಯಾನನ್ ಲಿಕುಲ್ಲಿ ಶೈಯಿನ್*' ಎಂದು ಕರೆದಿದ್ದಾನೆ (16:89). ಅಂದರೆ, ಈ ಕುರ್‌ಆನ್ ವಿವರಿಸುತ್ತದೆ.
- ✓ ಅಭಿಪ್ರಾಯ ವ್ಯತ್ಯಾಸಗಳನ್ನು ಪ್ರವಾದಿಯವರು ಕುರ್‌ಆನಿನ ಮೂಲಕವೇ ಪರಿಹರಿಸಬೇಕಾಗಿತ್ತು (16:64).
- ✓ ಪ್ರವಾದಿಯವರು ಕುರ್‌ಆನಿನ ಮೂಲಕವೇ ಜನರಿಗೆ ಎಚ್ಚರಿಕೆ ಹಾಗೂ ಜ್ಞಾಪನೆಯನ್ನು ನೀಡಬೇಕಾಗಿತ್ತು (50:45).
- ✓ ಕುರ್‌ಆನ್ ಸ್ವತಃ ಪ್ರಕಾಶವಾಗಿದೆ (5:15). ಆದುದರಿಂದ, ಅದು ಇನ್ನೊಂದು ಪ್ರಕಾಶದ ಮೂಲದ ಮೇಲೆ ಆಧರಿತವಾಗಿಲ್ಲ.
- ✓ ಜನರು ಜೀವನದ ಹಾದಿಯಲ್ಲಿ ಸುರಕ್ಷಿತವಾಗಿ ಸಾಗಲೆಂದು ಈ ಪ್ರಕಾಶವನ್ನು (ಕುರ್‌ಆನನ್ನು) ಜನರಿಗೆ ನೀಡಲಾಗಿದೆ (6:112).

# ಸಮಾರೋಪ

ಸಹೋದರ ಸಹೋದರಿಯರೇ, ನಮ್ಮ ನೈಜ್ಯ ಶತ್ರುವನ್ನು ಗುರುತಿಸಲು ಪ್ರಯತ್ನಿಸಿ. 1200 ವರ್ಷಗಳಿಂದ ನಮ್ಮ ನೈಜ್ಯ ಶತ್ರು ಯಾರು?

ಝುರತುಷ್ಟ್ರ ಯಹೂದಿಗಳು ಮತ್ತು ಪರ್ಷಿಯನ್ ಕ್ರೂಸೇಡರರು ಎಂದಿಗೂ ನಮ್ಮ ವೈರಿಗಳಾಗಿದ್ದಾರೆಂದು ನಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಆದರೆ, ನಾವು ಕೇಳುತ್ತಿರುವುದು, ನಮ್ಮ ಮುಸ್ಲಿಮ್ ಸಮಾಜದಲ್ಲೇ ಅಡಗಿರುವ ಅತ್ಯಂತ ಅಪಾಯಕಾರಿ ಶತ್ರುವಿನ ಬಗ್ಗೆ. ಆ ಶತ್ರುವು ಕಳೆದ 12 ಶತಮಾನಗಳಿಂದ, ನೈಜ್ಯ ಇಸ್ಲಾಮನ್ನು ಧ್ವಂಸ ಹಾಗೂ ವಿರೂಪಗೊಳಿಸುತ್ತಾ ಬಂದಿದ್ದಾರೆ. ಅವರು **ಮತಪಂಡಿತರು** ಅಥವಾ **ಮುಲ್ಲಾಗಳು** ಎಂದು ಕರೆಯಲ್ಪಡುವ ಅಂಧವಿಶ್ವಾಸಿಗಳಾದ ಅಜ್ಞಾನಿ ಮತಭ್ರಾಂತರಾಗಿದ್ದಾರೆಂದು ನಾವು ಪ್ರಾಮಾಣಿಕವಾಗಿ ಹೇಳಬಹುದು.

ಓ ಬುದ್ಧಿಜೀವಿಗಳೇ, ನೀವು ಕುರ್‌ಆನನ್ನು ಅನುಸರಿಸುತ್ತಿರುವಿರಾದರೆ, ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಅನುಸರಿಸಿದಂತಾಗುತ್ತದೆ. ಏಕೆಂದರೆ, ಕುರ್‌ಆನ್ ಅಲ್ಲಾಹನ ಅತ್ಯುತ್ತಮ ಹದೀಸ್ ಆಗಿದೆ (39:23) ಮತ್ತು ಸಂದೇಶವಾಹಕರ ಏಕೈಕ ವಿಶ್ವಾಸಾರ್ಹ ಸಂದೇಶವಾಗಿದೆ. ಆದರೆ, ಸಂದೇಶವಾಹಕರ ಮರಣದ 200-300 ವರ್ಷಗಳ ನಂತರ ಪರ್ಷಿಯನ್ ಝುರತುಷ್ಟ್ರ ಇಮಾಮರು ಸಂಗ್ರಹಿಸಿದ ಎರಡು ಮಿಲಿಯನ್ ಹದೀಸುಗಳಿಂದ ನೀವು ಮಾರ್ಗದರ್ಶನವನ್ನು ಹುಡುಕುತ್ತೀರಾದರೆ, ನೀವು ನೈಜ್ಯ ಇಸ್ಲಾಮನ್ನು ಅನುಸರಿಸುತ್ತಿಲ್ಲ - ಬದಲಿಗೆ, ಪರ್ಷಿಯನ್ ಮುದ್ರೆಯುಳ್ಳ ಕೃತಕ ಇಸ್ಲಾಮನ್ನು ಅನುಸರಿಸುತ್ತಿದ್ದೀರಿ ಎಂದು ತಿಳಿದುಕೊಳ್ಳಿರಿ.

ಮತಪಂಡಿತರು ಇಸ್ಲಾಮಿನ ಹೆಸರಿನಲ್ಲಿರುವ 'ಪರ್ಷಿಯನ್-ಅರಬ್ ಧರ್ಮ'ವನ್ನು ಹಾಗೂ ಅದರ ಸಾಂಪ್ರದಾಯಿಕ ವಿಧಿಗಳನ್ನು ಪ್ರಶ್ನಿಸುವವರನ್ನು ಶತಮಾನಗಳಿಂದ ನಿರ್ನಾಮಗೊಳಿಸುತ್ತಾ ಬಂದಿದ್ದಾರೆ. ಇದಕ್ಕಿರುವ ಪ್ರಮುಖವಾದ ಕಾರಣವು ಏನೆಂಬುವುದು ನಮಗೆಲ್ಲರಿಗೂ ಪತ್ತೆ ಹಚ್ಚಬಹುದಾದ ಸಂಗತಿಯೇ ಆಗಿದೆ. ಅದೇನೆಂದರೆ, ಈ ಸತ್ಯವನ್ನು ಯಾವತ್ತೂ ಬಯಲುಗೊಳಿಸಲಾರರು. ಏಕೆಂದರೆ, ಅವರು ಸತ್ಯವನ್ನು ಬಹಿರಂಗವಾಗಿ ಹೇಳಿಬಿಟ್ಟರೆ ತಮ್ಮ ಕಾಲಿಗೆ ತಾವೇ ಕೊಡಲಿ ಹೊಡೆದಂತಾಗುವುದು. ಅಂದರೆ, ಅವರು <u>ಪುರೋಹಿತಶಾಹಿತ್ವವನ್ನು</u> ತಮ್ಮ ವೃತ್ತಿಜೀವನವಾಗಿ ಆರಿಸಿಕೊಂಡಿದ್ದಾರೆ. ಅವರಿಗೆ ಅದರಲ್ಲಿ ತಮ್ಮ ಜೀವನೋಪಾಯ ಮಾರ್ಗವು ಮಾತ್ರವಲ್ಲದೆ, ಗಣತೆ ಗೌರವವೂ ಲಭಿಸುತ್ತದೆ. ಯಾರೇ ಆಗಲಿ, ತಮ್ಮ ವೃತ್ತಿಗೆ ಅಥವಾ ವ್ಯವಹಾರಗಳಿಗೆ ದುಷ್ಪರಿಣಾಮ ಬೀರುವಂತಹ ಯಾವುದೇ ಸಾಧ್ಯತೆಗಳನ್ನು ಸಹಜವಾಗಿ ಎದುರಿಸಲು ಮತ್ತು ತೊಲಗಿಸಲು ಪರಮಾವಧಿಯ ಪ್ರಯತ್ನವನ್ನು ಮಾಡುತ್ತಾರೆ. ನಮ್ಮ ಪುರೋಹಿತರು ಸಹ ತಮ್ಮ ಅಂಧ ಅನುಯಾಯಿಗಳನ್ನು ದುರ್ಬಳಕೆ ಮಾಡುವ ಮೂಲಕ ಅದನ್ನೇ ಮಾಡುತ್ತಿದ್ದಾರೆ. ಆದರೆ, ಅವರು ಆಟವಾಡುತ್ತಿರುವುದು ನಮ್ಮ ಜೀವನದ ಜೊತೆಗಾದಿದೆ. ಕುರ್‌ಆನ್ ಹೇಳುತ್ತದೆ, *'ನಿಮ್ಮಿಂದ ಯಾವುದೇ ವೇತನವನ್ನು ಯಾಚಿಸದ ಹಾಗೂ ಸ್ವತಃ ನೇರ ಮಾರ್ಗದಲ್ಲಿರುವವರನ್ನು ಅನುಸರಿಸಿರಿ.'* (36:21)

ಅರಿತುಕೊಳ್ಳಿರಿ:

**‘ಕುರ್ಆನಿನಲ್ಲಿ ಯಾವುದನ್ನು ಕಡ್ಡಾಯಗೊಳಿಸಲಿಲ್ಲವೋ,**

**ಅವುಗಳು ಇಸ್ಲಾಮಿನಲ್ಲೂ ಕಡ್ಡಾಯವಲ್ಲ’**

ಹಾಗೆಯೇ,

ಕುರ್ಆನಿನ 5:44 ರ ಪ್ರಕಾರ

**ಹದೀಸ್ ಅನುಯಾಯಿಗಳು ಸತ್ಯನಿಷೇಧಿಗಳಾಗಿದ್ದಾರೆ.**